Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–17 | ಏಪ್ರಿಲ್ 22–28, 2024 | ಪುಟ 16 | ರೂ.10/–
Volume-18 | Issue-17 | April 22-28, 2024 | Pages:16 | Price: 10/-



ಕಾರ್ಪೊರೇಟ್ ಲೂಟಿಯನ್ನು ತಡೆಯಲು ಇದು ಸಕಾಲ





ಇಸ್ರೇಲ್ ಯುದ್ಧವನ್ನು ಇನ್ನಷ್ಟು ವ್ಯಾಪಕಗೊಳಿಸುವುದೇ?

ನೇಹಾಳ ಅಮಾನುಷ ಹತ್ಯೆ: ಪಾಳೇಗಾರಿ ಮನೋಭಾವದ ಕ್ರೌರ್ಯ



ಶೋಮಾ ಸೇನ್ ಪ್ರಕರಣ: ನ್ಯಾಯಾಂಗ ಎದೆಗಾರಿಕೆ ತೋರಲಿ

ಪರಿಸರ ಸಂರಕ್ಷಣೆಯಲ್ಲಿ ವಿಫಲತೆ:

‘ನಮಾಮಿ ಗಂಗೆ’: ಜಗತ್ತಿನ ಅತಿ ಮಾಲಿನ್ಯಭರಿತ 20ರಲ್ಲಿ 15 ನಗರಗಳು ಗಂಗಾ ಬಯಲಿನವು



ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಘೋಷಣೆಗಳು

“ನಮಗೆ ಪರಿಸರ ಸಂರಕ್ಷಣೆ ಎಂಬುದು ನಂಬಿಕೆಯ ವಿಷಯ. ನಮ್ಮ ಹಿಂದಿನ ತಲೆಮಾರಿನವರು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಿದ್ದರಿಂದಾಗಿಯೇ ನಾವೀಗ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದ್ದೇವೆ. ನಾವು ನಮ್ಮ ಮುಂದಿನ ಪೀಳಿಗೆಯವರಿಗಾಗಿ ಅದನ್ನೇ ಮಾಡಬೇಕಾಗಿದೆ.” – ನರೇಂದ್ರ ಮೋದಿ.

‘ಅರಣ್ಯ ವ್ಯಾಪ್ತಿ ಅಥವಾ ಅರಣ್ಯ ಹೊದಿಕೆಯನ್ನು ವಿಸ್ತರಿಸಲಾಗುವುದು’ ಮತ್ತು ‘ಅರಣ್ಯವಾಸಿಗಳ ಅದರಲ್ಲೂ ನಿರ್ದಿಷ್ಟವಾಗಿ ಬುಡಕಟ್ಟು ಸಮುದಾಯಗಳ ಹಿತಾಸಕ್ತಿಗಳನ್ನು ರಕ್ಷಿಸಲಾಗುವುದು ಮತ್ತು ಪ್ರೋತ್ಸಾಹಿಸಲಾಗುವುದು.’

102 ನಗರಗಳಲ್ಲಿ ವಾಯುಮಾಲಿನ್ಯ ಪ್ರಮಾಣವನ್ನು ಶೇ.35 ರಷ್ಟು ಕಡಿಮೆ ಮಾಡಲಾಗುವುದು.

ಹಿಮಾಲಯ ಮತ್ತು ದ್ವೀಪಗಳ ರಕ್ಷಣೆ–2019 ರ ಬಿಜೆಪಿಯ ಚುನಾವಣಾ ಪ್ರಣಾಳಿಕೆ.

ವಾಸ್ತವ

2014–19 ರ ಅವಧಿಯಲ್ಲಿ ಪರಿಸರಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಶಾಸನಾತ್ಮಕ ಮತ್ತು ಆಡಳಿತಾತ್ಮಕ ಕ್ರಮಗಳು, ಈ ಎರಡೂ ವಿಧಾನಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಯಿತು. ಅರಣ್ಯವನ್ನು ಗಣಿಗಾರಿಕೆಗೆ ಮತ್ತು ಮೂಲಭೂತ ಸೌಕರ್ಯ ನಿರ್ಮಾಣದ ಯೋಜನೆಗಳಿಗಾಗಿ ಮುಕ್ತವಾಗಿ ತೆರೆದಿಡಲಾಯಿತು. ಅದರಲ್ಲಿಯೂ ಈ ವಲಯದಲ್ಲಿ ಇತ್ತೀಚೆಗೆ ಪರವಾನಗಿಯನ್ನು ಪಡೆದ ಕಾರ್ಪೋರೇಟ್ ಕಂಪನಿಗಳಿಗೆ ಮುಕ್ತವಾಗಿ ತೆರೆದಿಡಲಾಯಿತು.

ಕಳೆದ ಐದು ವರ್ಷಗಳ ಅವಧಿಯಲ್ಲಿ ಪರಿಸರ ಸಂಬಂಧಿ ಕಾನೂನುಗಳ ಮೇಲೆ ನಿರಂತರ ದಾಳಿ ನಡೆಸುತ್ತಾ ಬರಲಾಗಿದೆ. ಇದರಿಂದ ಸಸ್ಯ ಸಂಕುಲ ಹಾಗೂ ಪ್ರಾಣಿ ಸಂಕುಲ ಸೇರಿದಂತೆ ಒಟ್ಟಾರೆ ಪರಿಸರ ವ್ಯವಸ್ಥೆಗೆ ಅಗಾಧವಾದ ಹಾನಿಯಾಗಿದೆ. ಇದಲ್ಲದೇ ಮಿಲಿಯಾಂತರ ಅಂಚಿನಲ್ಲಿರುವ–ಅವಕಾಶವಂಚಿತ ಜನರ ಜೀವನಾಧಾರ–ಹೊಟ್ಟೆಪಾಡಿನ ಮೇಲೆ ಗಣನೀಯವಾದ ದುಷ್ಪರಿಣಾಮ ಬೀರಿದೆ.

ಅರಣ್ಯ ವ್ಯಾಪ್ತಿ/ಅರಣ್ಯ ಹೊದಿಕೆ

ಬಿಜೆಪಿ ಸರಕಾರವು ತನ್ನ ನೀತಿಗಳು ಅರಣ್ಯ ವ್ಯಾಪ್ತಿ ಅಥವಾ ಅರಣ್ಯ ಹೊದಿಕೆಗೆ ಸಂಬಂಧಿಸಿದಂತೆ ಗಂಭೀರವಾದ ಹಾನಿಯನ್ನು ಮಾಡಿದೆ ಮತ್ತು ಮುಂದೆ ಮಾಡಲಿದೆ ಎಂಬುದನ್ನು ಮರೆಮಾಚಲು ಇದಕ್ಕೆ ಸಂಬಂಧಿಸಿದ ಮಾಹಿತಿ, ಅಂಕಿ–ಸಂಖ್ಯೆಗಳನ್ನು ಇನ್ನಿಲ್ಲದಂತೆ ತಿರುಚಿದೆ. ಭಾರಿ ಪ್ರಮಾಣದ ಅರಣ್ಯ ಪ್ರದೇಶಗಳು ಈಗಾಗಲೇ ನಾಶವಾಗಿವೆ. ಇದರಿಂದ ಅರಣ್ಯವಾಸಿಗಳಿಗೆ ಮತ್ತು ಜೀವ ವೈವಿಧ್ಯಕ್ಕೆ ಮತ್ತು ವನ್ಯಜೀವಿಗಳಿಗೆ, ಪರಸ್ಪರ ಒಂದಕ್ಕೊಂದು ಹೆಣೆದುಕೊಂಡ–ಪರಸ್ಪರ ಅವಲಂಬಿತವಾದ ‘ಪರಿಸರ ವ್ಯವಸ್ಥೆ’ಗೆ ಅಪಾರ ಹಾನಿ ಉಂಟಾಗಿದೆ.

ಬುಡಕಟ್ಟು ಜನರ ಅರಣ್ಯಭೂಮಿ

ಭಾರತದ ಅರಣ್ಯ ಸ್ಥಿತಿಗತಿ ವರದಿ–2021(ಐ.ಎಸ್.ಎಫ್.ಆರ್.)ಯು ಅರಣ್ಯವೆಂದು ದಾಖಲಾದ ಪ್ರದೇಶದೊಳಗೆ ಅತ್ಯಂತ ನಗಣ್ಯ ಪ್ರಮಾಣದಲ್ಲಿ ಅರಣ್ಯ ಹೊದಿಕೆಯು ವಿಸ್ತರಣೆಯಾಗಿದೆ ಎಂಬುದನ್ನು ತೋರಿಸುತ್ತಿದೆ. ಯಾವುದೇ ಅರಣ್ಯ ಅಥವಾ ಮರಗಳ ಹೊದಿಕೆಯಲ್ಲಿನ ವಿಸ್ತರಣೆಯು ಕೇಂದ್ರ ಅಥವಾ ರಾಜ್ಯದ ದಾಖಲೆಗಳಲ್ಲಿ ಅರಣ್ಯವೆಂದು ದಾಖಲಾದ ಪ್ರದೇಶದ ಹೊರಗೆ, ಮುಕ್ತ ಅರಣ್ಯದಲ್ಲಿ ಆಗಿದೆ. ಸರಕಾರವು ಅರಣ್ಯ(ಸಂರಕ್ಷಣೆ) ಕಾಯ್ದೆಗೆ ತಿದ್ದುಪಡಿಗಳನ್ನು ತರುವ ಮೂಲಕ ಇವುಗಳನ್ನು ಅರಣ್ಯೇತರ ಬಳಕೆಗೆ ನೀಡಲು ಗರಿಷ್ಟ ಪ್ರಯತ್ನಗಳನ್ನು ಮಾಡಿದೆ.

ಒಟ್ಟು ಅರಣ್ಯದ ಶೇ.60 ರಷ್ಟು ಮತ್ತು ದಟ್ಟ ಅರಣ್ಯದ ಶೇ.70 ರಷ್ಟು, ಸಂವಿಧಾನದ 5ನೇ(V) ಶೆಡ್ಯೂಲ್ ನಲ್ಲಿ ಪಟ್ಟಿ ಮಾಡಲಾಗಿರುವ ಮತ್ತು ‘ಐ.ಎಸ್.ಎಫ್.ಆರ್.–2021’ ರಲ್ಲಿ ‘ಬುಡಕಟ್ಟು’ ಎಂದು ಪಟ್ಟಿ ಮಾಡಲಾಗಿರುವಲ್ಲಿ ಬರುತ್ತದೆ. ಹೀಗಾಗಿ ಇದು ನೇರವಾಗಿ ಬುಡಕಟ್ಟು ಮತ್ತು ಇತರ ಅರಣ್ಯವಾಸಿಗಳ ಜೀವನ, ಜೀವನೋಪಾಯ ಹಾಗೂ ಆವಾಸಸ್ಥಾನಗಳ ಮೇಲೆ ಅತಿಕ್ರಮಣವನ್ನು ನಡೆಸುತ್ತದೆ.

‘ಪರಿಸರ ಪರಿಣಾಮ ಮೌಲ್ಯಮಾಪನ(ಇ.ಐ.ಎ.)’ ಕಾಯ್ದೆಗೆ ತಂದಿರುವ ತಿದ್ದುಪಡಿಗಳಿಂದಾಗಿ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಯೋಜನೆಗಳಲ್ಲದೇ, ದೊಡ್ಡ ಸಂಖ್ಯೆಯಲ್ಲಿ ವಿದ್ಯುತ್ ಸಾಗಣೆ ಮಾರ್ಗ, ತೈಲ/ಅನಿಲ ಸಾಗಣೆ ಮಾರ್ಗ, ಹೆದ್ದಾರಿಗಳು, ಸಣ್ಣ ಪ್ರಮಾಣದ ಗಣಿಗಾರಿಕೆ ಯೋಜನೆಗಳು ಮತ್ತು ಇತರ ಮೂಲಭೂತ ಸೌಕರ್ಯ ಮುಂತಾದ ಯೋಜನೆಯ ವಿಧಗಳು ಈಗ, ‘ಪಾರಿಸಾರಿಕ ಅನುಮತಿ’ ಪಡೆಯುವುದರಿಂದ ವಿನಾಯತಿ ಪಡೆದುಕೊಂಡಿವೆ.

ವಾಯು ಮಾಲಿನ್ಯ ತಡೆಯುವುದರಲ್ಲಿನ ವೈಫಲ್ಯ

ಭಾರತದ ನಗರಗಳು ಅದರಲ್ಲೂ ನಿರ್ದಿಷ್ಟವಾಗಿ ಉತ್ತರ ಭಾರತದ ‘ಇಂಡೋ–ಗಂಗಾ ಬಯಲು’ ಈಗ ಜಗತ್ತಿನಲ್ಲೇ ಅತ್ಯಂತ ಮಾಲಿನ್ಯಭರಿತ ಪ್ರದೇಶಗಳಾಗಿವೆ. ಜಗತ್ತಿನ 20 ಅತ್ಯಂತ ಮಾಲಿನ್ಯಭರಿತ ನಗರಗಳಲ್ಲಿ 15 ನಗರಗಳು ಈ ಪ್ರದೇಶದವೇ ಆಗಿ ವರ್ಷ ವರ್ಷವೂ ಸ್ಥಾನ ಪಡೆದುಕೊಳ್ಳುತ್ತಿವೆ. ಈ ಪರಿಸ್ಥಿತಿಯನ್ನು ಬದಲಿಸಲು ಏನೂ ಮಾಡಲಾಗಿಲ್ಲ.

ಹಿಮಾಲಯವನ್ನು ನಾಶಪಡಿಸುತ್ತಿರುವುದು

ಕೇಂದ್ರ ಸರಕಾರದ ವಿನಾಶಕಾರಿ ‘ಅಭಿವೃದ್ಧಿ’ ಕಣ್ಣೋಟವು, ದುರ್ಬಲವಾದ ಪಶ್ಚಿಮ ಹಿಮಾಲಯ ಪ್ರದೇಶದಲ್ಲಿ ವಿಧ್ವಂಸಕ ಪರಿಣಾಮಗಳನ್ನುಂಟು ಮಾಡುತ್ತಿದೆ. ಬೇಕಾಬಿಟ್ಟಿ, ಅಸಮರ್ಪಕ ಯೋಜನೆಗಳು, ಕೆಟ್ಟ ರೀತಿಯ ಜಾರಿ ಮುಂತಾದ ಕಾರಣಗಳಿಂದಾಗಿ ಮೂಲಭೂತ ಸೌಕರ್ಯದ ಯೋಜನೆಗಳು ಹಿಮಾಚಲ ಪ್ರದೇಶ ಮತ್ತು ಉತ್ತರಖಂಡದಲ್ಲಿ ಅಸಂಖ್ಯಾತ ಭೂ ಕುಸಿತಗಳು, ಪ್ರವಾಹ, ಪರ್ವತ ಪ್ರದೇಶದ ನಗರಗಳ ಕುಸಿತ ಮುಂತಾದ ಹಲವು ಅವಘಡದ ಘಟನಾವಳಿಗಳಿಗೆ ಕಾರಣವಾಗಿವೆ.

ಹವಾಮಾನ ವೈಪರೀತ್ಯದ ಕಾರಣದಿಂದ ಉಂಟಾಗುತ್ತಿರುವ ಅತಿರೇಕದ ಭಾರಿ ಮಳೆಯ ಘಟನಾವಳಿಗಳು ಸಮಸ್ಯೆಗಳನ್ನು ಇನ್ನಷ್ಟು ತೀವ್ರಗೊಳಿಸುತ್ತಿವೆ. ಹಲವು ದೀರ್ಘ ಸುರಂಗ ಮಾರ್ಗಗಳನ್ನು ಒಳಗೊಂಡ, ನಾಲ್ಕುಪಥದ ‘ಚಂಡಿಗಢ ಮತ್ತು ಮನಾಲಿ’ ಹೆದ್ದಾರಿಯು ಅನೇಕ ರೈತರ ಒಕ್ಕಲೆಬ್ಬಿಸುವಿಕೆಗೆ ಕಾರಣವಾಗಿದೆ.

ಸುಮಾರು 900 ಕಿ.ಮೀ. ಉದ್ದದ ಚಾರ್ ಧಾಮ್ ಹೆದ್ದಾರಿಯಂತಹ ಹೆದ್ದಾರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಭೂ ವಿಜ್ಞಾನಿಗಳು, ತಂತ್ರಜ್ಞರ ಸಲಹೆ, ಎಚ್ಚರಿಕೆಗಳನ್ನು ನಿರ್ಲಕ್ಷಿಸಿ ಈ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ. ‘ಇ.ಐ.ಎ.’ಯ ನಿಯಮಾವಳಿಗಳಿಂದ ನಿರ್ಲಜ್ಜವಾಗಿ ನುಣುಚಿಕೊಳ್ಳಲಾಗಿದೆ. 100 ಕಿ.ಮೀ. ಮತ್ತು ಅದಕ್ಕೂ ಕಡಿಮೆ ಉದ್ದದ ಯೋಜನೆಗಳಿಗೆ ‘ಇ.ಐ.ಎ.’ಯ ನಿಯಮಾವಳಿಗಳಿಂದ ವಿನಾಯಿತಿ ನೀಡಲಾಗಿದೆ ಹಾಗೂ ಚಾರ್ ಧಾಮ್ ಯೋಜನೆಯನ್ನು ಸಣ್ಣ ಸಣ್ಣ ಯೋಜನೆಗಳಾಗಿ ತುಂಡರಿಲಾಗಿದೆ!!

‘ದಿ ತಪೋವನ್–ವಿಷ್ಣುಗರ್ ಹೈಡೆಲ್’ ಯೋಜನೆಯು ಕಾರ್ಮಿಕರು ಮತ್ತು ಇತರರ ದೊಡ್ಡ ಸಂಖ್ಯೆಯ ಸಾವು ನೋವುಗಳಿಗೆ ಕಾರಣವಾಗಿದೆ ಮತ್ತು ಸಂಪೂರ್ಣ ನಾಶವನ್ನು ತಂದಿದೆ. ಚಾರ್ ಧಾಮ್ ಯಾತ್ರೆಯ ಪ್ರವೇಶದ್ವಾರವಾದ ‘ಜೋಷಿಮಠ’ ಪಟ್ಟಣದ ಅರ್ಧಕ್ಕಿಂತಲೂ ಹೆಚ್ಚಿನ ಭಾಗವು ಕೆಳಮಟ್ಟಕ್ಕೆ ಕುಸಿದಿದೆ. ಇದೇ ರೀತಿ ಈ ಭಾಗದಲ್ಲಿ ಅಸಮರ್ಪಕವಾದ ಮತ್ತು ತಾಳಿಕೆಯ ಶಕ್ತಿಯನ್ನು ಮೀರಿದ ಅಭಿವೃದ್ಧಿ ಯೋಜನೆಗಳಿಂದ ಹಲವು ಸಣ್ಣ ಪಟ್ಟಣಗಳು ಹಾನಿಗೊಳಗಾಗಿವೆ.

ಉತ್ತರ ಖಂಡ ರಾಜ್ಯದ ಸಿಲ್ಕ್ಯಾರದಲ್ಲಿ ಚಾರ್ ಧಾಮ್ ಸುರಂಗ ಮಾರ್ಗದ ಕುಸಿತವು ಬಿಜೆಪಿಯ ವಿನಾಶಕಾರಿ ಅಭಿವೃದ್ಧಿ ಪಥದ ಪರಿಣಾಮವಾಗಿ ಉಂಟಾದ ಮನುಷ್ಯ ನಿರ್ಮಿತ ದುರಂತದ ಇತ್ತೀಚಿನ ಉದಾಹರಣೆಯಾಗಿದೆ.

ಸೂಕ್ಷ್ಮ ದ್ವೀಪ ಪರಿಸರದ ನಾಶ

ಪರಿಸರದ ಕುರಿತ ದಿವ್ಯ ತಿರಸ್ಕಾರ ಮತ್ತು ಅಗೌರವದ ಧೋರಣೆಯಲ್ಲಿ, ತೀರಾ ಪರಿಸರ ಸೂಕ್ಷ್ಮವಾದ ಅಂಡಮಾನ್ ದ್ವೀಪದಲ್ಲಿ, ದ್ವೀಪದ ಧಾರಣಾ ಶಕ್ತಿಯನ್ನು ಮೀರಿದ, ಪ್ರವಾಸಿ ಸೌಲಭ್ಯ ಮತ್ತು ಮೂಲಭೂತ ಸೌಕರ್ಯಗಳ ನಿರ್ಮಾಣದಂತಹ ಹಲವು ಸರಣಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಭಾರಿ ಪ್ರಮಾಣದಲ್ಲಿ ಅರಣ್ಯನಾಶವನ್ನು ನಡೆಸಲಾಗಿದೆ. ಈ ಯೋಜನೆಗಳಲ್ಲಿ ನಾಗರೀಕ ಜಗತ್ತಿನ ಸಂಪರ್ಕದಿಂದ ಸಂಪೂರ್ಣವಾಗಿ ದೂರವುಳಿದ ಜಗತ್ತಿನ ಕೊನೆಯ ಆದಿಮ ಬುಡಕಟ್ಟು ಸಮುದಾಯದ ಜನರನ್ನೂ ಒಳಗೊಳಿಸಲಾಗಿದೆ. ಭಾರತದ ಪ್ರಧಾನ ಭೂಮಿಯಲ್ಲಿ ಕಾಣಸಿಗದ ಅಸಂಖ್ಯಾತ ಅಮೂಲ್ಯ ಜೀವಸಂಕುಲಗಳ ಅವಾಸ ಸ್ಥಾನವಾದ ಸಾವಿರಾರು ವರ್ಷಗಳ ಪ್ರಾಚೀನ ಉಷ್ಣವಲಯದ ಕಾಡುಗಳನ್ನು ನಾಶಮಾಡಲಾಗಿದೆ.

ಈಶಾನ್ಯ ಮತ್ತು ಅಂಡಮಾನ್ ನಲ್ಲಿ ತಾಳೆ ಎಣ್ಣೆ

‘ಪಾಮ್ ಆಯಿಲ್ ಮಿಷನ್’ನ ಅಡಿಯಲ್ಲಿ ಅಂಡಮಾನ್ ದ್ವೀಪ ಮತ್ತು ಈಶಾನ್ಯ ರಾಜ್ಯ ಮತ್ತಿತರ ಪ್ರದೇಶಗಳಲ್ಲಿ ತಾಳೆ ಎಣ್ಣೆಗಾಗಿ ತಾಳೆ ಬೆಳೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದು ಅಂಡಮಾನ್ ದ್ವೀಪ ಮತ್ತು ಈಶಾನ್ಯ ರಾಜ್ಯಗಳಲ್ಲಿ ಪರಿಸರ ವ್ಯವಸ್ಥೆಯನ್ನು ಸಂಕೀರ್ಣಗೊಳಿಸಿ ಸಮಸ್ಯೆಗಳನ್ನು ಸೃಷ್ಟಿಸಲಿದೆ. ಇದಲ್ಲದೇ ಇಲ್ಲಿನ ಅರಣ್ಯಭೂಮಿಯನ್ನು ಬಹುಮಟ್ಟಿಗೆ ತಾಳೆ ಎಣ್ಣೆ ಬೆಳೆಯ ಕೃಷಿಭೂಮಿಯನ್ನಾಗಿ ಬದಲಿಸಲಿದೆ. ಮಲೇಷಿಯ, ಇಂಡೋನೇಷಿಯಾಗಳಲ್ಲಿ ಈ ತಾಳೆ ಕೃಷಿಯು ದೊಡ್ಡ ಪ್ರಮಾಣದಲ್ಲಿ ಅರಣ್ಯನಾಶಕ್ಕೆ ಕಾರಣವಾಗಿದೆ.

ಪರಿಸರ ಸಂರಕ್ಷಣೆಯ ವಿಷಯದಲ್ಲಿ ಬಹಳ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಿದ್ದರೂ ಸಹ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ನಮ್ಮ ಅರಣ್ಯಗಳು, ಪರ್ವತಗಳು ಹಾಗೂ ದ್ವೀಪಗಳನ್ನು ಸಂರಕ್ಷಿಸುವಲ್ಲಿ ಸೋತಿದೆ. ಹವಾಮಾನ ವೈಪರೀತ್ಯಗಳಿಂದ ನಮ್ಮನ್ನು ರಕ್ಷಿಸಲು ಕೈಗೊಂಡ ಕ್ರಮಗಳಿಂದ ಮಾಲಿನ್ಯವೂ ಕಡಿಮೆಯಾಗಿಲ್ಲ. ಸರಕಾರವು ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಭಾರತದ ಮತ್ತು ವಿದೇಶಗಳ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತೆರೆದಿಡುವುದರಲ್ಲಿ ಆಸಕ್ತವಾಗಿದೆ. ಭಾರತ ದೇಶದ ಭವಿಷ್ಯತ್ತಿನ ರಕ್ಷಣೆಗಾಗಿ ಈ ಮೇಲಿನ ಪರಿಸರ ವಿರೋಧಿ–ಜನ ವಿರೋಧಿ ಕ್ರಮಗಳು ಹಾಗೂ ನೀತಿಗಳಿಗೆ ಪ್ರತಿರೋಧ ಒಡ್ಡಬೇಕಾಗಿದೆ ಮತ್ತು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ.

ಪರಿಸರವನ್ನು ರಕ್ಷಿಸಿ!
ಬಿಜೆಪಿಯನ್ನು ಸೋಲಿಸಿ!

ಸಂಪಾದಕೀಯ

ನೇಹಾಳ ಅಘಾತಕಾರಿ ಕಗ್ಗೊಲೆ ಮತ್ತು ದುರ್ಬಳಕೆಯ ಯತ್ನಗಳು

ಮೊನ್ನೆ ಹುಬ್ಬಳ್ಳಿಯಲ್ಲಿ ಖಂಡನಾರ್ಹವಾದ ದುರಂತ ಘಟನೆಯೊಂದು ನಡೆದು ಹೋಗಿದೆ. ಭೂಮರೆಡ್ಡಿ–ಬಿವಿಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಆಕೆಯ ಪ್ರೇಮಿಯೆಂದು ಹೇಳಿಕೊಂಡ ಫಯಾಸ್ ಕಾಲೇಜು ಆವರಣದಲ್ಲಿಯೇ ಕೊಂದು ಹಾಕಿದ್ದಾನೆ. ಪೋಲಿಸರು ಫಯಾಸ್‌ನನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಇದೊಂದು ಅಘಾತಕಾರಿ ಹತ್ಯೆ. ತನ್ನನ್ನು ಮದುವೆಯಾಗಲು ನಿರಾಕರಿಸಿದ್ದೆ ಫಯಾಸ್ ನೇಹಾಳನ್ನು ಕೊಲೆ ಮಾಡಲು ಕಾರಣ ಎಂದು ಹೇಳಲಾಗಿದೆ. ಹೆಣ್ಣಿನ ಆಯ್ಕೆ ಸ್ವಾತಂತ್ರ್ಯವನ್ನು, ಅಭಿಪ್ರಾಯವನ್ನು ಗೌರವಿಸದ ಪುರುಷ ಪ್ರಧಾನ ಪಾಳೇಗಾರಿ ಕ್ರೌರ್ಯದ ಮನೋಭಾವ ಈ ಕಗ್ಗೊಲೆಯ ಹಿಂದೆ ಇದೆ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಈ ಹೀನ ಕೊಲೆಯನ್ನು ಖಂಡಿಸಿ, ಕೊಲೆಗಡುಕನಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ದಲಿತ, ಲಿಂಗಾಯತ, ಮುಸ್ಲಿಂ ಸಂಘಟನೆಗಳು ಸೇರಿದಂತೆ ನಾನಾ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸುತ್ತಿವೆ. ಫಯಾಸ್‌ನ ತಂದೆ ಈ ಕುರಿತು ಹೇಳಿಕೆ ನೀಡಿ ಅಪರಾಧಿ ಫಯಾಸನಿಗೆ ಕಾನೂನಿನಂತೆ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ಈ ಪ್ರಕರಣದ ಬಗೆಗೆ ಸರಿಯಾದ ಮತ್ತು ತ್ವರಿತವಾದ ತನಿಖೆಯಾಗಬೇಕು. ಅಪರಾಧಿಗೆ ಕಾನೂನು ವ್ಯಾಪ್ತಿಯಲ್ಲಿ ಕೊಡಬಹುದಾದ ಕಠಿಣವಾದ ಗರಿಷ್ಟ ಶಿಕ್ಷೆ ನೀಡಬೇಕು. ಶಿಕ್ಷೆಯು ಇಂತಹ ಅಪರಾಧಗಳನ್ನು ಎಸಗುವ ಮನೋಭಾವವುಳ್ಳ ವ್ಯಕ್ತಿಗಳಿಗೆ ಒಂದು ಎಚ್ಚರಿಕೆಯಾಗಬೇಕು.

ನೇಹಾ ಹತ್ಯೆ ಪ್ರಕರಣದ ಬಗೆಗೆ ಹಲವಾರು ಮಾಹಿತಿಗಳು ಹೊರಬೀಳುತ್ತಿವೆ. ನೇಹಾ ಮತ್ತು ಫಯಾಸ್ ಸಾಕಷ್ಟು ಕಾಲದಿಂದ ಪ್ರೇಮಿಗಳಾಗಿದ್ದರು ಎಂಬುದು ಈ ಮಾಹಿತಿಗಳಿಂದ ಕಂಡು ಬರುತ್ತದೆ. ಅಂತರ್ ಧರ್ಮೀಯವಾದ ಇವರ ಪ್ರೇಮಕ್ಕೆ ಕುಟುಂಬಗಳಿಂದ ವಿರೋಧ ಇದ್ದಿರಬಹುದೆಂದು, ಕುಟುಂಬ ವರ್ಗದವರು ನೇಹಾಗಳನ್ನು ಮನವೊಲಿಸಿ ಈ ಪ್ರೇಮ ಸಂಬಂಧವನ್ನು ಕಡಿದುಕೊಳ್ಳಬೇಕೆಂದು ಒಪ್ಪಿಸಿರಬಹುದೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹೀಗಾಗಿ ನೇಹ ಫಯಾಸನೊಂದಿಗೆ ಮದುವೆಗೆ ನಿರಾಕರಿಸಿರಬಹುದು. ಅದೇನೇ ಇದ್ದರೂ ಇದು ಒಬ್ಬ ಯುವತಿಯ ನೀಚ ಕೊಲೆಗೆ ಸಮರ್ಥನೆಯಾಗಲಾರದು. ಪ್ರೀತಿಸಲೂ ಮತ್ತು ಬದಲಾದ ಸನ್ನಿವೇಶಗಳಿಗೆ ತಕ್ಕಂತೆ ತನ್ನ ನಿಲುವು ಬದಲಿಸಲು ಒಂದು ಹೆಣ್ಣಿಗೆ ಹಕ್ಕು ಇದ್ದೇ ಇದೆ.

ಆದರೆ ಇತ್ತೀಚಿನ ದಿನಗಳಲ್ಲಿ ಪ್ರೀತಿ ಹೆಸರಿನಲ್ಲಿ ಹಲವಾರು ಹತ್ಯಾಕಾಂಡಗಳು, ಅತ್ಯಾಚಾರಗಳು ನಡೆಯುತ್ತಲೇ ಇವೆ. ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿ ಒಂದರಲ್ಲಿ ಪ್ರೀತಿಯ ಕಾರಣಕ್ಕೆ ಆಸಿಡ್ ದಾಳಿ ಯುವತಿಯ ಮೇಲೆ ನಡೆದಿತ್ತು. ಉಡುಪಿ ಜಿಲ್ಲೆಯ ನೇಜಾರಿನಲ್ಲಿ ಪ್ರವೀಣ್ ಚೌಗುಳೆ ಎನ್ನುವಾತ ಮಹಿಳೆಯ ಇಡೀ ಕುಟುಂಬವನ್ನೇ ಕೊಂದು ಹಾಕಿದ್ದ. ಬೆಂಗಳೂರಿನಲ್ಲಿ ರುಕ್ಸಾನಾ ಎನ್ನುವ ಮಹಿಳೆಯನ್ನು ಪ್ರದೀಪ ಎನ್ನುವಾತ ಅದೇ 'ಪ್ರೀತಿ'ಯ ಕಾರಣಕ್ಕೆ ಕೊಂದಿದ್ದ. ತುಮಕೂರಿನಲ್ಲೂ ಪ್ರೀತಿಯ ಹೆಸರಿನಲ್ಲಿ ಬರ್ಬರ ಕೊಲೆ ಘಟಿಸಿತ್ತು. ಇನ್ನು 'ಮರ್ಯಾದೆಗೇಡು' ಹತ್ಯೆಗಳ ಅಮಾನವೀಯತೆ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ದೇಶದ ಹಲವಾರು ಕಡೆ ಪ್ರೀತಿ ಹೆಸರಿನಲ್ಲೇ ಇಂತಹುದೇ ಬರ್ಬರ ಹತ್ಯೆಯ ಘಟನೆಗಳು ನಡೆಯುತ್ತಲೇ ಇವೆ. ಗಮನಿಸಬೇಕಾದ ಮತ್ತೊಂದು ಅಂಶ ಎಂದರೆ ಇಂಥ ಪ್ರಕರಣಗಳು ನಡೆದಾಗ ಪ್ರತಿಭಟನೆಗಳು ಮತ್ತು ಆರೋಪಿಗೆ ಶಿಕ್ಷೆಗಳು ಕೆಲವರಿಂದ ನಡೆಯುತ್ತವೆ. ನಡೆಯಬೇಕೂ ಕೂಡ. ಆದರೆ ವಿಚಿತ್ರ ಎಂದರೆ ಅನೇಕ ಸಂದರ್ಭಗಳಲ್ಲಿ ಇವು ಹಲ್ಲೆಗೆ ಯಾರು ಒಳಗಾಗಿದ್ದಾರೆ, ಅವರ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಹಿನ್ನೆಲೆಗಳ ಆಧಾರದಲ್ಲಿ ಅವುಗಳಿಗೆ ತನ್ನದೇ ಆದಂತಹ ವಿಚಿತ್ರ ತಿರುವುಗಳು ಕೂಡ ಪಡೆಯುತ್ತವೆ. ಕೊಲೆಗೀಡಾದವರು ಮೇಲ್ಜಾತಿ ಮೇಲ್ವರ್ಗಕ್ಕೆ ಸೇರಿದವರಾಗಿದ್ದರೆ ನೋಡುವ, ಸ್ಪಂದಿಸುವ ರೀತಿಗೂ, ಇಂಥ ಕೊಲೆಗಳನ್ನು ಆ ವರ್ಗಕ್ಕೆ, ಜಾತಿಗೆ ಸೇರಿದ್ದರೆ ಅದಕ್ಕೆ ಒಂದು ರೀತಿ, ಕೆಳ ಜಾತಿ, ಕೆಳ ವರ್ಗಕ್ಕೆ ಸೇರಿದವರು ನಡೆಸಿದರೆ ಮತ್ತೊಂದು ರೀತಿ, ದೌರ್ಜನ್ಯಕ್ಕೆ ಕೆಳಜಾತಿ ಕೆಲ ವರ್ಗದವರು ಈಡಾದರೆ ಅದಕ್ಕೊಂದು ನೀತಿ ಇಂತಹ ವೈಪರಿತ್ಯ ಪ್ರತಿಕ್ರಿಯೆಗಳನ್ನು ನಾವು ಕಾಣುತ್ತೇವೆ. ದೌರ್ಜನ್ಯಕ್ಕೀಡಾದವರ, ನಡೆಸಿದವರ ಸಾಮಾಜಿಕ, ಧಾರ್ಮಿಕ ಹಿನ್ನೆಲೆಗಳು ರಾಜಕೀಯವಾಗಿಯೂ ಹೊಸ ಆಯಾಮವನ್ನು ಪಡೆದು ಅವುಗಳನ್ನು ಬಳಸಲಾಗುತ್ತದೆ. ಒಂದರ್ಥದಲ್ಲಿ ಸಂಕುಚಿತ ರಾಜಕೀಯಕ್ಕೆ ಪ್ರಕರಣಗಳನ್ನು ವಿಜೃಂಭಿಸಲಾಗುತ್ತದೆ ಎನ್ನುವುದೇ ದುರಂತ.

ಈಗಲೂ ಈ ದುರದೃಷ್ಟಕರ ಕೊಲೆ ಪ್ರಕರಣವನ್ನು ಸಂಕುಚಿತ ರಾಜಕೀಯ ಲಾಭಕ್ಕಾಗಿ ಬಳಕೆ ಮಾಡುವ ಬೆಳವಣಿಗೆಗಳು ಆಗುತ್ತಿದ್ದು ಇದು ನಿಜಕ್ಕೂ ಅಪಾಯಕಾರಿ. ಬಿಜೆಪಿ ಮತ್ತು ಸಂಘ ಪರಿವಾರದ ಸಂಘಟನೆಗಳು ಎಂದಿನಂತೆ ಈ ವಿಷಯವನ್ನು ತಮ್ಮ ಸಂಕುಚಿತ ಮತೀಯ ದೃಷ್ಟಿಕೋನದಲ್ಲಿಯೇ ವಿಶ್ಲೇಷಿಸಿ ವಿಷ ಪ್ರಚಾರವನ್ನು ನಡೆಸುತ್ತಿವೆ. ಚುನಾವಣಾ ಲಾಭದ ನಿರೀಕ್ಷೆಯಲ್ಲಿ ಜಾತಿ ಭಾವನೆಗಳನ್ನು ಬಡಿದೆಬ್ಬಿಸಲೂ ಪ್ರಯತ್ನಿಸುತ್ತಿವೆ.

ತನಿಖೆಯೇ ಪೂರ್ಣವಾಗದೇ, ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ಬಿಜೆಪಿ ಮತ್ತು ಸಂಘ ಪರಿವಾರವು ಇದೊಂದು 'ಲವ್ ಜಿಹಾದ್' ಪ್ರಕರಣ ಎಂದು ಪ್ರಚಾರ ನಡೆಸುತ್ತಿವೆ. ಅಂದರೆ ಮುಸ್ಲಿಂ ಯುವಕ ದುರುದ್ದೇಶಪೂರ್ವಕವಾಗಿಯೇ ಹಿಂದೂ ಯುವತಿಯನ್ನು ಪ್ರೀತಿಸುವ ನಾಟಕವಾಡಿ, ಕೊಲೆ ಮಾಡಿದ್ದಾನೆ ಎಂದು ಆರೋಪಿಸಿದ್ದಾರೆ. ಅಷ್ಟು ಮಾತ್ರವಲ್ಲ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಮುಸ್ಲಿಂ ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿದೆ, ಅಪರಾಧಿಗಳನ್ನು ರಕ್ಷಿಸುತ್ತಿದೆ ಎಂದೂ ಆರೋಪಿಸಿದ್ದಾರೆ.

ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಅಸಹ್ಯ ಹುಟ್ಟಿಸುವಷ್ಟು ಭ್ರಷ್ಟಾಚಾರ, ಕೋಮುವಿಭಜಕ ದುರಾಡಳಿತವನ್ನು ನಡೆಸಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಜನರಿಂದ ತಿರಸ್ಕೃತಗೊಂಡ ಬಿಜೆಪಿಗೆ ಈ ಬಾರಿಯೂ ನೈಜ ಸಾಧನೆಗಳ ಆಧಾರದಲ್ಲಿ ಮತ ಕೇಳಲು ಅವಕಾಶಗಳೇನು ಇರಲಿಲ್ಲ. ಸಂಘ ಪರಿವಾರವು ಪ್ರಸ್ತುಕ ಲೋಕಸಭಾ ಚುನಾವಣೆಗಳಲ್ಲಿ 'ಮೋದಿ ನಾಮ'ದೊಂದಿಗೆ, ಅದೇ ಜನವಿಭಜಕ, ಕೋಮುವಾದಿ ಅಜೆಂಡಾಗಳನ್ನು ಮುಂದೆ ಮಾಡಿ ಮತಗಳಿಸುವ ಪ್ರಯತ್ನ ನಡೆಸಿತ್ತು. ಪ್ರಸ್ತುತ ನೇಹಾ ಹತ್ಯೆ

ಪುಟ 7 ಕ್ಕೆ

ನಿರ್ಣಾಯಕ ಮತದಾನಕ್ಕೆ ಮನವಿ ಮಾಡುತ್ತಾ. . .

ಈ ವಾರ

ಎಸ್.ವೈ.ಗುರುಶಾಂತ್

ಭಾರತದಲ್ಲಿ 2024 ರ ಸಾರ್ವತ್ರಿಕ ಚುನಾವಣೆಯ ಮೊದಲ ಹಂತದ ಮತದಾನ ಮುಗಿದಿದೆ. ಎರಡು ಹಂತಗಳಲ್ಲಿ ಮತದಾನ ನಡೆಯಲಿರುವ ಕರ್ನಾಟಕವೂ ಎಪ್ರಿಲ್ 26 ರಂದು ಮೊದಲ ಹಂತದ ಮತದಾನಕ್ಕೆ ಸಿದ್ಧವಾಗುತ್ತಿದೆ.

ರಾಜಕೀಯ ಪಕ್ಷಗಳ ಪ್ರಚಾರ ಕಾರ್ಯವೂ ಕೊನೆಯ ಹಂತದಲ್ಲಿ ಬಿರುಸು ಪಡೆದಿದೆ. ಪ್ರಚಾರ ಎನ್ನುವುದು ಆಯಾ ಪಕ್ಷಗಳ ಸಾಧನೆಯ ವಿಮರ್ಶೆ, ರಾಷ್ಟ್ರದ, ರಾಜ್ಯಗಳ ಪ್ರಮುಖ ಪ್ರಶ್ನೆಗಳಿಗೆ ತೋರಿಸುವ ನಿಲುವು, ದೇಶ ಮುನ್ನಡೆಸುವ ದೃಷ್ಟಿ, ಜನತೆಯ ಹಿತ ಕಾಯುವ ಅದರ ಬದ್ಧತೆ, ಮುಂತಾಗಿ ವಸ್ತುನಿಷ್ಠವಾಗಿ ಜನರೆದುರು ಮಂಡಿಸಬೇಕು. ಬೇಕು ಬೇಡಗಳನ್ನು ಅರಿಯ ಬೇಕು. ವಿಮರ್ಶೆಗಳಿಗೆ ಮುಖ ಒಡ್ಡಬೇಕು. ಸಲಹೆ ಸೂಚನೆಗಳನ್ನು ಸ್ವೀಕರಿಸಬೇಕು. ಅಂದಾಗ ಮಾತ್ರ ಕನಿಷ್ಟ ಮಟ್ಟದ ಒಂದು ಪ್ರಜಾಪ್ರಭುತ್ವದ ಪ್ರಕ್ರಿಯೆ ನಡೆದಂತಾಗುತ್ತದೆ. ಆದರೆ ಇಂದಿನ ಗದ್ದಲ, ವ್ಯಕ್ತಿಗತ ಟೀಕೆ, ಧಾಳಿಗಳು ಮತದಾರರಿಗೆ ಬೆಳಕು ನೀಡುವ ಬದಲು ಬೆಂಕಿ ಹೊತ್ತಿಸುತ್ತಿವೆ. ಸಾಮಾಜಿಕ, ಆರ್ಥಿಕ ವಿಷಯಗಳು ಪ್ರಸ್ತಾಪ ಆಗುತ್ತಲೇ ಇಲ್ಲ ಎಂದೇನಿಲ್ಲ, ಆದರೆ ಅವಕ್ಕೆ ಅಷ್ಟಾಗಿ ಪ್ರಾಮುಖ್ಯತೆ ಸಿಗುತ್ತಿಲ್ಲ. ವ್ಯಕ್ತಿಗತ ನಿಂದನೆಗೆ ಆದ್ಯತೆ ಸಿಗುವುದು ಆರೋಗ್ಯಕರ ಅಲ್ಲ. ನೀತಿಗಿಂತ ಜಾತಿ, ಮತೀಯತೆ ಅತೀ ಪ್ರಾಮುಖ್ಯತೆ ಪಡೆಯುತ್ತಿವೆ. ಜಾತಿಗಳನ್ನು ಒಲಿಸಿಕೊಳ್ಳುವ ಧಾವಂತದಲ್ಲಿ ನಾಯಕರ ನಡುವೆ ಆರೋಪ–ಪ್ರತ್ಯಾರೋಪಗಳ ಸುರಿಮಳೆಯೇ ನಡೆದಿವೆ. ಹೆಚ್.ಡಿ.ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ ಇವರ ನಡುವಿನ ವಾಗ್ವಾದಗಳು ಸತ್ಯದ ಕೆಲ ತುಣುಕುಗಳನ್ನು ಹೊರ ಚೆಲ್ಲಿವೆಯಾದರೂ ರಾಜಕಾರಣದಲ್ಲಿ ತಾಮಸ ಹೆಚ್ಚಿಸಿದೆ. ನೆರೆಯ ಕೆಲ ರಾಜ್ಯಗಳಲ್ಲಿ ಸದಾ ಮೇಲುಗೈ ಪಡೆಯುವ ಫ್ಯೂಡಲ್ ಪಾಲಿಟಿಕ್ಸ್‌ನ ಈ ಕೆಟ್ಟಚಾಳಿ ಕರ್ನಾಟಕಕ್ಕೂ ವ್ಯಾಪಿಸುವುದು ಅಪೇಕ್ಷಣೀಯವಲ್ಲ. ಇದು ರಾಜಕೀಯದ ವಿಷ ವಾಸ್ತವಗಳನ್ನು ಮರೆಸುವ ಚಿತೋಹಾರಿ ವರಸೆಗಳು. ವ್ಯಕ್ತಿನಿಷ್ಠ ರಾಜಕಾರಣದ ಬದಲು ವಸ್ತುನಿಷ್ಠ–ನೀತಿಬದ್ಧ ರಾಜಕಾರಣ ಬೆಳೆಯುವುದು ಪ್ರಜಾಪ್ರಭುತ್ವವನ್ನು ಬಲಗೊಳಿಸುತ್ತದೆ, ಬೆಳೆಸುತ್ತದೆ.

ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ 77 ವರ್ಷಗಳು ತುಂಬಿವೆಯಾದರೂ, ಇನ್ನೂ ಶೈಶವಾವಸ್ಥೆಯಲ್ಲೇ ತೆವಳುತ್ತಿರುವುದಕ್ಕೆ, ಜನತಾ ಪ್ರಜಾಪ್ರಭುತ್ವ ಆಗದಂತೆ ತಡೆಯುವಲ್ಲಿ ಆಳುವ ವರ್ಗಗಳ ಪ್ರಜ್ಞಾಪೂರ್ವಕ ಪಿತೂರಿಗಳೇ ಕಾರಣ. ಇದು ಬದಲಾಗಬೇಕು.

ಮತದಾನದ ಪ್ರಮಾಣ ಅನೇಕ ಕಡೆ ಕುಸಿಯುತ್ತಿರುವುದನ್ನು ಇತ್ತೀಚಿನ ಹಲವು ಚುನಾವಣೆಗಳಲ್ಲಿನ ಅಂಕಿ ಸಂಖ್ಯೆಗಳು ತೋರಿಸುತ್ತವೆ. ಮತದಾರರ ನಿರಾಸಕ್ತಿಗೆ ವ್ಯಕ್ತಿಗತ ಬೇಜವಾಬ್ದಾರಿ, ನಿರ್ಲಕ್ಷ್ಯ, ಸಿನಿಕತನಗಳು, ರಾಜಕೀಯ ಶಿಕ್ಷಣರಾಹಿತ್ಯತೆ ಕಾರಣವಾಗಿರುವಾಗಲೇ ಮುಖ್ಯವಾಗಿ ಆಳುವವರ ನೀತಿ ವರ್ತನೆಗಳು ಕಾರಣ. ಬೆಂಗಳೂರಿನಂತಹ ಮಹಾನಗರದಲ್ಲೇ ಶೇ.35–40 ರಷ್ಟು ಜನ ಮತದಾನಕ್ಕೇ ಬರುವುದಿಲ್ಲ. ಆಳುವವರ ಬಗೆಗಿನ ಅಸಹನೆಯಿಂದ ಮತದಾನದಿಂದ ದೂರ ಎಂದುಕೊಳ್ಳುವುದು ಅಂತಹವರನ್ನೇ, ಅಂತಹ ವ್ಯವಸ್ಥೆಯನ್ನೇ ಮುಂದುವರಿಸುತ್ತದೆ ಎನ್ನುವುದನ್ನು ಮರೆಯಬಾರದು. ಈ 'ಮೌನ ಬಹಿಷ್ಕಾರ'ವೇ ಜನಪೀಡಕರಿಗೆ ಬಲ ತರುತ್ತಿದೆ. ಆದರೆ ಈ ಬಾರಿ ಹಾಗಾಗಬಾರದು. ಈ ಬಾರಿಯ ಮತದಾನ ಒಂದು ನಿರ್ಣಾಯಕ ಫಲಿತಾಂಶ ನೀಡುವಲ್ಲಿ ಸಫಲವಾಗಬೇಕು. ಆದ್ದರಿಂದ ಒಟ್ಟಾರೆ ಎಲ್ಲ ಮತದಾರರನ್ನು ಮನವೊಲಿಸುವಾಗಲೇ ಮತದಾನದಿಂದ ಹೊರಗುಳಿದವರನ್ನು ಒಳಗೊಳಿಸಲು ಅತೀ ಹೆಚ್ಚಿನ ಮುತುವರ್ಜಿ, ಎನರ್ಜಿ ಅಗತ್ಯವಿದೆ.

ಮತದಾನಕ್ಕೆ ಹೋಗುವ ಮುನ್ನ ಮತದಾರರು ಸ್ಪಷ್ಟ ನಿರ್ಧಾರಕ್ಕೆ ಬರಬೇಕು. ಕಳೆದ ಹತ್ತು ವರ್ಷಗಳ ಮೋದಿ– ಬಿಜೆಪಿ ಕೂಟದ ಅನಾಹುತಕಾರಿ ಆಡಳಿತವನ್ನು ದೇಶ ಕಂಡಿದೆ. ಈ ಬಗ್ಗೆ ಜನಶಕ್ತಿ ಪತ್ರಿಕೆ ನಿರಂತರವಾಗಿ ಸಂಗತಿಗಳನ್ನು ವಿಶ್ಲೇಷಿಸಿದೆ, ಎಚ್ಚರಿಸಿದೆ, ಜನರ ನೋವುಗಳಿಗೆ ಸ್ಪಂದಿಸಿ ಧ್ವನಿಯಾಗಿದೆ. ಈ ಬಾರಿ ಮತ್ತೆ ಅಧಿಕಾರಕ್ಕೆ ತರುವಂತೆ ಕೇಳುತ್ತಿರುವ ಭ್ರಷ್ಟ, ಕಾರ್ಪೋರೇಟ್ ಕೋಮುವಾದಿಗಳ ಕೂಟವಾಗಿರುವ ಮೋದಿ ಮತ್ತವರ ಕೂಟ ಈಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಸ್ಪಷ್ಟ ಅಜೆಂಡಾ ಇರಿಸಿಕೊಂಡಿದೆ. ಅದಕ್ಕಾಗಿ ಅಧಿಕಾರ ಹಿಡಿಯಲು ಹಾತೊರೆಯುತ್ತಿದೆ. ಇದಕ್ಕೆ ಎಳ್ಳಷ್ಟೂ ಅವಕಾಶ ನೀಡಬಾರದು. ಭಾರತ, ಭಾರತ ದೇಶದ ಜನತೆ ನಮ್ಮ ಸ್ವಾವಲಂಬನೆ, ಸೌಹಾರ್ದತೆಯ ಪರಂಪರೆ ಉಳಿಯಬೇಕೆಂದರೆ ಬಿಜೆಪಿ ಕೂಟ ಸೋಲಲೇ ಬೇಕು, ಸೋಲುವಂತೆ, ಸೆಕ್ಯುಲರ್–ಜಾತ್ಯತೀತ ಸರ್ಕಾರ ರಚನೆಯಾಗುವಂತೆ ಶ್ರಮಿಸಲೇಬೇಕು.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ 2024 ಏಪ್ರಿಲ್ 26 ಮತ್ತು ಮೇ 7ರಂದು ನಡೆಯಲಿರುವ ಎರಡು ಹಂತಗಳ ಸಾರ್ವತ್ರಿಕ ಚುನಾವಣೆ ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತ್ಯಂತ ಮಹತ್ವದ ಚುನಾವಣೆಯಾಗಿದೆ.

ಭರವಸೆಯ 'ಇಂಡಿಯಾ' ಮೈತ್ರಿ

ಬಿಜೆಪಿ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ 'ಇಂಡಿಯಾ' ಬೃಹತ್ ಮೈತ್ರಿಕೂಟವಾಗಿದೆ. ಕರ್ನಾಟಕದಲ್ಲಿ ಸಿಪಿಐ(ಎಂ) ಪಕ್ಷ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದೆ. ಸಿಪಿಐ(ಎಂ) ರಾಜ್ಯದ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರೂ ಶ್ರಮಜೀವಿ ವರ್ಗದ ನೈಜ ಪರ್ಯಾಯವನ್ನು ಇದು ಪ್ರತಿನಿಧಿಸುತ್ತಿದೆ. ಅಂತಹ ಸ್ಪಷ್ಟ ಕಾರ್ಯಕ್ರಮವನ್ನು ಪ್ರಣಾಳಿಕೆಯ ಮೂಲಕ ಮಂಡಿಸಿದೆ. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗೆ ಮತ ನೀಡುವ ಮೂಲಕ ಲೋಕಸಭೆಯಲ್ಲಿ ಎಡಪಕ್ಷಗಳ ಬಲ ಹೆಚ್ಚಿಸಬೇಕು. ಎಡ ಶಕ್ತಿಗಳ ಪ್ರತಿನಿಧಿಗಳು–ಅದರ ಶಕ್ತಿಯ ವೃದ್ಧಿ ವಿಶಾಲವಾದ ಸೆಕ್ಯುಲರ್ ಸರಕಾರವನ್ನು ಸರಿದಾರಿಯಲ್ಲಿ ಮುನ್ನಡೆಸಲು ಅತ್ಯಗತ್ಯ.

ಕರ್ನಾಟಕದಲ್ಲಿ ಇನ್ನುಳಿದ 27 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಕೂಟವನ್ನು ನಿರ್ಣಾಯಕವಾಗಿ ಸೋಲಿಸಲು ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಗಳಿಗೆ ಅತ್ಯಧಿಕ ಮತ ನೀಡಬೇಕಿದೆ. ಇದು ಐತಿಹಾಸಿಕ ಕರ್ತವ್ಯ ಎನ್ನುವುದನ್ನು ಮರೆಯದಿರೋಣ. ●



ಮಂಗಳೂರು ಲೋಕಸಭಾ ಚುನಾವಣೆ-ಎಡಪಕ್ಷಗಳ ಜವಾಬ್ದಾರಿ

ವರದಿ: ಬಾಬು ಪಿಲಾರ್

ಮಂಗಳೂರಿನಲ್ಲಿ ಬಿಸಿಲಿನ ತಾಪ ದಿನೇ ದಿನೇ ಏರುತ್ತಿಲದೆ. ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿದೆ. ಇವೆರಡರ ನಡುವೆ ಲೋಕಸಭಾ ಚುನಾವಣಾ ಕಾವು ನಿಧಾನವಾಗಿ ಏರುತ್ತಿದೆ. 18ನೇ ಲೋಕಸಭೆಗೆ ಮೊದಲ ಹಂತದಲ್ಲಿ ದಕ್ಷಿಣ ಕನ್ನಡ(ಮಂಗಳೂರು) ಸೇರಿದಂತೆ ರಾಜ್ಯದಿಂದ 14 ಲೋಕಸಭಾ ಕ್ಷೇತ್ರಗಳಲ್ಲಿ ಎಪ್ರಿಲ್ 26ರಂದು ಚುನಾವಣೆ ನಡೆಯಲಿದೆ.

ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಪ್ರಸ್ತುತ 17,96,826 ಮತದಾರರಿದ್ದಾರೆ. ಈ ಬಾರಿಯ ಚುನಾವಣಾ ಕಣದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಪ್ರಬಲ ಸ್ಪರ್ಧಿಗಳಾಗಿವೆ. ಬಹುಜನ ಸಮಾಜವಾದಿ ಪಕ್ಷ ಮತ್ತು ಪಕ್ಷೇತರರು ಸೇರಿದಂತೆ ಇನ್ನುಳಿದ ನಾಲ್ವರು ಕಣದಲ್ಲಿದ್ದಾರೆ. 1952ರಿಂದ 1990ರವರೆಗೆ ಕಾಂಗ್ರೆಸ್ ಪಕ್ಷವೇ ಗೆಲ್ಲುತ್ತಿದ್ದ ಈ ಕ್ಷೇತ್ರದಲ್ಲಿ 1991ರಿಂದ ಸತತವಾಗಿ ಬಿಜೆಪಿ ಅಭ್ಯರ್ಥಿಗಳು ಚುನಾಯಿತರಾಗುತ್ತಿದ್ದಾರೆ. 1991ರಿಂದ 1999ರವರೆಗೆ ಅಲ್ಪ ಮತಗಳ ಅಂತರದಿಂದ ಗೆಲ್ಲುತ್ತಿದ್ದ ಬಿಜೆಪಿಯು 2014ಮತ್ತು 2019 ರಲ್ಲಿ ತನ್ನ ಗೆಲುವಿನ ಅಂತರವನ್ನು ಹೆಚ್ಚಿಸಿತು.

ಭ್ರಷ್ಟಾಚಾರವನ್ನು ತಡೆದು ಕಪ್ಪು ಹಣವನ್ನು ಹೊರಗೆಳೆದು ಪ್ರತಿಯೊಬ್ಬ ಪ್ರಜೆಗಳಿಗೆ 15 ಲಕ್ಷ ರೂಪೈಯಂತೆ ಹಂಚುತ್ತೇವೆ ಎಂಬ ಭರವಸೆ ಮುಂದಿಟ್ಟು ಮೋದಿ ನೇತ್ರತ್ವದಲ್ಲಿ ಚುನಾವಣೆಯನ್ನೆದುರಿಸಿತ್ತು. ಗೆದ್ದರೆ ವರ್ಷಕ್ಕೆ ಎರಡು ಕೋಟಿ ಉದ್ಯೋಗ ನಿರ್ಮಿಸುವ ಭರವಸೆಯೊಂದಿಗೆ ಯುವಜನರನ್ನು ಆಕರ್ಷಿಸಿತು. ಮತದಾರರು ಅವರ ಮಾತಿನಲ್ಲಿ ನಂಬಿಕೆಯಿರಿಸಿದರು.

ಆದರೆ ಐದು ವರ್ಷಗಳ ಆಡಳಿತದಲ್ಲಿ ಮೋದಿಯವರು ಈ ಎರಡು ಭರವಸೆಗಳನ್ನು ಈಡೇರಿಸಲಿಲ್ಲ. ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಅಡುಗೆ ಅನಿಲ ದುಬಾರಿಯಾಗಿಯೆಂದು ಬೊಬ್ಬಿರಿದ ಬಿಜೆಪಿಯು ತನ್ನ ಅವಧಿಯಲ್ಲಿ ಅದರ ಬೆಲೆಯನ್ನು ಮೂರುಪಟ್ಟು ಹೆಚ್ಚಿಸಿತ್ತು. 2019ರ ಚುನಾವಣೆಯಲ್ಲಿ ಬಿಜೆಪಿಯನ್ನೆದುರಿಸಲು ಪ್ರತಿಪಕ್ಷಗಳಿಗೆ ಇದೊಂದು ದೊಡ್ಡ ಅಸ್ತ್ರವಾಗಬೇಕಿತ್ತು. ಬಿಜೆಪಿ ಜನಬೆಂಬಲ ಕುಸಿಯುತ್ತಿದೆಯೆಂಬುದನ್ನು ಮನಗಂಡ ಮೋದಿ ಮತ್ತು ಅಮಿತ್ ಶಾರವರು ಸರ್ಜಿಕಲ್ ಸ್ಟ್ರೈಕ್ ಎಂಬ ಬಾಂಬ್ ಸಿಡಿಸಿ ಜನರನ್ನು ಭಾವನಾತ್ಮಕವಾಗಿ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾದರು. ಇದರ ಸತ್ಯಾಸತ್ಯತೆಯನ್ನು ಅರಿಯುವಲ್ಲಿ ಪ್ರಯತ್ನಗಳು ನಡೆದಿದ್ದರೂ ಮಾಧ್ಯಮಗಳು ಸಹಕರಿಸಲಿಲ್ಲ. ಅದು ಮೋದಿಯ ಪರವಾಗಿ ಕಾರ್ಯವೆಸಗತೊಡಗಿತು. ದೇಶಪ್ರೇಮದ ಹೆಸರಲ್ಲಿ ಬಿಜೆಪಿಯು ಅತ್ಯಧಿಕ ಬಹುಮತವನ್ನು ಸಾಧಿಸಿತು. ಇಲ್ಲಿ ಬಿಜೆಪಿಯ ಗೆಲುವಿನ ಅಂತರ 2,74,000ಕ್ಕೆ ಏರಿತ್ತು. ಬಿಜೆಪಿಯ ಹುಸಿ ದೇಶಪ್ರೇಮದ ಬಗ್ಗೆ ಕಾಂಗ್ರೆಸ್ ಪಕ್ಷವು ಜನರನ್ನು ಎಚ್ಚರಗೊಳಿಸುವಲ್ಲಿ ವಿಫಲವಾಯಿತು. ಸೋಲಿನ ಅಂತರ ಕಾಂಗ್ರೆಸಿಗೆ ಆಘಾತ ನೀಡಿದೆಯೆಂದರೂ ತಪ್ಪಾಗದು. ಅಭ್ಯರ್ಥಿ ಆಯ್ಕೆಯಲ್ಲಿ ಇದ್ದ ಗೊಂದಲವು ಸೋಲಿನ ಅಂತರ ಹೆಚ್ಚಲು ಇನ್ನೊಂದು ಕಾರಣವಾಗಿರಬಹುದು.

ಆದರೆ ಇದು ಕಾಂಗ್ರೆಸಿನ ಸೋಲು ಎನ್ನುವಾಗಲೇ ಇದು ಕೋಮುವಾದಿ ಧೃವೀಕರಣದ ಫಲವಾಗಿ ಆದ ಸೋಲು. ಬಿಜೆಪಿಯ ಕೋಮುವಾದವನ್ನು ಪರಿಣಾಮಕಾರಿಯಾಗಿ ಎದುರಿಸಬೇಕು ಎಂದು ಅರಿಯುವಲ್ಲಿ ಕಾಂಗ್ರೆಸ್ ವಿಫಲವಾಯಿತು. ಅನಾದಿಕಾಲದಿಂದಲೂ ದೈವದೇವರುಗಳ ಮೇಲೆ ನಂಬಿಕೆಯಿರಿಸಿದ ಜನರಿರುವ ತುಳುನಾಡು ಅಂದರೆ ದಕ್ಷಿಣ ಕನ್ನಡ ಜಿಲ್ಲೆ. ಜನಗಳ ಧಾರ್ಮಿಕ ನಂಬಿಕೆಗಳನ್ನು ರಾಜಕೀಯಕ್ಕೆ ಎಳೆದು ತರುವಲ್ಲಿ ಬಿಜೆಪಿಯ ಪ್ರಯತ್ನವು ವಿಫುಲವಾಗಿ ನಡೆಯಿತು ಮತ್ತು ಕಾಂಗ್ರೆಸ್ಸನ್ನು ಹಿಂದೂ ಧರ್ಮ ವಿರೋಧಿ ಎಂಬುದಾಗಿ ಅಪಪ್ರಚಾರಕ್ಕೆ ತೊಡಗಿತು.

ರಾಜಕೀಯದಲ್ಲಿ ಕ್ಷಣಕ್ಷಣಕ್ಕೂ ಆಗಬಹುದಾದ ಬದಲಾವಣೆಗಳ ಬಗ್ಗೆ ನಿರ್ಲಕ್ಷ್ಯ ತೋರುವಂತಿಲ್ಲ. ಆ ರೀತಿಯ ಸಂಭವವು ರಾಜಕೀಯ ಹಿನ್ನಡೆಗೆ ಕಾರಣವಾಗುವುದು. ದಕ್ಷಿಣಕನ್ನಡ ಜಿಲ್ಲೆಯ ರಾಜಕೀಯ ಬೆಳವಣಿಗೆಯು ಇದಕ್ಕೊಂದು ಉದಾಹರಣೆಯಾಗಿದೆ. ಸರ್ವಧರ್ಮಗಳನ್ನು ಸಮಭಾವದಿಂದ ಕಾಣುವ ಶ್ರೀ ನಾರಾಯಣಗುರುಗಳ ತತ್ವಾದರ್ಶಗಳು ಮಾದರಿಯಾಗಬೇಕಿದ್ದ ಬಿಲ್ಲವ ಸಮುದಾಯವು ಜಾತ್ಯಾತೀತ ಸಮಭಾವದ ಕಾಂಗ್ರೇಸನ್ನು ಬೆಂಬಲಿಸುತ್ತಿದ್ದ ಪರಂಪರೆ ಇದೆ. ಅದು ಕಾಂಗ್ರೇಸಿನ ಜನಾರ್ಧನ ಪೂಜಾರಿಯವರ ಗೆಲುವಿನಲ್ಲೂ ಸಾಬೀತುಗೊಳ್ಳುತಿತ್ತು. 1991ರಿಂದ 2009ರ ಚುನಾವಣೆವರೆಗೂ ಬಿಲ್ಲವ ಸಮುದಾಯದ ಮತಗಳನ್ನು ವಿಭಜಿಸುವಲ್ಲಿ ಬಿಜೆಪಿಯು ಸತತವಾಗಿ ಪ್ರಯತ್ನಿಸುತಿತ್ತು. ಅದರಲ್ಲಿ ಅವರಿಗೆ ಸಣ್ಣ ಮಟ್ಟಿನ ಫಲವಷ್ಟೆ ದೊರೆತಿತ್ತು. ಇಲ್ಲಿ ಕಾಂಗ್ರೆಸ್ ಪಕ್ಷವು ರಾಜಕೀಯ ಚಟುವಟಿಕೆಗಳಲ್ಲಿ ಸೋಮಾರಿತನ ತೋರಿಸಿರುವುದು ಬಿಜೆಪಿಗೆ ವರದಾನವಾಯಿತೆಂದು ಹೇಳಬಹುದು. 2014ರ ಚುನಾವಣೆಯಲ್ಲಿ ಬಿಜೆಪಿಯು 15ಲಕ್ಷ ಹಣ ಪ್ರತಿಯೊಬ್ಬರ ಖಾತೆಗೆ ಹಾಕುವ ಮತ್ತು 2ಕೋಟಿ ಉದ್ಯೋಗ ಸೃಷ್ಟಿಯ ಹುಸಿ ಭರವಸೆ ನೀಡಿರುವುದರ ವಿರುದ್ಧ ವ್ಯಾಪಕ ಜನಚಳವಳಿ ಎಬ್ಬಿಸಬಹುದಾದ ಅವಕಾಶವನ್ನು ಕಾಂಗ್ರೆಸ್ ಕೈಚೆಲ್ಲಿತ್ತು. 2019ರ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ಬಿತ್ತಿದ ಭಾವನಾತ್ಮಕ ವಿಚಾರಗಳ ಬಗೆಗೂ ಅಸಡ್ಡೆ ತೋರಿತು.

ಈ ನಡುವೆ ಹಿಂದೂ ಧರ್ಮದ ರಕ್ಷಣೆಗಾಗಿ ಪಣ ತೊಟ್ಟವರಂತೆ ಬಿಂಬಿಸಲು ಸಂಘ ಪರಿವಾರವು ನಡೆಸುತ್ತಿದ್ದ ಕ್ರತ್ಯಗಳ ಬಗ್ಗೆ ಮೂಕ ಪ್ರೇಕ್ಷಕರಂತಿದ್ದುದು ಮತ್ತು ಅಲ್ಪ ಸಂಖ್ಯಾತರ ಮೇಲೆ ದಾಳಿಯಾದ ಸಂದರ್ಭಗಳಲ್ಲಿ ಅವರಿಗೆ ರಕ್ಷಣೆ ನೀಡಲು ವಿಫಲವಾದುದು.. ಇವೆಲ್ಲವೂ ಕಾಂಗ್ರೆಸ್ ಪಕ್ಷದ ಮತಗಳಿಕೆಯಲ್ಲಿ ತೊಡಕಾಗಿ ಪರಿಣಮಿಸಿತು. ಅಂತಿದ್ದರೂ ಅಲ್ಪ ಸಂಖ್ಯಾತರು ಜಾತ್ಯಾತೀತ ಪರಂಪರೆಯನ್ನು ಒಪ್ಪಿಕೊಂಡು ಅನಿವಾರ್ಯವಾಗಿ ಕಾಂಗ್ರೆಸ್ ಜತೆ ಕೈಜೋಡಿಸುತ್ತಿದ್ದಾರೆ.

ಕಳೆದ ಹತ್ತು ವರ್ಷಗಳ ಬಿಜೆಪಿ ಆಡಳಿತವು ಎಲ್ಲಾ ವಿಧದಲ್ಲೂ ವೈಫಲ್ಯವನ್ನು ಕಂಡಿದೆ. ಅವರು ನೀಡಿರುವ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ. ಭ್ರಷ್ಟಾಚಾರ ನಿಗ್ರಹಿಸುವ ಮಾತುಕೊಟ್ಟ ಬಿಜೆಪಿಯು ಚುನಾವಣಾ ಬಾಂಡ್ ಗಳ ಮೂಲಕ ತಾನೇ ಭ್ರಷ್ಟಾಚಾರಎಸಗಿದೆ. ಬೆಲೆ ಏರಿಕೆಯನ್ನು ನಿಯಂತ್ರಿಸಲಾಗಿಲ್ಲ ನೋಟು ಅಮಾನ್ಯದಿಂದ ನೂರಾರು ಜೀವ ಬಲಿಯಾಗಿದೆ. ಕಪ್ಪು ದುಡ್ಡನ್ನು ಬಿಳಿಮಾಡುವವರಿಗೆ ಅನುಕೂಲವಾಗಿದೆ. ಅದರಿಂದ ದೇಶಕ್ಕೆ ನಷ್ಟವೇ ಸಂಭವಿಸಿದೆ. ದೇಶದ ಲಾಭದಾಯಕ ಸಂಸ್ಥೆಗಳನ್ನು ಬಿಜೆಪಿಯು ತನ್ನ ಆಪ್ತವಲಯದವರಿಗೆ ಧಾರೆಎರೆದು ಕೊಟ್ಟಂತೆ ಮೂರು ದುಡ್ಡಿಗೆ ಮಾರಿಕೊಂಡಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ವಿಜಯಾ ಬ್ಯಾಂಕನ್ನು ಗುಜರಾತಿನ ನಷ್ಟದ ಬ್ಯಾಂಕಿನೊಂದಿಗೆ ವಿಲೀನ ಮಾಡಿದಾಗ ಪ್ರತಿರೋಧ ಬರಲಿಲ್ಲ. ಮಂಗಳೂರಿನ ಅಭಿವೃದ್ಧಿಗಾಗಿ ಹಿಂದಿನ ಸಂಸದ ಶ್ರೀನಿವಾಸ ಮಲ್ಯರು ನೀಡಿದ್ದ ಕೊಡುಗೆಗಳಾದ ಮಂಗಳೂರು ಬಂದರು, ವಿಮಾನ ನಿಲ್ದಾಣ, ರಸಗೊಬ್ಬರ ಕಾರ್ಖಾನೆ ಮುಂತಾದವುಗಳನ್ನು ಅದಾನಿ ಗುಂಪಿಗೆ ಹಸ್ತಾಂತರಿಸಲಾಯಿತು.

ಕಳೆದ ಮೂವತ್ತಮೂರು ವರ್ಷಗಳಲ್ಲಿ ಸತತವಾಗಿ ಆಯ್ಕೆಯಾಗಿ ಬಂದಿದ್ದ ಬಿಜೆಪಿ ಸಂಸದರು ದಕ್ಷಿಣ ಕನ್ನಡದ ಅಭಿವೃದ್ಧಿ ಕಾರ್ಯದಲ್ಲಿ ಉತ್ಸುಕತೆ ತೋರಿಲ್ಲ. ಇಲ್ಲಿನ ಜಲ ನೆಲ ಮಾನವ ಸಂಪನ್ಮೂಲಗಳನ್ನು ಬಳಸಿ ಕೈಗಾರಿಕೆಗಳನ್ನು ಬೆಳೆಸಲು ಇದ್ದ ಅವಕಾಶಗಳನ್ನು ಬಳಸಿಕೊಂಡಿಲ್ಲ. ವಿದ್ಯಾಭ್ಯಾಸ ಮುಗಿಸಿ ಹೊರ ಬರುತ್ತಿರುವ ಯುವಜನರಿಗೆ ಉದ್ಯೋಗ ಕೊಡಿಸುವ ಪ್ರಯತ್ನವನ್ನು ಮಾಡಿಲ್ಲ. ಉದ್ಯೋಗ ಅಭಿವೃದ್ಧಿ ಎಂಬುದು ಬಿಜೆಪಿಗರ ಮಟ್ಟಿಗೆ ಸವಕಲು ನಾಣ್ಯವಾಗಿದೆ.

"ಅಭಿವೃದ್ಧಿ ಕಾರ್ಯದ ಬಗೆಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ.. ನೀವು ಲವ್ ಜಿಹಾದ್ ತಡೆಯುವ (ಎಲ್ಲಿತ್ತು ಗೊತ್ತಿಲ್ಲ) ಮತ್ತು ಹಿಂದೂ ಧರ್ಮ ಉಳಿಸುವ (ಧರ್ಮಕ್ಕೆ ಏನಾಗಿದೆ ಗೊತ್ತಿಲ್ಲ) ಮಟ್ಟಿಗೆ ಗಮನ ಹರಿಸಿರಿ.." ಈ ರೀತಿ ಸಂಸದ ನಳಿನ್ ಕುಮಾರ್ ರವರು, ಕಾರ್ಯಕರ್ತರಿಗೆ ಆದೇಶಿಸಿದ್ದರು ಹಿಂದಿನ ಮರ್ಮ ಅಭಿವೃದ್ಧಿ ಎನ್ನುವುದರ ಅಗತ್ಯವೇ ಆ ಪಕ್ಷಕ್ಕಿಲ್ಲ ಎಂಬಂತಿದೆ. ಜಿಲ್ಲೆಯಲ್ಲಿ ಪ್ರವೀಣ್ ನೆಟ್ಟಾರ್ ಕೊಲೆ ಪ್ರಕರಣದಲ್ಲಿ ನಳಿನ್ ಕುಮಾರ್ ಅವರ ಮೇಲೆ ಕಾರ್ಯಕರ್ತರು ತಿರುಗಿ ಬಿದ್ದದ್ದು ಪಕ್ಷ ನಾಯಕರಿಗೆ ಮುಜುಗರ ಉಂಟು ಮಾಡಿದೆ. ಅಭಿವೃದ್ಧಿಯ ಕಡೆಗಣನೆ- ಜಿಲ್ಲೆಗೆ ಬೆಂಕಿ ಹಚ್ಚುತ್ತೇನೆ ಎಂದಿದ್ದು ಮತ್ತು ಇನ್ನೂ ಹಲವಾರು ಅಪಾಯಕಾರಿ ಹೇಳಿಕೆಗಳನ್ನು ಖಂಡಿಸಲು ಬಿಜೆಪಿಯ ವಿರೋಧಿಗಳು ಸಾಮಾಜಿಕ ಜಾಲತಾಣಗಳನ್ನು ವ್ಯಾಪಕವಾಗಿ ಬಳಸಿಕೊಂಡಿದ್ದರ ಪರಿಣಾಮವಾಗಿ ಈ ಬಾರಿ ನಳಿನ್ ಕುಮಾರ್ ಅವರ ಸ್ಪರ್ಧೆಗೆ ಅವಕಾಶ ಸಿಕ್ಕಿಲ್ಲ ಎಂಬುದು ವೇದ್ಯವಾಗುತ್ತಿದೆ.

ಹನ್ನೊಂದು ತಿಂಗಳ ಹಿಂದೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಬಿಜೆಪಿಗೆ ನುಂಗಲಾರದ ತುತ್ತಾಗಿವೆ. ಇವುಗಳ ಬಗ್ಗೆ ಕೆಟ್ಟದಾಗಿ ಪ್ರಚಾರ ಮಾಡಲಾಯಿತು. ಆದರೆ ಇವುಗಳ ಫಲಾನುಭವಿಗಳು ಮಾತ್ರ ಅದನ್ನು ಮನಸಾರೆ ಸ್ವೀಕರಿಸಿದ್ದಾರೆ.. ಇದರ ಪ್ರಭಾವದಿಂದಾಗಿ ಇಲ್ಲದ "ಮೋದಿ ಗ್ಯಾರಂಟಿ"ಗಳು ಅವತಾರ ತಳೆಯುವಂತಾಯಿತು. ರಾಜ್ಯ ಸರಕಾರದ ಗ್ಯಾರಂಟಿಗಳನ್ನು ಅವಹೇಳನ ಮಾಡಲು ಸ್ವತಃ ಪ್ರಧಾನಿಯವರು ಸೇರಿ ಬಿಜೆಪಿ ಪಕ್ಷವು ಕರ್ಕಶವಾದ ಶಬ್ದಗಳನ್ನು ಮತ್ತು ಹಸಿ ಸುಳ್ಳನ್ನು ಬಿತ್ತರಿಸಿತು. ಇಷ್ಟಾದರೂ ಇದುವರೆಗಿನ ಮಟ್ಟಿಗೆ ಸಿದ್ರಾಮಯ್ಯರ ಗ್ಯಾರಂಟಿಗಳನ್ನು ಕ್ಷುಲ್ಲಕವಾಗಿಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಇದು ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲ ಕಲ್ಪಿಸಬಹುದು.

ಈ ಕ್ಷೇತ್ರದಲ್ಲಿ ಅಲ್ಪ ಸಂಖ್ಯಾತ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಮತದಾರರ ಸಂಖ್ಯೆ ಹೆಚ್ಚು ಕಡಿಮೆ ಐದೂವರೆ ಲಕ್ಷದಷ್ಟಿವೆ. ಬಿಲ್ಲವ ಸಮುದಾಯದವರು ದೊಡ್ಡ ಸಂಖ್ಯೆಯಲ್ಲಿದ್ದು ನಿರ್ಣಾಯಕ ಶಕ್ತಿಯುಳ್ಳ ಮತದಾರರಾಗಿದ್ದಾರೆ. ಒಂದೊಮ್ಮೆ ಕಾಂಗ್ರೆಸಿಗೆ ಬಲತುಂಬುತ್ತಿದ್ದ ಪರಿಶಿಷ್ಟ ಜಾತಿ ಜನಗಳ ಸಂಖ್ಯೆ ಹತ್ತಿರತ್ತಿರ ಎರಡು ಲಕ್ಷ ಮತ್ತು ಹಿಂದುಳಿದ ವರ್ಗದ ಮತದಾರರು ಕಾಂಗ್ರೆಸ್ ಬೆಂಬಲಿಗ ಬಂಟರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಕಾಂಗ್ರೇಸಿನಿಂದ ಸ್ಪರ್ಧಿಸುವ ಅಭ್ಯರ್ಥಿ ಪದ್ಮರಾಜ್ ಆರ್. ಅವರು ಬಿಲ್ಲವ ಸಮುದಾಯದವರಾಗಿರುತ್ತಾರೆ. ಸಮುದಾಯದ ಜನರ ವಿಶ್ವಾಸಗಳಿಸಿ ಅವರ ಮನಗೆಲ್ಲುವುದರ ಪ್ರಯತ್ನವು ಇವರಿಂದಾಗಬೇಕಿದೆ. ಇವರ ಸತತ ಪ್ರಯತ್ನವು ಗೆಲುವಿನೆಡೆಗೆ ಆಶಾಕಿರಣವಾಗಲಿದೆ.

ಮೈಸೂರಿಗೆ ಆಗಮಿಸಿದ್ದ ಪ್ರಧಾನಿ ಮೋದಿಯವರನ್ನು ಒತ್ತಾಯ ಪೂರ್ವಕವಾಗಿ ಮಂಗಳೂರಿಗೆ ಕರೆಸಲಾಗಿದೆ. ನಾರಾಯಣ ಗುರುಗಳ ಮೂರ್ತಿಗೆ ಮಾಲಾರ್ಪಣೆ ಮಾಡಿಸಿ ಬಿಲ್ಲವ ಸಮುದಾಯದ ಮನಗೆಲ್ಲುವ ಪ್ರಯತ್ನಕ್ಕೆ ಒಂದು ರೀತಿಯ ಹಿನ್ನಡೆಯಾಗಿದೆ. ಗಣರಾಜ್ಯೋತ್ಸವಕ್ಕೆ ನಾರಾಯಣಗುರುಗಳ ಸ್ತಬ್ದ ಚಿತ್ರದ ಪ್ರದರ್ಶನಕ್ಕೆ ಮೋದಿ ಸರಕಾರದ ನಿರಾಕರಣೆ ಮತ್ತು ಗುರುಗಳ ಪಾಠವನ್ನು ಪಠ್ಯಪುಸ್ತಕದಿಂದ ತೆಗೆಸಿರುವ ಬಿಜೆಪಿ ➚



ಜನರ ಬದುಕಿನ ಬವಣೆಗಳು ಹಾಗೂ ಅಭಿವೃದ್ಧಿಯ ಪ್ರಶ್ನೆಗಳನ್ನು ಮರೆಮಾಡಿ ಜಾತಿಯ ಅಸ್ಮಿತೆಗಳು ಮುಂಚೂಣಿಗೆ ಬರುವ ಪ್ರವೃತ್ತಿ ಈಗಿಗ ಹೆಚ್ಚುತ್ತಿದೆ. ಹೇಳಿಕೇಳಿ ಕರ್ನಾಟಕದಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ರಾಜಕೀಯವಾಗಿ ಪ್ರಬಲವಾಗಿರುವಂತಹ ಸಮುದಾಯಗಳೆಂದು ಗುರುತಿಸಿಕೊಂಡಿವೆ. ಲಿಂಗಾಯತ ನಾಯಕತ್ವದ ಚರ್ಚೆ ಸದ್ಯಕ್ಕೆ ಅಷ್ಟಾಗಿಲ್ಲದಿದ್ದರೂ ಮುನ್ನಲೆಗೆ ಈಗ ಬಂದ ವಿಚಾರ ಹಾಗೂ ಸದ್ಯ ಕರ್ನಾಟಕದ ರಾಜಕಾರಣದಲ್ಲಿ ಲೋಕಸಭಾ ಚುನಾವಣಾ ಹಿನ್ನಲೆಯಲ್ಲಿ ಎದ್ದಿರುವ ವಿಚಾರವೆಂದರೆ, ಅದು "ಒಕ್ಕಲಿಗ ರಾಜಕಾರಣ". ಲೋಕಸಭಾ ಚುನಾವಣಾ ದೃಷ್ಟಿಯಿಂದ ಹಾಗೂ ಅಸ್ಮಿತೆಯ ದೃಷ್ಟಿಯಿಂದ ಸದ್ಯಕ್ಕೆ ಎದ್ದಿರುವ ತಲೆದೋರಿರುವ ಪ್ರಶ್ನೆ ಮತ್ತು ರಾಜಕಾರಣದ ನಾಯಕತ್ವ ಮುನ್ನಲೆಗೆ ಬಂದಿರುವುದು ಈ ಒಕ್ಕಲಿಗ ಸಮುದಾಯದ ವಿಚಾರ.

ಮುನ್ನಲೆಗೆ ಬಂದ ಒಕ್ಕಲಿಗ ರಾಜಕಾರಣದ ಜಿದ್ದಾಜಿದ್ದಿ. ಇದ್ಯಾಕೆ ಹೀಗೆ?



ವಿಶೇಷ ವರದಿ: **ಸಂಧ್ಯಾ ಸೊರಬ**

ಅಂದ್ಹಾಗೆ ಲೋಕಸಭಾ ಚುನಾವಣೆಗೆ ದಿನಾಂಕ ಘೋಷಣೆಯಾಗುತ್ತಿದ್ದಂತೆಯೇ ಈ ಒಕ್ಕಲಿಗ ಸಮುದಾಯದ ರಾಜಕೀಯ ಬೆಳವಣಿಗೆ ಮುನ್ನೆಲೆಗೆ ಕಾಣಿಸಿಕೊಂಡಿತು. ಅಂದಮಾತ್ರಕ್ಕೆ ಇದು ದಿಢೀರಂತಾಗಲೀ, ಚರ್ಚೆಗಾಗಲೀ ಬಂದ ವಿಷಯವಸ್ತುವಲ್ಲ. ಈ ಒಕ್ಕಲಿಗ ನಾಯಕತ್ವದ ಮೇಲೆ ರಾಜ್ಯದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಈ ಮೂರು ಪಕ್ಷಗಳಿಗೂ ಕಣ್ಣುಬಿದ್ದಾಗಿದೆ. ಈಗಾಗಲೇ ಹೇಳಿದಂತೆ ರಾಜಕೀಯವಾಗಿ ಪ್ರಬಲ ಎಂದು ಗುರುತಿಸಿಕೊಂಡಿರುವ ಈ ಒಕ್ಕಲಿಗ ನಾಯಕತ್ವದ ಹೋರಾಟ ಇಂದು ನಿನ್ನೆಯಿಂದಾಲೀ ಅಥವಾ ಲೋಕಸಭಾ ಚುನಾವಣೆ ಬಂದಿದ್ದರಿಂದಾಗಲೀ ಪ್ರತ್ಯಕ್ಷಗೊಂಡಿಲ್ಲ. ಪಕ್ಷಗಳು ಗೆಲ್ಲಬೇಕೆಂಬ ಹೋರಾಟ ಒಂದುಕಡೆಯಾದರೆ, ಇನ್ನೊಂದು ಕಡೆ ಈ ಸಮುದಾಯಕ್ಕೆ ನಾನು ನಾಯಕನಾಗಬೇಕು ನಾನು ನಾಯಕನಾಗಬೇಕೆಂಬ ವೈಯಕ್ತಿಕ ಅಸ್ಮಿತೆ ಹೆಚ್ಚಾಗಿ ಇರುವುದು ತಲೆದೋರಿದೆ.

ಬದಲಾದ ರಾಜಕಾರಣದ ವ್ಯವಸ್ಥೆಯಲ್ಲಿ ಈ ಬೆಳವಣಿಗೆಯಾದರೂ, ಈ ಹಿಂದಿನ ಕರ್ನಾಟಕ ರಾಜಕಾರಣವನ್ನು ನೋಡಲು ಹೋದರೆ, ದೇಶದಲ್ಲಿ ನಡೆದಂತಹ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಅಂದಿನ ಮೈಸೂರು ರಾಜ್ಯದ ಸಿಎಂ ಆಗಿದ್ದಂತಹ ರಾಮನಗರ (ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ್ದ) ಅಂದಿನ ಒಕ್ಕಲಿಗ ಸಮುದಾಯಕ್ಕೆ ಸೇರಿದ್ದ ಕೆಂಗಲ್‌ಹನುಮಂತಯ್ಯ, ರಾಮನಗರದವರೇ ಆಗಿದ್ದರೂ ಒಕ್ಕಲಿಗ ಪಾರುಪತ್ಯಕ್ಕಾಗಲೀ, ನಾಯಕತ್ವಕ್ಕಾಗಲೀ ಕೇಳಿದವರಲ್ಲ. ಬಳಿಕ ಮಾಜಿ ಸಿಎಂ ಕೆ.ಸಿ.ರೆಡ್ಡಿ ಇದೇ ಸಮುದಾಯಕ್ಕೆ ಸೇರಿದ್ದರೂ ನಾಯಕತ್ವಕ್ಕಾಗಿ ಇವರ ಮಧ್ಯೆ ಸ್ಪರ್ಧೆಯಾಗಲೀ ವೈಷಮ್ಯವಾಗಲೀ ಏರ್ಪಟ್ಟಿರಲಿಲ್ಲ.

ಒಕ್ಕಲಿಗ ಸಮುದಾಯದಿಂದ ಕರ್ನಾಟಕಕ್ಕೆ 6 ಜನ ಮುಖ್ಯಮಂತ್ರಿಯಾಗಿದ್ದಾರೆ. ಹಿಂದೆ ಕಾಂಗ್ರೆಸ್ಸಿನಿಂದ ಎಸ್.ಎಂ.ಕೃಷ್ಣ ಸಿಎಂ ಆಗಿದ್ದರೂ ಹೆಚ್.ಡಿ.ದೇವೇಗೌಡರಿಗೂ ಇವರಿಗೂ ಒಕ್ಕಲಿಗ ಸಮುದಾಯದ ಹೋರಾಟ ಸಣ್ಣದಾಗಿತ್ತು ಎನ್ನುತ್ತವೆ ಮೂಲಗಳು. ಅಂದಿನ ಮೈಸೂರು ರಾಜ್ಯ ಅಂದರೆ, ಹಳೆಯ ಮೈಸೂರು ಭಾಗದ ಹತ್ತು ಜಿಲ್ಲೆಗಳಲ್ಲಿ ಒಕ್ಕಲಿಗರ ಪ್ರಾಧಾನ್ಯತೆ ಹೆಚ್ಚಾಗಿದ್ದರೂ, ಅತೀ ಹೆಚ್ಚು ಒಕ್ಕಲಿಗ ಸಮುದಾಯವನ್ನು ಮಂಡ್ಯ ಮತ್ತು ಹಾಸನದಲ್ಲಿ ಕಾಣಬಹುದು. ಮಂಡ್ಯದಲ್ಲಿ ಶೇ.35, ಹಾಸನ ಜಿಲ್ಲೆಯಲ್ಲಿ ಶೇ.40 ಇರಬಹುದು. ಹಳೆಯ ಮೈಸೂರು ಭಾಗದಲ್ಲಿ ಮೂರು ಜಿಲ್ಲೆಗಳಲ್ಲಿ ಈಗ ಮಾತ್ರ ಒಕ್ಕಲಿಗರ ಪ್ರಾಬಲ್ಯ ಕಂಡುಬರುತ್ತಿದೆ.

ಗಮನಾರ್ಹ ವಿಷಯವೇನೆಂದರೆ, ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಇದೇ ಸಮುದಾಯಕ್ಕೆ ಸೇರಿದವರು, ಇನ್ನು ಜೆಡಿಎಸ್‌ನ ಹೆಚ್.ಡಿ.ಕುಮಾರಸ್ವಾಮಿ,ಬಿಜೆಪಿಯತ್ತಬರೋದಾದ್ರೆ ಆರ್.ಅಶೋಕ್, ಅಶ್ವತ್ಥನಾರಾಯಣ ಇದ್ದರೂ ಅವರೆಂದಿಗೂ ಒಕ್ಕಲಿಗರ ನಾಯಕರಾಗಲೇ ಇಲ್ಲ. ಅವರು ಪಕ್ಷಕ್ಕಷ್ಟೇ ಸೀಮಿತವಾದರು. ಹೆಚ್.ಡಿ. ದೇವೇಗೌಡರು ರಾಜಕಾರಣಕ್ಕೆ ಬಂದ ನಂತರ ಒಕ್ಕಲಿಗರ ಅಸ್ಮಿತೆ ಎನ್ನುವುದು ಸೃಷ್ಟಿಯಾಯಿತು. ಅಧಿಕಾರದಲ್ಲಿ ಅವರು ಇರೋವರೆಗೂ ಈ ಸಮಾಜ ಅವರನ್ನು ಬೆಂಬಲಿಸುತ್ತಾ ಬಂದಿತು. ದೊಡ್ಡಗೌಡರು ಒಕ್ಕಲಿಗರ ಪ್ರಶ್ನಾತೀತ ನಾಯಕರಾಗಿದ್ದರು. ಇವರ ನಂತರ ಎರಡು ಬಾರಿ ಬೇರೆ ಪಕ್ಷಗಳ ಮೈತ್ರಿಯಿಂದ ಸಿಎಂ ಆಗಿದ್ದಂತಹ ಹೆಚ್.ಡಿ.ಕುಮಾರಸ್ವಾಮಿ, ತಮ್ಮ ತಂದೆಯ ಒಕ್ಕಲಿಗ ನಾಯಕತ್ವವನ್ನು ಮುಂದುವರೆಸಲು ಪೈಪೋಟಿಗೆ ಬಿದ್ದಂತಿದೆ.

ಬಿಜೆಪಿ, ಕುಸಿಯುತ್ತಿದ್ದ ತೆನೆಹೊತ್ತ ಮಹಿಳೆಯ ಜೊತೆ ಸಖ್ಯ ಬೆಳೆಸಿ ಬೆಲ ನೀಡಲು ಹೊರಟಿದೆಯೋ ಅಥವಾ ಈ ಬಾರಿ ಹಳೆಯ ಮೈಸೂರು ಭಾಗವನ್ನು ಟಾರ್ಗೆಟ್ ಮಾಡಿದ್ದಕ್ಕಾಗಿಯೇ ಕರ್ನಾಟಕದಲ್ಲಿ ಒಕ್ಕಲಿಗ ಸಮುದಾಯವನ್ನು ಗುರಿಯಾಗಿಸಿಕೊಂಡೇ ಮೈತ್ರಿ ಮಾಡಿಕೊಂಡಿತೋ ಗೊತ್ತಿಲ್ಲ. ಒಟ್ಟು ಎರಡೂ ಲೆಕ್ಕಾಚಾರದಡಿ ಈ ಮೈತ್ರಿಯಾಗಿದ್ದಂತೂ ನಿಜ.

ಕಳೆದ ವಿಧಾನಸಭಾ ಚುನಾವಣೆ ವೇಳೆ ಒಕ್ಕಲಿಗ ಸಮುದಾಯದಿಂದ 41 ಸ್ಥಾನಗಳನ್ನಾದರೂ ಪಡೆಯುತ್ತೇನೆ ಎಂಬ ಲೆಕ್ಕಾಚಾರ ಹೆಚ್.ಡಿ.ಕುಮಾರಸ್ವಾಮಿಗೆ ಇತ್ತು. ಆದರೆ, ಆಗಿದ್ದೇ ಉಲ್ಟಾ. ಇದೇ ಚುನಾವಣೆ ವೇಳೆ ಒಕ್ಕಲಿಗ ಸಮುದಾಯದವರು ಸಿಎಂ ಆಗುತ್ತಾರೆ ಎನ್ನುವ ಸೂಚನೆಯೊಂದನ್ನು ಡಿ.ಕೆ.ಶಿವಕುಮಾರ್ ಕೊಟ್ಟಿದ್ದರು. ಅದಕ್ಕಾಗಿ ಸಮುದಾಯದ ಮತಗಳನ್ನು ಸಹ ಅವರು ಕ್ರೋಢೀಕರಿಸಿದ್ದರು.

ಇನ್ನು ಇತ್ತೀಚೆಗೆ ಬಿಜೆಪಿ ಮೈತ್ರಿಯಾದ ಬಳಿಕ ನೋಡುವುದಾದರೆ, ರಾಜ್ಯಸಭೆ ಮತ್ತು ಎಂಎಲ್ಸಿ ಚುನಾವಣೆಯಲ್ಲಿ ಜೆಡಿಎಸ್ ಸೋತು ಸುಣ್ಣವಾಗಿದೆ. ಈಗ ಮಂಡ್ಯ, ಹಾಸನ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಒಕ್ಕಲಿಗ ಮತಗಳ ಮೇಲೆ ಕಣ್ಣಿಟ್ಟು ತೆನೆಹೊತ್ತ ಮಹಿಳೆಗೆ ಕಮಲದಡಿ ಜೀವಕೊಡಲು ಹೊರಟಿದ್ದಾರೆ.

ಹಾಸನ ಜಿಲ್ಲೆ ಹೆಚ್.ಡಿ.ಕುಮಾರಸ್ವಾಮಿಗೆ ಜನ್ಮಭೂಮಿ, ರಾಮನಗರ ಕರ್ಮಭೂಮಿ ಈಗ ಅವರ ಹಾದಿ ಮಂಡ್ಯದತ್ತ. ಇದ್ಯಾವ ಭೂಮಿಯಾಗಲಿದೆಯೋ ಗೊತ್ತಿಲ್ಲ? ಅದಿರಲೀ, ಬೆಂಗಳೂರು ಗ್ರಾಮಾಂತರದಲ್ಲಿ ಡಿಕೆಶಿ ಸಹೋದರ ಡಿ.ಕೆ.ಸುರೇಶ್ ಸ್ಪರ್ಧೆಗೆ ಲೋಕಸಭಾ ಕಣಕ್ಕೆ ಕೈನಿಂದ ಕಣಕ್ಕಿಳಿದಿದ್ದರೂ ಅದು ಮುಖ್ಯವೆನ್ನುವುದು ಎನ್ನುವುದಕ್ಕಿಂತ ಇಲ್ಲಿ ಒಕ್ಕಲಿಗರ ಲೆಕ್ಕಾಚಾರದಲ್ಲಿ ಇಲ್ಲಿನ ಉಸ್ತುವಾರಿಯನ್ನಾಗಿ ಇದೇ ಸಮುದಾಯಕ್ಕೆ ಸೇರಿದ್ದ ಹಿಂದೆ ರಾಮನಗರ ಜಿಲ್ಲೆಯ ಉಸ್ತುವಾರಿಯಾಗಿದ್ದಂತಹ ಅಶ್ವತ್ಥನಾರಾಯಣರನ್ನು ಚುನಾವಣಾ ಉಸ್ತುವಾರಿಗೆ ಬಿಜೆಪಿ ಹಾಕಿರುವುದು ಗಮನಾರ್ಹ.

ಈ ಎಲ್ಲಾ ಬೆಳವಣಿಗೆಗೆ ಪುಷ್ಟಿ ನೀಡುವಂತೆ ಮೂರು ದಿನಗಳ ಹಿಂದೆ ಆದಿಚುಂಚನಗಿರಿ ಮಠಕ್ಕೆ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿಯ ಕೆಲ ಒಕ್ಕಲಿಗ ಸಮುದಾಯದ ನಾಯಕರೂ ಸೇರಿದಂತೆ ಇನ್ನೂ ಒಂದಿಬ್ಬರ ಜೊತೆ ಭೇಟಿ ನೀಡಿದ್ದರು. ಮಠದಿಂದ ಒಕ್ಕಲಿಗ ಸಮುದಾಯದ ಮತಗಳಿಗೆ ಸಂದೇಶ ಹೋಗಬೇಕು. ತಮ್ಮನ್ನು ಅಂದರೆ ಹೆಚ್.ಡಿ.ಕುಮಾರಸ್ವಾಮಿಗೆ ಬೆಂಬಲವನ್ನು ಸ್ವಾಮೀಜಿಗಳಿಂದ ಪರೋಕ್ಷವಾಗಿ ಪಡೆಯಬೇಕು ಎಂಬ ಲೆಕ್ಕಾಚಾರ ಹಿಂದೆ ಇದ್ದೇ ಇತ್ತು. ಹೀಗೆ ಭೇಟಿ ನೀಡಿದ್ದೇ ತಡ, ಡಿ.ಕೆ.ಶಿವಕುಮಾರ್, ಮಠಕ್ಕೆ ಸರ್ಕಾರವನ್ನು ಅಂದರೆ ಬಿಜೆಪಿ-ಜೆಡಿಎಸ್ ಮೈತ್ರಿಯ ಹಿಂದಿನ ಉರುಳಿಸಿವರ ಜೊತೆಗೆಯೇ ಕುಮಾರಸ್ವಾಮಿ ಭೇಟಿ ಕೊಟ್ಟಿದ್ದಾರೆ. ಅಲ್ಲದೇ ಮಠಕ್ಕೆ ಸೇರಿದ್ದ ಸ್ವಾಮೀಜಿಯೊಬ್ಬರ ಫೋನ್ ಟ್ಯಾಪಿಂಗ್ ಹೆಚ್.ಡಿ.ಕುಮಾರಸ್ವಾಮಿ ಮಾಡಿದ್ದಾರೆ ಅದಕ್ಕೆ ಸಾಕ್ಷಿಯೂ ಇದೆ. ಸಮಯಬಂದಾಗ ಹೇಳುತ್ತೇನೆ ಎಂದಿದ್ದಾರೆ. ಸರ್ಕಾರವನ್ನು ಉಳಿಸಿಕೊಳ್ಳಲು ನಾನು ಪ್ರಯತ್ನ ಪಟ್ಟಿನಾದರೂ ಅದು ಸಾಧ್ಯವಾಗಲಿಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಮುನ್ನಲೆಗೆ

ಅದೇನೇ ಆಗಲೀ ಸದ್ಯಕ್ಕೆ ಕರ್ನಾಟಕ ಲೋಕಸಭಾ ಚುನಾವಣೆಯಲ್ಲಿ ಎದ್ದಿರುವ "ಒಕ್ಕಲಿಗರ ನಾಯಕ ಜಿದ್ದಾಜಿದ್ದಿ"ಗೆ ಚುನಾವಣಾ ಫಲಿತಾಂಶವೇ ಉತ್ತರ ಹೇಳಬೇಕು. ಈ ನಾಯಕತ್ವದ ಹೋರಾಟ ಫಲಿತಾಂಶ ಬರೋವರೆಗೂ ಇರುತ್ತದೆಯೋ ಅಥವಾ ಹಾಗೆಯೇ ಇನ್ನೂ ಮುಂದುವರೆಯುತ್ತದೆಯೋ ಅನ್ನೋದನ್ನು ಕಾದು ನೋಡಬೇಕಿದೆ.

ಕ್ರಮವನ್ನು ಸಂದರ್ಭೋಚಿತವಾಗಿ ಬಿಜೆಪಿ ವಿರೋಧಿಗಳು ಪ್ರಚಾರ ಪಡಿಸಿದ್ದರಿಂದ ಪ್ರಧಾನಿಯವರ ಮಂಗಳೂರು ಕಾರ್ಯಕ್ರಮವು ಹೆಚ್ಚು ಫಲಪ್ರದವಾಗಿಲ್ಲ.

ಪ್ರಚಾರ ಕಾರ್ಯಗಳಲ್ಲಿ ಪದ್ಮರಾಜ್ ರವರು ಕಾರ್ಯಕರ್ತರ ಜತೆಗೂಡಿ ಪೇಟೆ ಬದಿಗಳಲ್ಲಿ ಜನಸಂಪರ್ಕ ನಡೆಸುತ್ತಿದ್ದಾರೆ. ಬಿಜೆಪಿಯ ಬ್ರಜೇಶ್ ಚೌಟರ ಪರವಾಗಿ ಕಾರ್ಯಕರ್ತರಿಂದ ಮನೆ ಮನೆ ಭೇಟಿ ನಡೆಯುತ್ತಿದೆ. ಅಭಿವೃದ್ಧಿಗೆ ಮಾರಕವಾಗಿರುವ ಕೋಮುವಾದಿಗಳನ್ನು ಜನರಿಂದ ಪ್ರತ್ಯೇಕಿಸುವ ಕಾರ್ಯವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಬೇಕಿದೆ. ಆ ಮೂಲಕ ಇಲ್ಲಿನ ಸೌಹಾರ್ದ ಪರಂಪರೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತರಬೇಕು. ಆ ಕಾರಣಕ್ಕಾಗಿ ಜಿಲ್ಲೆಯ ಎಡಪಕ್ಷಗಳು ಮತ್ತು ಜನಪರ ಸಂಘಟನೆಗಳು ಒಂದಾಗಿ ಬಿಜೆಪಿಯನ್ನು ಸೋಲಿಸುವ ಪ್ರಯತ್ನದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಬಿರುಸುಗೊಳಿಸಿವೆ. ಪ್ರಜಾಪ್ರಭುತ್ವ ಉಳಿಸಿ, ಸಂವಿಧಾನ ರಕ್ಷಿಸಿ, ಕೋಮುವಾದ ಅಳಿಸಿ, ದೇಶ ಉಳಿಸಿ, ಎಂಬ ಘೋಷ ವಾಕ್ಯಗಳೊಂದಿಗೆ ಸಿಪಿಐ(ಎಂ) ಪಕ್ಷವು ಕಾರ್ಯ ಪ್ರವೃತ್ತಗೊಂಡಿದೆ.

ಮಾರ್ಚ್ 19ರಂದು ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆಯನ್ನು ಬೋಳಾರದ ಎಕೆಜಿ ಭವನದಲ್ಲಿ ಸಂಘಟಿಸಲಾಗಿದೆ. ಜಿಲ್ಲೆಯ ಅಭಿವೃದ್ಧಿಗೆ ಕಾಳಜಿ ವಹಿಸದ ಬಿಜೆಪಿಯಿಂದಾಗಿ ವಿದ್ಯಾಭ್ಯಾಸ ಮುಗಿಸಿ ಹೊರಬರುತ್ತಿರುವ ವಿದ್ಯಾರ್ಥಿಗಳು ನಿರುದ್ಯೋಗದ ಸಮಸ್ಯೆಗೆ ಸಿಲುಕುತ್ತಿದ್ದಾರೆ. ಸೌಹಾರ್ದ ಪರಂಪರೆಗೆ ಬಿಜೆಪಿಯ ಸಂಘ ಪರಿವಾರವು ನಿರಂತರ ತೊಡಕುಂಟು ಮಾಡುತ್ತಿರುವುದನ್ನು ಕಾರ್ಯಕರ್ತರಿಗೆ ಮನನ ಮಾಡಿಸಿ ಜಿಲ್ಲೆಯಲ್ಲಿ ಬಿಜೆಪಿಯನ್ನು ಸೋಲಿಸುವ ಪ್ರಯತ್ನದಲ್ಲಿ ಎಲ್ಲರೂ ಕೈಜೋಡಿಸಬೇಕೆಂದು ಈ ಸಭೆಯಲ್ಲಿ ಕರೆ ನೀಡಲಾಯಿತು.

ಮಾರ್ಚ್ 24 ರಿಂದ ಏಪ್ರಿಲ್ ಏಳರವರೆಗೆ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಸಿಪಿಐ(ಎಂ) ನ ತಾಲೂಕು ಸಮಿತಿ ಮತ್ತು ನಗರ ಸಮಿತಿಗಳ ನೇತೃತ್ವದಲ್ಲಿ ರಾಜಕೀಯ ಸಮಾವೇಶಗಳನ್ನು ಸಂಘಟಿಸಲಾಗಿದೆ. ಗುರುಪುರ, ಉಳ್ಳಾಲ ತಾಲೂಕು ಮಂಗಳೂರು ನಗರ, ಮಂಗಳೂರು ದಕ್ಷಿಣ, ಮಂಗಳೂರು ಉತ್ತರ, ಮುಡಿಪು, ಮೂಡಬಿದ್ರೆ, ಬೆಳ್ತಂಗಡಿ ತಾಲೂಕು ಮಟ್ಟದ ಸಮಾವೇಶಗಳಲ್ಲಿ ಪಕ್ಷದ ಹಿತೈಷಿಗಳು ಭಾಗವಹಿಸಿದ್ದರು. 15 ಏಪ್ರಿಲ್ 2024ರಂದು ನಗರದ ಪುರಭವನದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ "ಜನಸಮಾವೇಶ" ವನ್ನು ಸಂಘಟಿಸಲಾಗಿದೆ. ಈ ಸಮಾವೇಶವು "ಇಂಡಿಯಾ" ಒಕ್ಕೂಟದ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಕರೆ ನೀಡಿದೆ.

ಸಿಪಿಐ(ಎಂ) ನ ಮುತುವರ್ಜಿಯಲ್ಲಿ ಸಂಘಟಿಸಿದ ಈ ಸಮಾವೇಶದಲ್ಲಿ ಸಿಪಿಐ, ಜಾತ್ಯಾತೀತ ಜನತಾದಳದ ಅಲ್ಪ ಸಂಖ್ಯಾತ ಘಟಕದ ಮುಂದಾಳುಗಳು, ಕಾರ್ಯಕರ್ತರು, ಆಮ್ ಆದ್ಮಿ ಪಕ್ಷ, ವಿವಿಧ ಜನಪರ ಸಂಘಟನೆಯ ಕಾರ್ಯಕರ್ತರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಪತ್ರಕರ್ತ ನವೀನ್ ಸೂರಿಂಜೆ ಮತ್ತು ಮುನೀರ್ ಕಾಟಿಪಳ್ಳ ಅವರು ಜಂಟಿಯಾಗಿ ಪ್ರಕಟಿಸಿದ "ಕರಾವಳಿ ಪತನ ಚರಿತ್ರೆ" ಕಿರು ಪುಸ್ತಕವನ್ನು ಬಿಡುಗಡೆ ಗೊಳಿಸಲಾಯಿತು. ಮತ್ತು ಕರಾವಳಿ ಜನರ ಸೌಹಾರ್ದ ಬದುಕು ಮತ್ತು ಕರಾವಳಿಯ ಅಭಿವೃದ್ಧಿಗಾಗಿ ಬಿಜೆಪಿಯನ್ನು ಸೋಲಿಸಬೇಕೆಂಬ ಮನವಿ ಪತ್ರವನ್ನು ಬಿಡುಗಡೆ ಮಾಡಲಾಯಿತು.

ಜಿಲ್ಲೆಯಲ್ಲಿ ಒಟ್ಟು 72ಸ್ಕ್ವಾಡ್ ಗಳು ಮನೆ ಮನೆ ಭೇಟಿ ನೀಡುವ ಕಾರ್ಯವನ್ನು ಮಾರ್ಚ್ 31ರಂದು ನಡೆಸಿದೆ. ಈ ಕಾರ್ಯವನ್ನು ಪಕ್ಷದ ವತಿಯಿಂದಲೇ ಮುಂದುವರಿಸಲಾಗುತ್ತಿದೆ. ಸಂಘಟನಾ ವ್ಯಾಪ್ತಿಯ ಮೂರ್ನಾಲ್ಕು ಆಯ್ದ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲು ಅಂದಾಜಿಸಲಾಗಿದೆ ಎಂಬುದಾಗಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿಯವರು ತಿಳಿಸಿದ್ದಾರೆ.

ಆದಿವಾಸಿ ಯೋಜನೆಗೆ ಅನುದಾನ ಶೇ.8.6 ಬದಲು ಕೇವಲ ಶೇ.2.7

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಕೊಟ್ಟಿಕೊಂಡದ್ದೇನು?

ಕಳೆದ ಹತ್ತು ವರ್ಷಗಳು ಆದಿವಾಸಿ (ಬುಡಕಟ್ಟು) ವ್ಯವಹಾರಗಳ ಸಚಿವಾಲಯದ ಬಜೆಟ್‌ನಲ್ಲಿ ಅನುದಾನ ಮೂರು ಪಟ್ಟು ಹೆಚ್ಚಳವಾಗಿದೆ. ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿನ ಕ್ರಿಯಾ ಯೋಜನೆಯಲ್ಲಿ ಅನುದಾನ 5.5 ಪಟ್ಟು ಹೆಚ್ಚಳವಾಗಿದೆ. ಕಳೆದ ಹತ್ತು ವರ್ಷಗಳು ಅತೀಸೂಕ್ಷ್ಮ ಅಳಿವಿನಂಚಿನಲ್ಲಿರುವ ಬುಡಕಟ್ಟು ಜನಸಂಖ್ಯೆಗಳನ್ನು ಹೊಂದಿರುವ ರಾಜ್ಯಗಳಿಗೆ 25,000 ಕೋಟಿ ಅನುದಾನ ನೀಡಲಾಗಿದೆ.

ಕಳೆದ ಹತ್ತು ವರ್ಷಗಳ ಕಾಲಾವಧಿಯಲ್ಲಿ ಏಕಲವ್ಯ ಮಾದರಿ ವಸತಿಶಾಲೆ (ಇ.ಎಂ.ಆರ್.ಎಸ್)ಗೆ 21 ಪಟ್ಟು ಜಾಸ್ತಿ ಬಜೆಟ್ ಅನುದಾನ ನೀಡಲಾಗಿದೆ. ಇ.ಎಂ.ಆರ್.ಎಸ್. ಸಂಖ್ಯೆ 402 ಆಗಿದೆ ಮತ್ತು ಈ ವಸತಿ ಶಾಲೆಯಲ್ಲಿ 2013–14 ರಲ್ಲಿ 34,365 ರಷ್ಟು ವಿದ್ಯಾರ್ಥಿಗಳು ಸೇರ್ಪಡೆಯಾಗಿದ್ದರು. ಅದು 2023–24 ರಲ್ಲಿ 1,32,275 ಕ್ಕೆ ಏರಿದೆ.

ಬುಡಕಟ್ಟು ಸಚಿವಾಲಯದಿಂದ ಪ್ರತಿ ವರ್ಷ ವಿವಿಧ ರೀತಿಯ ವಿದ್ಯಾರ್ಥಿ ವೇತನವನ್ನು 30 ಲಕ್ಷ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಸುಮಾರು 18 ಸಾವಿರ ಕೋಟಿ ರೂ. ಮೊತ್ತದ ವಿದ್ಯಾರ್ಥಿ ವೇತನ ಪಾವತಿಸಲಾಗಿದೆ.

ಕಳೆದ ದಶಕದಲ್ಲಿ ಸ್ವಚ್ಛ ಭಾರತ ಮಿಷನ್ನಿನಡಿಯಲ್ಲಿ 148 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ಬುಡಕಟ್ಟು ಸಮುದಾಯ ವಾಸಿಸುವ ಪ್ರದೇಶಗಳ ಆರ್ಥಿಕ ಅಭಿವೃದ್ಧಿಗೆ ಒತ್ತು ಕೊಡುವುದು ಸರ್ಕಾರದ ಆದ್ಯತೆಯ ಅಂಶವಾಗಿದೆ. ಸುಮಾರು 200 ಕ್ಕೂ ಹೆಚ್ಚಿನ ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಜನ ಸಮುದಾಯದ ಮಧ್ಯೆ, ಶಿಕ್ಷಣ ಆರೋಗ್ಯ ಮತ್ತು ಜೀವನೋಪಾಯದ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತವಾಗಿದೆ. ಅವುಗಳ ಕಳೆದ 10 ವರ್ಷಗಳ ಅವಧಿಯಲ್ಲಿ ಸುಮಾರು 250 ಕ್ಕೂ ಹೆಚ್ಚು ಕಲ್ಯಾಣ ಯೋಜನೆಗಳ ಅಡಿಯಲ್ಲಿ (ಸ್ಕೀಮ್‌ಗಳಲ್ಲಿ) 900 ಕೋಟಿಗೂ ಮಿಕ್ಕಿದ ಅನುದಾನವನ್ನು ಪಡೆದಿದೆ.

ವಾಸ್ತವ ಏನು?

ಅಭಿವೃದ್ಧಿ ಯೋಜನೆಗೆ ಸಂಬಂಧಿಸಿ ಬುಡಕಟ್ಟು ಅಭಿವೃದ್ಧಿ ಯೋಜನೆ (ಟಿ.ಎಸ್.ಎಸ್.) ಗೆ 2023–24ರ ಬಜೆಟ್ಟಿನಲ್ಲಿ ಶೇ.2.7 ಮಾತ್ರ ನೀಡಲಾಗಿದೆ. (ಆದಿವಾಸಿ ಸಮುದಾಯದ ಜನಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಇದು ಶೇ.8.6 ರಷ್ಟು ಆಗಬೇಕಿತ್ತು) 2024–25 ರ ಮಧ್ಯಂತರ ಬಜೆಟ್‌ನಲ್ಲಿ ಇದನ್ನು ಮತ್ತಷ್ಟು ಕಡಿತ ಮಾಡಿ ಶೇ. 2.5 ನೀಡಲಾಗಿದೆ. ಬಿಜೆಪಿ ಆಳ್ವಿಕೆಯ ಎಲ್ಲಾ ವರ್ಷಗಳಲ್ಲಿ ಬಜೆಟ್ ಅನುದಾನ ಸರಿಸುಮಾರು ಇದೇ ಮಾದರಿಯಲ್ಲಿತ್ತು.

ಅತ್ಯಂತ ಕನಿಷ್ಠ ಪ್ರಮಾಣ ಬಜೆಟ್ ಅನುದಾನವನ್ನೂ ಖರ್ಚು ಮಾಡಿರುವುದಿಲ್ಲ. ಉದಾಹರಣೆಗಳು; 2023–2024 ರಲ್ಲಿ ಬುಡಕಟ್ಟು ಸಚಿವಾಲಯವು ಸುಮಾರು ಶೇ.39 ಮೀಸಲಿಟ್ಟ ಅನುದಾನವನ್ನು ಖರ್ಚು ಮಾಡಲೇ ಇಲ್ಲ.

ಸರ್ಕಾರ ಬುಡಕಟ್ಟು ಸಮುದಾಯದ ಕಲ್ಯಾಣಕ್ಕೆ ಮೀಸಲಿಟ್ಟ ಬಜೆಟ್ ಅನುದಾನವನ್ನು ಇತರೆ ಉದ್ದೇಶಕ್ಕೆ ಖರ್ಚು ಮಾಡಿದೆ.

ಆದಿವಾಸಿ ಸಮುದಾಯದ ಮಟ್ಟಿಗೆ ಸಾಮಾಜಿಕ ಕಲ್ಯಾಣ ಕ್ಷೇತ್ರಗಳಾದ ಮನರೇಗ, ಸಾರ್ವಜನಿಕ ವಿತರಣಾ ವ್ಯವಸ್ಥೆ, ಶಿಕ್ಷಣ ಮತ್ತು ಆರೋಗ್ಯ ಇವುಗಳಲ್ಲಿ ತೀವ್ರ ಪ್ರಮಾಣದಲ್ಲಿ ಅನುದಾನ ಕಡಿಮೆ ಮಾಡಲಾಗಿದೆ. 2024–2025 ರ ಮಧ್ಯಂತರ ಬಜೆಟ್‌ನಲ್ಲಿ ಮನರೇಗ ಯೋಜನೆಗೆ ಕೇವಲ 86,000 ಕೋಟಿಗಳನ್ನು ಮಾತ್ರ ನೀಡಲಾಗಿದೆ. ಉದ್ಯೋಗ ಜಾಬ್ ಕಾರ್ಡ್ ಹೊಂದಿರುವವರಿಗೆ ಮತ್ತು ಕೆಲಸ ಬಯಸುವವರಿಗೆ ಕನಿಷ್ಠ 100 ದಿನಗಳ ಉದ್ಯೋಗವನ್ನು ಖಚಿತಪಡಿಸಿಕೊಳ್ಳಲು 2 ಲಕ್ಷ ಕೋಟಿ ರೂಪಾಯಿ ಬೇಕಾಗುತ್ತದೆ.

ಶೌಚಾಲಯ

ಸರ್ಕಾರವೇ ನಡೆಸಿರುವ ಸರ್ವೆ(ಎನ್.ಎಫ್.ಎಚ್.ಎಸ್)ಯ ಪ್ರಕಾರ ಆದಿವಾಸಿ ಸಮುದಾಯಗಳಲ್ಲಿ ಸುಮಾರು ಶೇ.32 ಕುಟುಂಬಗಳಿಗೆ ಯಾವುದೇ ತೆರವಾದ ಶೌಚಾಲಯ ವ್ಯವಸ್ಥೆ ಇಲ್ಲ.

ಜೀವನೋಪಾಯ

2021–22ರಿಂದ ಈಚೆಗೆ ಆದಿವಾಸಿಗಳು ಸಂಗ್ರಹಿಸುವ ಅರಣ್ಯ ಕಿರು ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಯಲ್ಲಿ ಖರೀದಿಸಲು ಸರ್ಕಾರ ಅನುದಾನವನ್ನೇ ನೀಡಿರುವುದಿಲ್ಲ.

ಶಿಕ್ಷಣ

ಬುಡಕಟ್ಟು ಜನರ ಶಿಕ್ಷಣಕ್ಕೆ ಸಂಬಂಧಿಸಿ ಬಜೆಟ್ ಅನುದಾನದ ಪ್ರಮಾಣದಲ್ಲಿ ಕಡಿತ ಉಂಟಾಗಿದೆ. 2016–17 ರಲ್ಲಿ ಇದಕ್ಕಾಗಿನ ವೆಚ್ಚ ಶೇ.0.08 ಇದ್ದದ್ದು 2023–24 ರಲ್ಲಿ ಶೇ.0.053 ಕ್ಕೆ ಇಳಿಮುಖವಾಗಿದೆ. ಬಹುದೊಡ್ಡ ಸಂಖ್ಯೆಯಲ್ಲಿ ಆದಿವಾಸಿ ಜನ ಸಮುದಾಯ ವಾಸಿಸುವ ಪ್ರದೇಶಗಳಲ್ಲಿದ್ದ ಶಾಲೆಗಳನ್ನು ಮುಚ್ಚಲಾಗಿದೆ ಅಥವಾ ಬೇರೆ ಶಾಲೆಯೊಂದಿಗೆ ವಿಲೀನಗೊಳಿಸಲಾಗಿದೆ.

ಜಾರ್ಖಂಡ್‌ನಲ್ಲಿ, 4,600 ಶಾಲೆಗಳನ್ನು SATH-E (Sustainable Action for Transforming Human Capital – Education- ಮಾನವ ಬಂಡವಾಳವನ್ನು ಪರಿವರ್ತಿಸುವ ಸುಸ್ಥಿರ ಕ್ರಮ–ಶಿಕ್ಷಣ) ಯೋಜನೆಯ ಪ್ರಕಾರ ಮುಚ್ಚಲಾಗಿದೆ! ತ್ರಿಪುರಾದಲ್ಲಿ 2019 ರಲ್ಲಿ 961 ಶಾಲೆಗಳನ್ನು ವಿಲೀನದ ನೆಪದಲ್ಲಿ ಮುಚ್ಚಲಾಗಿದೆ. 2022 ರಲ್ಲಿ ಆಂಧ್ರ ಪ್ರದೇಶ ಸರ್ಕಾರವು 5,900 ಪ್ರಾಥಮಿಕ ಶಾಲೆಗಳ 3–5 ತರಗತಿಗಳನ್ನು ಮುಚ್ಚುವುದಾಗಿ ಮತ್ತು 1–2 ತರಗತಿಗಳನ್ನು ಅಂಗನವಾಡಿಗಳೊಂದಿಗೆ ವಿಲೀನಗೊಳಿಸುವುದಾಗಿ ಘೋಷಿಸಿದೆ.



2015ರ ತನಕ ವಿವಿಧ ರಾಜ್ಯ ಸರ್ಕಾರಗಳು ಸುಮಾರು 70,000 ಶಾಲೆಗಳನ್ನು ಬುಡಕಟ್ಟು ಕಲ್ಯಾಣ ಇಲಾಖೆಗಳು ನಡೆಸುತ್ತಿದ್ದವು. ಅದು 2022–23ರ ವೇಳೆಗೆ, ಅಂತಹ ಶಾಲೆಗಳ ಸಂಖ್ಯೆ 40,000 ಕ್ಕೆ ಇಳಿಮುಖ ಕಂಡಿದೆ.

ಎಲ್ಲಾ ಶಾಲೆಗಳಿಗೆ ಕನಿಷ್ಠ ಉತ್ತಮ ಶಿಕ್ಷಣ ನೀಡುವ ಬದಲು, ಕೇಂದ್ರ ಸರ್ಕಾರವು ಕೆಲವೇ ಕೆಲವು ಏಕಲವ್ಯ ಮಾದರಿ ಶಾಲೆಗಳಿಗೆ ಆದ್ಯತೆ ನೀಡುತ್ತಿದೆ. ಸರ್ಕಾರವು 740 ಏಕಲವ್ಯ ಶಾಲೆಗಳಲ್ಲಿ ಪ್ರಾರಂಭಿಸಲು ಯೋಜಿಸಿದ್ದರೂ, ಈಗ 401 ಮಾತ್ರ ಕಾರ್ಯನಿರ್ವಹಿಸುತ್ತಿವೆ. ಏಕಲವ್ಯ ಶಾಲೆಗಳಲ್ಲಿ 3.5 ಲಕ್ಷ ವಿದ್ಯಾರ್ಥಿಗಳನ್ನು ಓದಿಸುವ ಗುರಿಯಿತ್ತು, ಆದರೆ ಈವರೆಗೆ ಕೇವಲ 1.35 ಲಕ್ಷ ವಿದ್ಯಾರ್ಥಿಗಳು ಮಾತ್ರ ಅಲ್ಲಿ ಓದುತ್ತಿದ್ದಾರೆ.

ಏಕಲವ್ಯ ಮಾದರಿ ಶಾಲೆಗಳಿಗೆ ನೀಡಲಾದ ಅನುದಾನದಲ್ಲಿ, 2023–24 ರಲ್ಲಿ ಶೇ.59 ರಷ್ಟನ್ನು ಖರ್ಚು ಮಾಡಲಾಗಿಲ್ಲ. ಪ್ರಸ್ತುತ ಹೆಚ್ಚಿನ ಎಲ್ಲಾ ಸೌಲಭ್ಯ, ಸಿಬ್ಬಂದಿ ಕೊರತೆ ಇದೆ ಮತ್ತು ಶಿಕ್ಷಕರು ಮತ್ತು ಸಿಬ್ಬಂದಿಗಳ ಒಟ್ಟು ಸಂಖ್ಯೆ 39,000 ರಷ್ಟಿರಬೇಕಿತ್ತು. ಆದರೆ ಕೇವಲ 10,000 ಮಾತ್ರ ಭರ್ತಿ ಮಾಡಲಾಗಿದೆ.

ಸರ್ಕಾರವೇ ಹೇಳಿರುವ ಪ್ರಕಾರ ಶೇ.25 ಹೆಚ್ಚಿನ ಬುಡಕಟ್ಟು ಜನಸಂಖ್ಯೆ ಹೊಂದಿರುವ ದೇಶದ ಸುಮಾರು ಶೇ.15 ಗ್ರಾಮಗಳಲ್ಲಿ ಶಾಲೆಗಳೇ ಇಲ್ಲ.

ಆದಿವಾಸಿ ಬುಡಕಟ್ಟು ಸಮುದಾಯ ವಾಸಿಸುತ್ತಿರುವ ಪ್ರದೇಶಗಳಲ್ಲಿರುವ ಶಾಲೆಗಳ ಪರಿಸ್ಥಿತಿ ಶೋಚನಿಯವಾಗಿದೆ. ಅವುಗಳಲ್ಲಿ ಗಂಭೀರ ಪ್ರಮಾಣದಲ್ಲಿ ಶಿಕ್ಷಕರ ಕೊರತೆ, ಮೂಲಭೂತ ಅವಶ್ಯಕತೆಗಳ ಕೊರತೆ ಇದೆ. ಆಹಾರ ಕಳಪೆ ಗುಣಮಟ್ಟದ್ದು ಆಗಿರುತ್ತದೆ ಅಥವಾ ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಹಲವಾರು ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳೇ ಆಹಾರವನ್ನು ತಯಾರು ಮಾಡಬೇಕಾಗಿದೆ. ವಿದ್ಯಾರ್ಥಿಗಳೇ ಕೆಲವಾರು ಕಡೆ ಆಹಾರ ತಯಾರು ಮಾಡುವುದಲ್ಲದೆ ಸ್ವಚ್ಛತೆ ಮತ್ತು ಇತರೆ ಕೆಲಸಗಳನ್ನು ಸಹ ಮಾಡಬೇಕಾಗಿದೆ.

ಕೋವಿಡ್ ಕಾಲಘಟ್ಟದಲ್ಲಿ ಉಪಕರಣ ಮತ್ತು ವ್ಯವಸ್ಥೆಗಳೇ ಇಲ್ಲದೆ ಆದಿವಾಸಿಗಳು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿ ತೀವ್ರ ತೊಂದರೆ ಅನುಭವಿಸಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳೂ ಶಿಕ್ಷಣವನ್ನೇ ಬಿಟ್ಟು ಬಿಡಬೇಕಾಯಿತು ಮತ್ತು ಕೆಲಸಕ್ಕೆ ಸೇರಿಕೊಂಡರು. ಹಲವಾರು ಪ್ರದೇಶಗಳಲ್ಲಿ ಬಾಲ್ಯ ವಿವಾಹದ ಪ್ರಮಾಣ ಹೆಚ್ಚಾಗಿರುವುದು ಇದೇ ಕಾರಣಕ್ಕಾಗಿ.

ಮೋದಿ ಸರ್ಕಾರ ಜಾರಿಗೆ ತಂದ 2020ರ ರಾಷ್ಟ್ರೀಯ ಶಿಕ್ಷಣ ನೀತಿಯು ಆದಿವಾಸಿ ಸಮುದಾಯದ ಬಹುತ್ವ ಮತ್ತು ಸಂಕರದ ವಿಶಿಷ್ಟ ನೆಲೆಗಟ್ಟಿನ ಸಾಂಸ್ಕೃತಿಕ ಪರಂಪರೆಯ ಮೇಲೆ ಹಲ್ಲೆ ಮಾಡುತ್ತಾ, ಹಿಂದುತ್ವ ಸಂಸ್ಕೃತಿಯ ಯಜಮಾನಿಕೆಯನ್ನು ಹೇರುವ ಕೆಲಸ ಆರಂಭಿಸಿದೆ. ಶಿಕ್ಷಣ, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಬದಲಾವಣೆ ಮೂಲಕ, ಆರ್‌ಎಸ್‌ಎಸ್‌ನ ಹಿಂದುತ್ವ ಅಜೆಂಡಾವನ್ನು ಉತ್ತೇಜಿಸಲು ಏಕಲವ್ಯ ಶಾಲೆಗಳು ಮತ್ತು ಏಕಲ್ ವಿದ್ಯಾಲಯಗಳನ್ನು ಸಹ ಬಳಸಲಾಗುತ್ತಿದೆ. ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮವು, ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸುವ ಹೆಸರಿನಲ್ಲಿ ಏಕಲ ವಿದ್ಯಾಲಯಗಳನ್ನು ಪ್ರಾಯೋಜಿಸಿ ನಡೆಸುತ್ತಿದೆ.

ಕೋಮು ಧ್ರುವೀಕರಣ

ಆದಿವಾಸಿ ಬುಡಕಟ್ಟು ಪ್ರದೇಶಗಳಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್ ಚಟುವಟಿಕೆಗಳ ಪ್ರಮುಖ ಒತ್ತು ಕೋಮು ಧ್ರುವೀಕರಣದ ಮೇಲಿತ್ತು. ಚುನಾವಣಾ ಲಾಭಕ್ಕಾಗಿ ಮತ್ತು ಭೂಮಿ ಮತ್ತು ಖನಿಜ ಸಂಪನ್ಮೂಲಗಳ ಕಾರ್ಪೊರೇಟ್ ದೋಚುವಿಕೆಗೆ ಅನುಕೂಲ ಮಾಡಿಕೊಡಲು ಇದನ್ನು ನಿಯಮಿತವಾಗಿ ಆಶ್ರಯಿಸಲಾಗುತ್ತಿದೆ.

ಆಯ್ದ ಆದಿವಾಸಿ ಗುಂಪುಗಳ ಹಿಂದೂಕರಣವನ್ನು ಮಾಡುವ ಮೂಲಕ ಹಿಂದುತ್ವದ ಅಜೆಂಡಾವನ್ನು ಮುಂದೊತ್ತಲು ಆದಿವಾಸಿ ಪ್ರದೇಶಗಳಲ್ಲಿ ಸಂಘಪರಿವಾರದ ಸಂಘಟನೆಗಳಿಗೆ ಸರ್ಕಾರದ ಹಣವನ್ನು ನೀಡಲಾಗಿದೆ ಮತ್ತು ತಮ್ಮನ್ನು ತಾವು ಹಿಂದೂಗಳೆಂದು ಗುರುತಿಸಿಕೊಳ್ಳದ ಆದಿವಾಸಿಗಳನ್ನು ಗುರಿಯಾಗಿಸಿಕೊಂಡಿದ್ದಾರೆ. ಆದಿವಾಸಿಗಳ ಮೇಲೆ ಬ್ರಾಹ್ಮಣ ಜಾತಿ ಪದ್ಧತಿಯನ್ನು ಹೇರುವ ಪ್ರಯತ್ನಗಳು ನಡೆಯುತ್ತಿವೆ.

ಹಿಂದೂ ಧರ್ಮದ ಏಕರೂಪದ ಪರಿಕಲ್ಪನೆಯನ್ನು ಹೇರುವ ಪ್ರಯತ್ನವಾಗಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಆಚರಣೆಗಳು ಮತ್ತು ಸಂಪ್ರದಾಯಗಳನ್ನು ದುರ್ಬಲಗೊಳಿಸಲು ಅಥವಾ ನಾಶಮಾಡಲು ನಿರಂತರ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ವಿಚ್ಛಿದ್ರಕಾರಕ ಅಭಿಯಾನದ ಪ್ರಮುಖ ಒತ್ತಾಯವೆಂದರೆ ಕ್ರಿಶ್ಚಿಯನ್ ಆದಿವಾಸಿಗಳನ್ನು ಮೀಸಲಾತಿಯ ಪ್ರಯೋಜನಗಳಿಂದ ವಂಚಿತಗೊಳಿಸುವುದು ಮತ್ತು ಕ್ರಿಶ್ಚಿಯನ್ ಆದಿವಾಸಿಗಳಿಗೆ ಸೇರಿದ ಭೂಮಿಯನ್ನು ಸಂವಿಧಾನದ ಶೆಡ್ಯೂಲ್ 5 ಮೂಲಕ ನೀಡಲಾದ ರಕ್ಷಣೆಗಳ ವ್ಯಾಪ್ತಿಯಿಂದ ಹೊರಗೆ ತರುವುದು. ಇದು ಕ್ರಿಶ್ಚಿಯನ್ ಆದಿವಾಸಿಗಳು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಖನಿಜ ಸಂಪನ್ಮೂಲಗಳನ್ನು ಸುಲಭವಾಗಿ ಬಳಸಿಕೊಳ್ಳಲು ಕಾರ್ಪೊರೇಟ್‌ಗಳಿಗೆ ಅನುವು ಮಾಡಿಕೊಡುತ್ತದೆ.

ಕೋಮು ಧ್ರುವೀಕರಣದ ಬಿಜೆಪಿ ಅಜೆಂಡಾ ಮಣಿಪುರದಲ್ಲಿ ಅಪಾಯಕಾರಿ ತಿರುವನ್ನು ಪಡೆದುಕೊಂಡಿದೆ, ಅಲ್ಲಿ ಬಹುಸಂಖ್ಯಾತ ಮೈತೇಯಿ ಸಮುದಾಯ ಮತ್ತು ಕುಕಿ–ಜೋ ಬೆಟ್ಟದ ಬುಡಕಟ್ಟು ಜನಾಂಗದ ನಡುವೆ ಆಳವಾದ ಒಡಕು ಸೃಷ್ಟಿಯಾಗಿದೆ. ಬುಡಕಟ್ಟು ಜನರನ್ನು ಅವರೆಲ್ಲರೂ ಮ್ಯಾನ್ಮಾರ್ ನ ಅಕ್ರಮ ವಲಸಿಗರು ಎಂದು ಸರ್ಕಾರವು ಸೂಕ್ತ ಪರಿಶೀಲನಾ ಪ್ರಕ್ರಿಯೆಯಿಲ್ಲದೆ ಅಕ್ರಮವಾಗಿ ಹೊರಹಾಕಲು ಪ್ರಾರಂಭಿಸಿದೆ.

ಕಳೆದ 10 ವರ್ಷಗಳಲ್ಲಿ ಬಿಜೆಪಿ ಕೇಂದ್ರ ಸರ್ಕಾರ ಅಪಾರ ಅರಣ್ಯ ಭೂಮಿಯನ್ನು ಖಾಸಗಿಯವರಿಗೆ ಹಸ್ತಾಂತರಿಸಿದೆ. ವಿವಿಧ ಯೋಜನೆಗಳಿಗಾಗಿ ಅರಣ್ಯ ಭೂಮಿಯನ್ನು ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸಲಾಗುತ್ತಿರುವಾಗ, ಅರಣ್ಯ ಹಕ್ಕುಗಳ ಕಾಯಿದೆ (ಎಫ್.ಆರ್.ಎ) ಅಡಿಯಲ್ಲಿ ವೈಯಕ್ತಿಕ ಅರಣ್ಯ ಹಕ್ಕುಗಳ ಶೇಕಡಾ 38.36 ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಮತ್ತು 10.39 ಶೇಕಡಾ ಇನ್ನೂ ಬಾಕಿ ಉಳಿದಿದೆ, ಅಂದರೆ ಸುಮಾರು 50 ಶೇಕಡಾ ಹಕ್ಕುದಾರರು ವಂಚಿತರಾಗಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಬಿಜೆಪಿ ಸರ್ಕಾರದ ಆಡಳಿತವು ಆದಿವಾಸಿಗಳ ಭೂಮಿ, ಕಾಡುಗಳು ಮತ್ತು ಜೀವನೋಪಾಯಗಳ ಮೇಲೆ ಮಾತ್ರವಲ್ಲದೆ, ಅವರ ಸಂಸ್ಕೃತಿ ಮತ್ತು ಸಂಪ್ರದಾಯಗಳ ಮೇಲೆ ಸರ್ವಾಂಗೀಣ ದಾಳಿಯ ಅವಧಿಯಾಗಿದೆ. ಆದಿವಾಸಿಗಳ ಕೋಮು ಧ್ರುವೀಕರಣವು ಸಂಘಪರಿವಾರದ ಅಜೆಂಡಾದ ಪ್ರಮುಖ ಆದ್ಯತೆ ಮತ್ತು ಅದರ ಅಪಾಯಕಾರಿ ಪರಿಣಾಮಗಳು ಈಗಾಗಲೇ ಮಣಿಪುರ ಮತ್ತು ಛತ್ತೀಸ್‌ಗಢದಂತಹ ರಾಜ್ಯಗಳಲ್ಲಿ ಕಂಡು ಬರುತ್ತವೆ. ಒಂದು ಕಡೆ ಆದಿವಾಸಿಗಳನ್ನು ಮೂಲಭೂತ ಸೌಕರ್ಯಗಳಿಂದ ಶಿಕ್ಷಣ, ವೈದ್ಯಕೀಯ ಸೌಲಭ್ಯಗಳು ಅಥವಾ ಯೋಗ್ಯ ಉದ್ಯೋಗದ ಪ್ರವೇಶಗಳಿಂದ ವಂಚಿತರನ್ನಾಗಿ ಮಾಡುತ್ತ, ಇನ್ನೊಂದು ಕಡೆ ಅವರ ಭೂಮಿ ಮತ್ತು ಖನಿಜ ಸಂಪನ್ಮೂಲಗಳ ಕಾರ್ಪೊರೇಟ್ ಲೂಟಿಗೆ ಈಗಿನ ಸರ್ಕಾರದ ಅಡಿಯಲ್ಲಿ ಅಡೆತಡೆಯಿಲ್ಲದೆ ಅವಕಾಶ ನೀಡಲಾಗಿದೆ.

ಬುಡಕಟ್ಟು ಹಕ್ಕುಗಳು
ಮತ್ತು ಜೀವನೋಪಾಯವನ್ನು ಉಳಿಸಿ!
ಬಿಜೆಪಿಯನ್ನು ಸೋಲಿಸಿ!

ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ



ಪ್ರಕಾಶ್ ಕಾರತ್

ಸಿರಿಯಾ ರಾಜಧಾನಿ ಡಮಾಸ್ಕಸ್‌ನಲ್ಲಿರುವ ಇರಾನ್ ರಾಯಭಾರ ಕಚೇರಿ ಮೇಲೆ ನಡೆದ ದಾಳಿಗೆ ಪ್ರತೀಕಾರವಾಗಿ ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳಿಂದ ಆಕ್ರಮಣ ಮಾಡಿದೆ. ಇಸ್ರೇಲ್ ಏಪ್ರಿಲ್ 1ರಂದು ಇರಾನಿ ರಾಯಭಾರ ಕಚೇರಿ ಮೇಲೆ ಆಕ್ರಮಣ ನಡೆಸಿ 13 ಜನರನ್ನು ಕೊಂದಿತ್ತು. ಮೃತರಲ್ಲಿ ಇರಾನ್‌ನ ಕ್ರಾಂತಿಕಾರಿ ಗಾರ್ಡ್ಸ್ ಪಡೆಯ (ಐಆರ್‌ಜಿಸಿ) ಇಬ್ಬರು ಉನ್ನತ ಜನರಲ್‌ಗಳು ಸೇರಿದ್ದರು. ಇಸ್ರೇಲ್ ನಡೆಸಿದ್ದ ಈ ದಾಳಿ ರಾಜತಾಂತ್ರಿಕ ಸಂಬಂಧಗಳನ್ನು ನಿಭಾಯಿಸುವ 1961ರ ವಿಯನ್ನಾ ಒಡಂಬಡಿಕೆ ಮತ್ತು ಕಾನ್ಸುಲಾರ್ ಸಂಬಂಧಗಳ ಕುರಿತ 1963ರ ವಿಯನ್ನಾ ಒಡಂಬಡಿಕೆಗಳ ಉಲ್ಲಂಘನೆಯಾಗಿದೆ. 1963ರ ಒಪ್ಪಂದವು ರಾಜತಾಂತ್ರಿಕ ಆವರಣಗಳ ಮೇಲೆ ಯಾವುದೇ ಬಗೆಯ ದಾಳಿ ಮಾಡುವುದನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ. ಈಗಾಗಲೇ ಉದ್ವಿಗ್ನವಾಗಿರುವ ಪಶ್ಚಿಮ ಏಷ್ಯಾದ ಬೆಂಕಿಗೆ ಇಸ್ರೇಲ್ ಕೃತ್ಯ ಪೆಟ್ರೋಲ್ ಸುರಿದಿದೆ ಹಾಗೂ ಸಂಘರ್ಷ ಉಲ್ಬಣಗೊಳ್ಳಲು ಒಂದು ಪ್ರಚೋದನೆಯಾಗಿದೆ.

ಇಸ್ರೇಲ್ ಪಶ್ಚಿಮ ಏಷ್ಯಾದಲ್ಲಿ ಒಂದು ರಾಕ್ಷಸಿ ಶಕ್ತಿಯಂತೆ ವರ್ತಿಸುತ್ತಿದೆ. ಪ್ಯಾಲೆಸ್ತೀನ್ ಮೇಲೆ ಇಸ್ರೇಲ್ ನರಹತ್ಯಾಕಾರಿ ಯುದ್ಧವನ್ನು ಆರಂಭಿಸಿ ಆರು ತಿಂಗಳೇ ಕಳೆದಿದೆ. 34,000ಕ್ಕೂ ಅಧಿಕ ಪ್ಯಾಲೆಸ್ತೀನಿಯರು ಬಲಿಯಾಗಿದ್ದಾರೆ. ಅದರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳಾಗಿದ್ದಾರೆ. ಇಸ್ರೇಲ್ ದಾಳಿ ಗಾಜಾಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಪಶ್ಚಿಮ ದಂಡೆಯಲ್ಲಿ ಕೂಡ ನೂರಾರು ಪ್ಯಾಲೆಸ್ತೀನಿಯರನ್ನು ಟಾರ್ಗೆಟ್ ಮಾಡಲಾಗಿದೆ ಹಾಗೂ ಕೊಲ್ಲಲಾಗಿದೆ. ಇಸ್ರೇಲ್ ತನ್ನ ಆಕ್ರಮಣಗಳನ್ನು ಸಿರಿಯಾ, ಲೆಬನಾನ್ ಮತ್ತು ಇರಾಕ್‌ಗೆ ಕೂಡ ವಿಸ್ತರಿಸಿದೆ.

ಅಮೆರಿಕ ಮತ್ತು ನ್ಯಾಟೋದ ಅಚಲ ಬೆಂಬಲದ ಕಾರಣದಿಂದ ಇಸ್ರೇಲ್ ಶಿಕ್ಷೆಯ ಯಾವುದೇ ಭಯ-ಭೀತಿಯಿಲ್ಲದೆ ವರ್ತಿಸುತ್ತಿದೆ. ಸ್ಟಾಕ್‌ಹೋಂ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ (ಸಿಪ್ರಿ) ಪ್ರಕಾರ, 2019 ಮತ್ತು 2023ರ ನಡುವೆ ಇಸ್ರೇಲ್ ಮಿಲಿಟರಿ ತನ್ನ ಶಶ್ತ್ರಾಸ್ತ್ರಗಳಲ್ಲಿ ಶೇಕಡ 69ನ್ನು ಅಮೆರಿಕದಿಂದ ಆಮದು ಮಾಡಿಕೊಂಡಿದೆ. ವಾಸ್ತವವಾಗಿ, ಡಮಾಸ್ಕಸ್‌ನಲ್ಲಿರುವ ಇರಾನಿ ದೂತಾವಾಸದ ಮೇಲೆ ನಡೆಸಿದ ದಾಳಿಯಲ್ಲಿ ಅಮೆರಿಕದ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಬಳಸಿದೆ. ಇದು ಅಮೆರಿಕ ಶಸ್ತ್ರಾಸ್ತ್ರ ರಫ್ತು ನಿಯಂತ್ರಣ ಕಾನೂನಿನ ನಗ್ನ ಉಲ್ಲಂಘನೆಯಾಗಿದೆ. ಅಮೆರಿಕದ ಆಯುಧಗಳನ್ನು ನ್ಯಾಯಸಮ್ಮತ ಸ್ವಯಂ-ರಕ್ಷಣೆಗೆ ಮಾತ್ರ ಬಳಸಬೇಕೆಂದು ಆ ಕಾನೂನು ಹೇಳುತ್ತದೆ.

ಇಷ್ಟು ಮಾತ್ರವಲ್ಲದೆ ಇಸ್ರೇಲಿ ದಾಳಿಯನ್ನು ಖಂಡಿಸುವ, ರಷ್ಯಾ ಪ್ರಸ್ತಾಪಿತ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ ಹೇಳಿಕೆಯನ್ನು ಅಂಗೀಕರಿಸಲು ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್ ನಿರಾಕರಿಸಿವೆ. ಭಾರತ ಸರಕಾರ ಕೂಡ ಕೇವಲ 'ಕಳವಳ' ವ್ಯಕ್ತಪಡಿಸಿದ್ದು ಆಕ್ರಮಣವನ್ನು 'ಖಂಡಿಸುವ' ಗೋಜಿಗೆ ಹೋಗಿಲ್ಲ. ಈ ರೀತಿಯ (ನಿಷ್ಕ್ರಿಯ) ಕೃತ್ಯಗಳು ಇಸ್ರೇಲ್‌ಗೆ ಇನ್ನಷ್ಟು ಉತ್ತೇಜನ ನೀಡುತ್ತವೆ.

ಇಸ್ರೇಲ್, ಇರಾನನ್ನು ಟಾರ್ಗೆಟ್ ಮಾಡಿದ್ದು ಇದೇ ಮೊದಲಲ್ಲ. ಇರಾನ್‌ನೊಳಗೆ ಅನೇಕ ಡ್ರೋನ್ ದಾಳಿಗಳನ್ನು ನಡೆಸಿದೆ, ಹಲವರ ಹತ್ಯೆಗೈದಿದೆ ಹಾಗೂ ಸೈಬರ್ ದಾಳಿಗಳನ್ನು ನಡೆಸಿದೆ. 2024 ಜನವರಿಯಲ್ಲಿ ಇರಾನ್‌ನ ನಗರವೊಂದರಲ್ಲಿ ಇಸ್ರೇಲ್ ಅಡಗಿಸಿಟ್ಟ ಬಾಂಬ್ ಸ್ಫೋಟಿಸಿ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಉನ್ನತ ವಿಜ್ಞಾನಿಗಳು ಮತ್ತು ಇಂಜಿನಿಯರ್‌ಗಳ ಹತ್ಯೆ ಮಾಡಲಾಗಿದೆ. 'ನ್ಯೂಕ್ಲಿಯರ್ ಬಾಂಬ್ ತಯಾರಿಸುವುದರಿಂದ ಇರಾನನ್ನು ತಡೆಯುವ' ಸಬೂಬಿನಡಿ ಇಸ್ರೇಲ್ ಈ ಕೃತ್ಯಗಳನ್ನು ನಡೆಸಿದ್ದು ಅದರ ಈ ಪಿತೂರಿಗಳಿಗೆ ಅಮೆರಿಕದ ಆಶೀರ್ವಾದವಿದೆ.

'ನಮಗೆ ಗೊತ್ತಿರುವ ಯಾವುದೇ ಮಾಹಿತಿ ಅಥವಾ ಸುಳಿವಿನ ಪ್ರಕಾರ ಇರಾನ್ ಅಣ್ವಸ್ತ್ರ ಕಾರ್ಯಕ್ರಮವನ್ನು ಹೊಂದಿಲ್ಲ' ಎಂದು ಅಂತಾರಾಷ್ಟ್ರೀಯ ಅಣು ಇಂಧನ ಸಂಸ್ಥೆ (ಐಎಇಎ) ಮಹಾ ನಿರ್ದೇಶಕ ರಫೆಲ್ ಗ್ರಾಸಿ ತೀರಾ ಈಚೆಗೆ, ಅಂದರೆ ಏಪ್ರಿಲ್ 14ರಂದು ಹೇಳಿದ್ದಾರೆ. ಐಎಇಎಯ ಈ ಅಂದಾಜನ್ನು ಇಸ್ರೇಲ್ ಅಥವಾ ಅಮೆರಿಕ ಗಣನೆಗೇ ತೆಗೆದುಕೊಂಡಿಲ್ಲ. ಯಾಕೆಂದರೆ, ಪಶ್ಚಿಮ ಏಷ್ಯಾದಲ್ಲಿ ತಮ್ಮ ಏಕಸ್ವಾಮ್ಯಕ್ಕೆ ಪ್ರಮುಖ ಸವಾಲಾಗಿರುವ ಇರಾನನ್ನು ಅಸ್ಥಿರಗೊಳಿಸುವುದೇ ಈ ಎರಡೂ ದೇಶಗಳ ಉದ್ದೇಶವಾಗಿದೆ.

ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೇತನ್ಯಾಹು ಉದ್ದೇಶಪೂರ್ವಕವಾಗಿಯೇ ಯುದ್ಧವನ್ನು ತೀವ್ರಗೊಳಿಸುತ್ತಿದ್ದಾರೆ. ಪ್ಯಾಲೆಸ್ತೀನ್‌ನಲ್ಲಿ ಮುಂದುವರಿದಿರುವ ನರಹತ್ಯೆಯ ಘೋಷಿತ ಉದ್ದೇಶವಾದ ಹಮಾಸ್‌ಅನ್ನು ನಾಶ ಮಾಡುವ ಉದ್ದೇಶ ಸಾಧನೆಯಲ್ಲಿ ಅವರು ವಿಫಲರಾಗಿದ್ದಾರೆ. ಒತ್ತೆಯಾಳುಗಳನ್ನು ರಕ್ಷಿಸುವಲ್ಲಿಯೂ ಅವರು ವಿಫಲರಾಗಿದ್ದಾರೆ. ನೇತನ್ಯಾಹು ಅವರ ಭ್ರಷ್ಟ ಹಾಗೂ ಅದಕ್ಷ ಆಡಳಿತದ ಬಗ್ಗೆ ಈಗಾಗಲೇ ಅತೃಪ್ತಿಯಿಂದ ಕುದಿಯುತ್ತಿರುವ ಅಲ್ಲಿನ ಜನರು ಈ ಎರಡು ಅಂಶಗಳಿಂದಾಗಿ ಇನ್ನಷ್ಟು ಕ್ರುದ್ಧರಾಗಿದ್ದಾರೆ. ನೇತನ್ಯಾಹು ರಾಜಿನಾಮೆ ಒತ್ತಾಯಿಸಿ ಸಾವಿರಾರು ಜನರು ನಿಯಮಿತವಾಗಿ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಯುದ್ಧ ಮುಗಿದ ತಕ್ಷಣದಿಂದಲೇ ತನಗೆ ಅಧಿಕಾರದಲ್ಲಿ ಉಳಿಯಲು ಸಾಧ್ಯವಿಲ್ಲ ಎನ್ನುವುದು ಆತನಿಗೆ ಚೆನ್ನಾಗಿ ಗೊತ್ತಿದೆ.

ಪಶ್ಚಿಮ ಏಷ್ಯಾದಲ್ಲಿ ಅಮೆರಿಕ ದ್ವಂದ್ವ ಪಾತ್ರವನ್ನು ನಿರ್ವಹಿಸುತ್ತಿದೆ. ತಾನು 'ಅಗ್ನಿ-ಶಾಮಕ' ಎಂದು ತೋರಿಸಿಕೊಳ್ಳುವುದು ಅದರ ಉದ್ದೇಶವಾಗಿದೆ. ಆದರೆ ವಾಸ್ತವವಾಗಿ ಅದು ಬೆಂಕಿ ಹಚ್ಚುವವರ ಪಾತ್ರ ವಹಿಸುತ್ತಿದೆ. ಅಮೆರಿಕ ಮತ್ತು ಬ್ರಿಟನ್‌ನಂಥ ಅದರ ಮಿತ್ರ ದೇಶಗಳು ಆಯಾ ದೇಶದ ಜನರಿಂದ ಭಾರಿ ಒತ್ತಡವನ್ನು ಎದುರಿಸುತ್ತಿವೆ. ಕದನ ವಿರಾಮಕ್ಕಾಗಿ ಮಧ್ಯಪ್ರವೇಶ ಮಾಡುವಂತೆ ಅಲ್ಲಿನ ಜನರು ಆಗ್ರಹಿಸುತ್ತಿದ್ದಾರೆ. ಇಸ್ರೇಲ್‌ಗೆ ಶಸ್ತ್ರಾಸ್ತ್ರ ಸರಬರಾಜು ಮತ್ತು ಆರ್ಥಿಕ ಬೆಂಬಲವನ್ನು ತಡೆಹಿಡಿದು ಅವರು ಕಾರ್ಯಾಚರಿಸಬಹುದು. ಆದರೆ ಹಾಗೆ ಮಾಡಲು ಅವು ಸಿದ್ಧವಿಲ್ಲ. ನಂಬಿಕಾರ್ಹ ಮಿತ್ರನಾದ ಇಸ್ರೇಲ್ ಮೂಲಕ ಪಶ್ಚಿಮ ಏಷ್ಯಾದಲ್ಲಿ ತಮ್ಮ ಪ್ರಭಾವವನ್ನು ಉಳಿಸಿಕೊಳ್ಳಬಹುದು ಎನ್ನುವ ಲೆಕ್ಕಾಚಾರವೇ ಇದಕ್ಕೆ ಕಾರಣವಾಗಿದೆ. ಸದ್ಯೋ ಭವಿಷ್ಯದಲ್ಲಿ ಈ ದೇಶಗಳಲ್ಲಿ ಕೂಡ ಚುನಾವಣೆಗಳು ನಡೆಯಲಿರುವುದರಿಂದ ಅವುಗಳು ಜನತೆಯ ಭಾವನೆಗಳನ್ನು ನಿರ್ಲಕ್ಷಿಸುವಂತೆಯೂ ಇಲ್ಲ. ಹೀಗಾಗಿ ಅವುಗಳು 'ಇಸ್ರೇಲನ್ನು ನಿಯಂತ್ರಿಸಲು' ಪ್ರಯತ್ನಿಸುತ್ತಿರುವ ನಾಟಕ ಆಡುತ್ತಿವೆ.

ದ್ವಂದ್ವ ಧೋರಣೆ ಇನ್ನೊಮ್ಮೆ ಬಯಲು

ಇರಾನ್‌ನ ಕ್ಷಿಪಣಿ ದಾಳಿಗಳಿಗೆ ಅಮೆರಿಕ, ಐರೋಪ್ಯ ಒಕ್ಕೂಟ (ಇಯು) ಮತ್ತು ನ್ಯಾಟೋದ ಪ್ರತಿಕ್ರಿಯೆಯು ಅವುಗಳ ದ್ವಂದ್ವ ಧೋರಣೆಯನ್ನು ಇನ್ನೊಮ್ಮೆ ಅನಾವರಣಗೊಳಿಸಿದೆ. ಇರಾನ್‌ನ ಕ್ಷಿಪಣಿಗಳು ಅವುಗಳ ನಿಗದಿತ ಗುರಿಯನ್ನು ತಲುಪದಂತೆ ವಿಫಲಗೊಳಿಸುವಲ್ಲಿ ಇಸ್ರೇಲ್‌ನೊಂದಿಗೆ ಅಮೆರಿಕ, ಬ್ರಿಟನ್ ಮತ್ತು ಜೋರ್ಡಾನ್ ಮುಖ್ಯ ಪಾತ್ರ ವಹಿಸಿವೆ. ಅಮೆರಿಕ ಅಧ್ಯಕ್ಷ ಜೋ ಬೈಡೆನ್ ತನ್ನ 'ಉಕ್ಕಿನಂಥ ಮಿತ್ರ' ಇಸ್ರೇಲ್‌ಗೆ ಬೆಂಬಲ ಕೊಟ್ಟಿದ್ದಾರೆ. ಆದರೆ, ಈ ವಲಯವನ್ನು ಇನ್ನಷ್ಟು ದೊಡ್ಡ ಯುದ್ಧದತ್ತ ತಳ್ಳಲು ಕಾರಣವಾಗುವ ಯಾವುದೇ ಕ್ರಮ ಕೈಗೊಳ್ಳಬೇಡಿ ಎಂದು ಇಸ್ರೇಲ್‌ಗೆ ಮನವಿ ಮಾಡುವ ಮುಖವಾಡವನ್ನು ಅವರು ತೊಟ್ಟಿದ್ದಾರೆ.

ಹೇಳಿಕೆ, ಬೆದರಿಕೆ ಸಾಲದು

ಕೇವಲ ಹೇಳಿಕೆಗಳು ಮತ್ತು ಬೆದರಿಕೆಗಳಿಂದ ಇಸ್ರೇಲನ್ನು ಕಟ್ಟಿ ಹಾಕಲು ಆಗುವುದಿಲ್ಲ. ಜನಪ್ರಿಯ ಒತ್ತಡಗಳಿಗೆ ಮಾತ್ರವೇ ಇಸ್ರೇಲನ್ನು ಬೆಂಬಲಿಸುವರು, ಆಕ್ರಮಣ ಮತ್ತು ವಸಾಹತು (ಸೆಟ್ಲರ್) ವಿಸ್ತರಣಾವಾದದ ಕೃತ್ಯಗಳಿಂದ ದೂರ ನಿಲ್ಲುವಂತೆ ಮಾಡಲು ಸಾಧ್ಯವಾಗುತ್ತದೆ. ಎಲ್ಲಾ ದೇಶಗಳು ಇಸ್ರೇಲ್ ಜೊತೆಗಿನ ತಮ್ಮ ಮಿಲಿಟರಿ, ರಕ್ಷಣೆ ಹಾಗೂ ಭದ್ರತಾ ವ್ಯವಹಾರಗಳನ್ನು ನಿಲ್ಲಿಸಬೇಕು. ಇಸ್ರೇಲ್‌ನ ನರಹತ್ಯಾ ಯುದ್ಧಕೋರರನ್ನು ಅಂತಾರಾಷ್ಟ್ರೀಯ ನ್ಯಾಯ ಕೋರ್ಟ್‌ನಲ್ಲಿ (ಐಸಿಜೆ) ವಿಚಾರಣೆಗೆ ಒಳಪಡಿಸಿ ಶಿಕ್ಷಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ, 1967ರ-ಪೂರ್ವದ ಗಡಿಗಳು ಮತ್ತು ಪೂರ್ವ ಜೆರುಸಲೇಂ ಅನ್ನು ರಾಜಧಾನಿಯಾಗಿರುವ ಪ್ಯಾಲೆಸ್ತೀನ್ ರಾಷ್ಟ್ರವನ್ನು ಮಾನ್ಯ ಮಾಡಬೇಕು. ತಕ್ಷಣದ ಸಮರ ವಿರಾಮ ಹಾಗೂ ಎಲ್ಲಾ ಆಕ್ರಮಿತ ಪ್ರದೇಶಗಳಿಂದ ಇಸ್ರೇಲ್ ವಾಪಸಾಗುವುದರೊಂದಿಗೆ ಇವೆಲ್ಲವೂ ಆರಂಭವಾಗಬೇಕು.

ಭಾರತೀಯರ ರಕ್ಷಣೆ

ಪಶ್ಚಿಮ ಏಷ್ಯಾದಲ್ಲಿ ನೂರಾರು ಸಾವಿರಾರು ಭಾರತೀಯರು ನೆಲೆಸಿದ್ದು ಯುದ್ಧ ಬಿಗಡಾಯಿಸಿದರೆ ಅವರ ಜೀವಗಳಿಗೆ ಅಪಾಯ ಎದುರಾಗಬಹುದು. ಭಾರತ ಸರಕಾರ ಸಕ್ರಿಯವಾಗಿ ಮಧ್ಯಪ್ರವೇಶಿಸಿ ಅವರ ಯೋಗಕ್ಷೇಮವನ್ನು ಖಾತರಿಪಡಿಸಬೇಕು. ಅದಕ್ಕಾಗಿ, ಇಸ್ರೇಲ್‌ನ ಸ್ನೇಹಕ್ಕಾಗಿ ಪ್ಯಾಲೆಸ್ತೀನ್‌ಗೆ ಬೆಂಬಲವನ್ನು ತ್ಯಾಗ ಮಾಡುವ ಪ್ರಸಕ್ತ ನೀತಿಯನ್ನು ಭಾರತ ತಿರುವು ಮುರುವು ಮಾಡಬೇಕು. ಈ ಹಿನ್ನೆಲೆಯಲ್ಲಿ ಇಸ್ರೇಲ್‌ಗೆ ನಿರ್ಮಾಣ ಕಾರ್ಮಿಕರನ್ನು ಕಳಿಸುವುದು ತೀರಾ ಅಪಾಯಕಾರಿಯಾದುದು ಹಾಗೂ ಅದನ್ನು ತಕ್ಷಣವೇ ನಿಲ್ಲಿಸಬೇಕು. ಇಸ್ರೇಲ್‌ನ ಯುದ್ಧಕೋರ ನೀತಿಯನ್ನು ಭಾರತ ಸ್ಪಷ್ಟ ಮಾತುಗಳಲ್ಲಿ ಖಂಡಿಸಬೇಕು, ಎಲ್ಲಾ ರಕ್ಷಣಾ ಹಾಗೂ ಭದ್ರತಾ ವ್ಯವಹಾರಗಳಿಂದ ಹಿಂದೆ ಸರಿಯಬೇಕು ಮತ್ತು ಪ್ಯಾಲೆಸ್ತೀನ್‌ನೊಂದಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸಬೇಕು.

ಇರಾನ್‌ನ ಕ್ಷಿಪಣಿ ದಾಳಿಗೆ ಸೇಡು ತೀರಿಸಿಕೊಳ್ಳುವುದಾಗಿ ಇಸ್ರೇಲ್ ಪಣ ತೊಟ್ಟಿದೆ. ಆದರೆ ಯಾವ ರೀತಿಯಲ್ಲಿ ಅದು ಪ್ರತೀಕಾರ ಕೈಗೊಳ್ಳಲಿದೆ ಎನ್ನುವುದು ಇನ್ನೂ ಗೊತ್ತಾಗಿಲ್ಲ. ರಾಯಭಾರ ಕಚೇರಿ ಮೇಲಿನ ದಾಳಿಗೆ ಕ್ಷಿಪಣಿ ಆಕ್ರಮಣದ ಮೂಲಕ ಉತ್ತರಿಸಿದ್ದು ಈ ವಿಷಯವನ್ನು ಇಲ್ಲಿಗೇ ಮುಗಿಸುವುದಾಗಿ ಇರಾನ್ ಹೇಳಿದೆ. ಇನ್ನಷ್ಟು ದಾಳಿ ನಡೆಸುವುದರ ವಿರುದ್ಧ ಅದು ಇಸ್ರೇಲ್‌ಗೆ ಎಚ್ಚರಿಕೆ ನೀಡಿದೆ. ತಾಳ್ಮೆ ವಹಿಸುವಂತೆ ಹಾಗೂ ಪರಿಸ್ಥಿತಿಯನ್ನು ಬಿಗಡಾಯಿಸದಂತೆ ಇಡೀ ಅಂತಾರಾಷ್ಟ್ರೀಯ ಸಮುದಾಯ ಎರಡೂ ದೇಶಗಳಿಗೆ ಮನವಿ ಮಾಡಿದೆ. ಅದೆಲ್ಲವೂ ಬಹುತೇಕವಾಗಿ ಇಸ್ರೇಲ್ ಮತ್ತು ಅದರ ಬೆನ್ನಿಗಿರುವ ಅಮೆರಿಕವನ್ನು ಅವಲಂಬಿಸಿದೆ.

ಅನು: ವಿಶ್ವ

ನೇಹಾಳ ಅಘಾತಕಾರಿ ಕಗ್ಗೊಲೆ ಮತ್ತು ದುರ್ಬಳಕೆ ಯತ್ನಗಳು......

ಪುಟ 3 ರಿಂದ

ಪ್ರಕರಣವನ್ನು ಬಳಸಿಕೊಂಡು ಸಂಘಪರಿವಾರವು ತನ್ನ ಪ್ರಚಾರವನ್ನು ಇನ್ನಷ್ಟು ಆಕ್ರಮಣಕಾರಿಯಾಗಿ ನಡೆಸಲು ಯತ್ನಿಸುತ್ತಿದೆ. ನಮ್ಮ ಸಮಾಜದ ಆರೋಗ್ಯಕ್ಕೆ ಇದು ಖಂಡಿತ ಒಳ್ಳೆಯದಲ್ಲ. ರಾಜ್ಯದ ವಿವೇಕಶಾಲಿ ಜನತೆ ಇಂತಹ ಪ್ರಯತ್ನಗಳನ್ನು ವಿಫಲಗೊಳಿಸಬೇಕು.

ನೇಹಾ ಕೊಲೆ ಪ್ರಕರಣ ಬಹುಶಃ ವೈಯಕ್ತಿಕ ಕಾರಣಗಳಿಗಾಗಿ ನಡೆದಿದೆ ಎಂದು ತೋರುತ್ತದೆ. ತನಿಖೆ ಇದನ್ನು ದೃಢಪಡಿಸಬೇಕು. ಇಂತಹ ಕೊಲೆಗಡುಕ ಪ್ರವೃತ್ತಿಗಳ ಹಿಂದೆ ಸಾಮಾಜಿಕ, ಸಾಂಸ್ಕೃತಿಕ ಕಾರಣಗಳೂ ಇರುತ್ತವೆ.

ಪ್ರೀತಿ-ಪ್ರೇಮ ಎಂಬುದರ ಬಗೆಗೆ ನಮ್ಮ ಸಿನಿಮಾ ಮುಂತಾದ ಸಮೂಹ ಮಾಧ್ಯಮಗಳಲ್ಲಿ ಬಿಂಬಿಸಲಾಗಿರುವ ವಿಕೃತ ಪರಿಕಲ್ಪನೆಗಳ ಪರಿಣಾಮವೂ ಇಂತಹ ಪ್ರವೃತ್ತಿಗಳ ಹಿಂದಿರುತ್ತವೆ. ಹೆಣ್ಣು ಗಂಡಿನ ಅಧೀನ, ಆಕೆ ನಿಲುವು ಬದಲಿಸುವಂತಿಲ್ಲ, ಗಂಡು ಹೇಳಿದಂತೆ ಕೇಳಬೇಕು, ಹೆಣ್ಣನ್ನು ಒಪ್ಪಿಸಲು ಗಂಡು ಒತ್ತಾಯ ಮಾಡಬಹುದು, ಆಕೆಯನ್ನು ನಿರಂತರ ಕಾಡಬಹುದು, ಏನು ಬೇಕಾದರೂ ಮಾಡಬಹುದು ಎಂಬುದು ನಮ್ಮ ಸಿನಿಮಾಗಳಲ್ಲಿ ನಿರಂತರವಾಗಿ ಪ್ರತಿಪಾದಿಸಲಾಗುತ್ತಿರುವ ವಿಚಾರ. ಇದು ಪ್ರೀತಿಯಲ್ಲ, ಪುರುಷಾಹಂಕಾರ ವಿಕೃತಿ. ನಮ್ಮ ಸಮಾಜ ವ್ಯವಸ್ಥೆಯೇ ಅಸಮಾನತೆ, ಲಿಂಗ ತಾರತಮ್ಯ, ಪುರುಷ ಪ್ರಾಧಾನ್ಯತೆಯಂತಹ ಪಾಳೆಗಾರಿ ಯಜಮಾನ್ಯ ಮೌಲ್ಯಗಳನ್ನು ಆಧರಿಸಿದೆ. ಇದು ಪ್ರಜಾಪ್ರಭುತ್ವಕ್ಕೆ, ಮಾನವ ಸಮುದಾಯದ ಪ್ರಗತಿಗೆ ಮಾರಕ ಎನ್ನುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಬಗೆಗೆ ಇಡೀ ಸಮಾಜ ಚಿಂತನೆಗೆ ತೊಡಗಬೇಕು. ವಿಕೃತಿಗಳು ಸರಿಯಾಗಬೇಕು. ಪ್ರಸ್ತುತ ನೇಹಾ ಕೊಲೆ ಪ್ರಕರಣದಲ್ಲಿ ಜನತೆ ಪ್ರಬುದ್ಧತೆ ತೋರಬೇಕು. ಸಂಕುಚಿತ ಹಿತಾಸಕ್ತಿಗೆ ಪ್ರಕರಣವನ್ನು ದುರ್ಬಳಕೆ ಮಾಡಿ ಸಮಾಜವನ್ನು ಒಡೆಯುವ ಯತ್ನಗಳನ್ನು ಹಿಮ್ಮೆಟ್ಟಿಸಿ ಸೋಲಿಸಬೇಕು. ●







ಕಾರ್ಪೋರೇಟ್ ಲೂಟಿ ಮತ್ತು ದೋಚುವಿಕೆಯನ್ನು ತಡೆಯಲು ಇದು ಸಕಾಲ

ಕೆ.ಎನ್.ಉಮೇಶ್

ಉತ್ಪಾದನೆ ಆಧಾರಿತ ಪ್ರೋತ್ಸಾಹಧನ ಯೋಜನೆ (PLI): ರೈಟ್ ಆಫ್, ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರೆಪ್ಸಿ ಕೋಡ್, ಕಾರ್ಪೊರೇಟ್ ತೆರಿಗೆಗಳ ಕಡಿತ, ಷೇರು ವಿಕ್ರಯ ಮತ್ತು ವಿದೇಶಿ ನೇರ ಬಂಡವಾಳ ಹೂಡಿಕೆ ಮೇಲಿನ ಮಿತಿ ತೆಗೆದು ಹಾಕುವಿಕೆ, ರಾಷ್ಟ್ರೀಯ ನಗದೀಕರಣ ಕೊಳವೆ ಯೋಜನೆ ಜೊತೆಗೆ ಉತ್ಪಾದನೆ ಆಧಾರಿತ ಪ್ರೋತ್ಸಾಹಧನ ಯೋಜನೆಯು ಕೂಡ ಮೋದಿ ಸರ್ಕಾರದ ಬಹು ಹೆಗ್ಗಳಿಕೆಯ ಯೋಜನೆಗಳಲ್ಲಿ ಒಂದಾಗಿದೆ. ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳು ಮತ್ತು ಸೆಮಿ ಕಂಡಕ್ಟರ್‌ಗಳ ಉತ್ಪಾದನೆಗೆ ಉತ್ತೇಜನ ನೀಡುವ ಯೋಜನೆ (SPECS), ಭಾರತದಿಂದ ವಾಣಿಜ್ಯ ರಫ್ತು ಯೋಜನೆ (MEIS) ಅಡಿಯಲ್ಲಿ ರಫ್ತು ಉತ್ಪಾದನೆಗಳ ಮೇಲೆ ತೆರಿಗೆ ಅಥವಾ ಸುಂಕಗಳ ಮರುಪಾವತಿ (RoDTEP) ಎಂಬ ಯೋಜನೆಗಳೆಲ್ಲಾ ದೊಡ್ಡ ಕಾರ್ಪೋರೇಟ್‌ಗಳಿಗಾಗಿನ ಹೆಚ್ಚುವರಿ ಯೋಜನೆಗಳಾಗಿವೆ.

ಈ ಎಲ್ಲವನ್ನೂ ಮೇಕ್ ಇನ್ ಇಂಡಿಯಾ ಮತ್ತು ಆತ್ಮ ನಿರ್ಭರ ಭಾರತದ ಹೆಸರಿನ ಮುಖವಾಡದೊಂದಿಗೆ ರೂಪಿಸಲಾಗಿದೆ. ತಯಾರಿಕ ವಲಯವನ್ನು ಉತ್ತೇಜಿಸಲು ಮತ್ತು ಉದ್ಯೋಗ ಸೃಷ್ಟಿಸಲೆಂದು ಇವುಗಳನ್ನು ರೂಪಿಸಲಾಗಿದೆ. ದೇಶೀಯವಾಗಿ ಉತ್ಪಾದನೆಯನ್ನು ಹೆಚ್ಚಿಸಬಹುದು, ಆಮದನ್ನು ಕಡಿಮೆ ಮಾಡಬಹುದು, ರಫ್ತು ಬ್ಯಾಸ್ಕೆಟ್‌ನಲ್ಲಿನ ಸಾಂಪ್ರದಾಯಿಕ ಸರಕುಗಳನ್ನು ಬದಲಾಯಿಸಿ ಹೆಚ್ಚು ಮೌಲ್ಯಾಧಾರಿತ ಉತ್ಪನ್ನಗಳನ್ನು ಸೇರಿಸಬಹುದು, ಪ್ರಧಾನ ಪೈಪೋಟಿಯ ಮತ್ತು ನಿರ್ಣಾಯಕ ತಂತ್ರಜ್ಞಾನ ಆಧಾರಿತ ವಲಯಗಳಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಬಹುದು ಮತ್ತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಮೇಲೆ ಸಕಾರಾತ್ಮಕವಾಗಿ ಪರಿಣಮಿಸಬಹುದೆಂಬ ಕಾರಣದಿಂದಾಗಿ ಇವುಗಳನ್ನು ರೂಪಿಸಲಾಗಿದೆ ಎಂದು ಹೇಳಲಾಗುತ್ತಿತ್ತು.

> ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಘೋಷಣೆಗಳ ಮುಖವಾಡದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು, ವಿದೇಶಿ ಮತ್ತು ದೇಶಿಯ ದೊಡ್ಡ ಕಾರ್ಪೋರೇಟ್‌ಗಳಿಂದ ರಾಷ್ಟ್ರದ ಲೂಟಿ ಮತ್ತು ದೋಚುವಿಕೆಗೆ ಅನುವುಗೊಳಿಸುವ ನೀತಿ ಮತ್ತು ಕ್ರಮಗಳನ್ನು ಅನುಸರಿಸುತ್ತಿದೆ. ಈ ಕ್ರಮ ಉದ್ಯೋಗ ಸೃಷ್ಟಿಸಲಿವೆ ಎಂದು ಸರ್ಕಾರವು ಪ್ರತಿಪಾದಿಸುತ್ತಿದ್ದರೂ ವಾಸ್ತವತೆ ಭಿನ್ನವಾಗಿದೆ. ಬಿಜೆಪಿ ಕಾರ್ಪೋರೇಟ್‌ಗಳಿಗಾಗಿ ಮತ್ತು ಕಾರ್ಪೋರೇಟ್‌ಗಳು ಬಿಜೆಪಿಗಾಗಿ ಎಂಬ ಅಂಶಗಳ ತೋರಿವೆ.

"ಭಾರತದಲ್ಲಿ ತಯಾರಿಸುವುದನ್ನು ಆದ್ಯತೆಯ ಹೂಡಿಕೆಯ ಕೇಂದ್ರವನ್ನಾಗಿಸಿ, ಯುವಜನತೆಗೆ ಅವಕಾಶಗಳನ್ನು ಕಲ್ಪಿಸಿ, ಉತ್ಪಾದನೆ ಆಧಾರಿತ ಪ್ರೋತ್ಸಾಹಧನ ಯೋಜನೆಯು ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲಿದೆ" ಎಂದು ಪ್ರಧಾನಿ ಮೋದಿ ಹೇಳಿದ್ದರು. "ಮೇಕ್ ಇನ್ ಇಂಡಿಯಾವನ್ನು ಪಿಎಲ್‌ಐ ಯೋಜನೆಯು ಕ್ರಾಂತಿಕಾರಕಗೊಳಿಸಿ, ಉದ್ಯೋಗ ಸೃಷ್ಟಿಸಲು ರಫ್ತನ್ನು ಪ್ರೋತ್ಸಾಹಿಸಿ, ಭಾರತವನ್ನು ವಿಶ್ವದ ಕಾರ್ಖಾನೆಯಾಗಿಸಲು ಸಹಾಯ ಮಾಡಲಿದೆ" ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಪಿಯುಷ್ ಗೋಯಲ್ ಪ್ರತಿಪಾದಿಸಿದ್ದರು. ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತರಾಮನ್ ರವರು ತಮ್ಮ 2019–20 ರ ಬಜೆಟ್‌ನಲ್ಲಿ "14 ಕೈಗಾರಿಕಾ ವಲಯಗಳಿಗೆ ಐದು ವರ್ಷಗಳ ಅವಧಿಯ 1,97,291 ಕೋಟಿ ರೂಗಳ ಪಿಎಲ್‌ಐ ಯೋಜನೆಯು ಜಿಡಿಪಿ ಗೆ ತಯಾರಿಕಾ ವಲಯದ ಕೊಡುಗೆಯನ್ನು ಶೇಕಡ 25ಕ್ಕೆ ಹೆಚ್ಚಿಸಲಿದೆ. 60 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸಲಿದೆ ಮತ್ತು 30 ಲಕ್ಷ ಕೋಟಿ ರೂಗಳ ಹೆಚ್ಚುವರಿ ಉತ್ಪಾದನೆಯನ್ನು ಸೃಜಿಸಲಿದೆ" ಎಂದಿದ್ದರು.

ಅರ್ಜಿ ಸಲ್ಲಿಸಿದ ಮೂಲ ವರ್ಷದ ನಂತರದ ವರ್ಷಗಳಲ್ಲಿ ಹೆಚ್ಚುವರಿ ಉತ್ಪಾದನೆ ಮತ್ತು ಬಂಡವಾಳ ಹೂಡಿಕೆ ಆಧಾರದಲ್ಲಿ ತಯಾರಿಕಾ ವಲಯದ ವಿವಿಧ ಕೈಗಾರಿಕೆಗಳಿಗೆ 4 ರಿಂದ 20 ಶೇಕಡ ಪ್ರೋತ್ಸಾಹಧನ ನೀಡುವ ಯೋಜನೆಯೇ ಪಿಎಲ್‌ಐ ಯೋಜನೆಯಾಗಿದೆ. ಔಷಧಿ ವಲಯದ ಮೂಲ ದಾತುಗಳು ಮತ್ತು ಕ್ರಿಯಾಶೀಲ ಔಷಧಿಯ ಸಾಮಗ್ರಿಗಳು, ಬೃಹತ್ ಗಾತ್ರದ ಎಲೆಕ್ಟ್ರಾನಿಕ್ಸ್ ತಯಾರಿಕೆ, ಔಷಧೀಯ ವಿಭಾಗದಡಿಯ ವೈದ್ಯಕೀಯ ಸಾಧನಗಳ ಉತ್ಪಾದನೆ, ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನ ಉತ್ಪನ್ನಗಳು, ಔಷಧಿಗಳು, ದೂರಸಂಪರ್ಕ ಮತ್ತು ನೆಟ್‌ವರ್ಕಿಂಗ್ ಉತ್ಪನ್ನಗಳು, ಆಹಾರ ಉತ್ಪನ್ನಗಳು, ಶ್ವೇತ ಸರಕುಗಳಾದ ಎಸಿ ಮತ್ತು ಎಲ್‌ಇಡಿ, ಉನ್ನತ ಸಾಮರ್ಥ್ಯದ ಸೌರ ಪಿವಿ ಮಾಡಲ್‌ಗಳು, ವಾಹನ ಮತ್ತು ವಾಹನ ಬಿಡಿಭಾಗಗಳು, ಅಡ್ವಾನ್ಸ್ ಕೆಮಿಸ್ಟ್ರಿ ಸೆಲ್(ACC) ಬ್ಯಾಟರಿ, ಜವಳಿ ಉತ್ಪನ್ನಗಳು, ಸ್ಪೆಷಾಲಿಟಿ ಸ್ಟೀಲ್, ಡ್ರೋನ್‌ಗಳು ಮತ್ತು ಡ್ರೋನ್ ಬಿಡಿಭಾಗಗಳು ಒಳಗೊಂಡು 14 ತಯಾರಿಕಾ ವಲಯದ ಕೈಗಾರಿಕೆಗಳಿಗೆ ಈ ಯೋಜನೆಯನ್ನು ರೂಪಿಸಲಾಗಿದೆ. ಇದರಡಿ 20 ಶೇಕಡ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು, 176 MSME ಗಳನ್ನು ಒಳಗೊಂಡಂತೆ ಒಟ್ಟು ಸಾವಿರ ಕಾರ್ಪೋರೇಟ್ ಕಂಪನಿಗಳನ್ನು ಈ ಯೋಜನೆ ಫಲಾನುಭವಿಗಳಾಗಿ ಗುರುತಿಸಲಾಗಿದೆ. ದೇಶೀಯ ಕಂಪನಿಗಳು ಬಹುತೇಕ ದೊಡ್ಡ ಏಕಸ್ವಾಮ್ಯ ಕೈಗಾರಿಕಾ ಮನೆತನಗಳಿಗೆ ಸೇರದ್ದವಾಗಿವೆ. MSME ಗಳು ಬಹುತೇಕ ದೊಡ್ಡ ಕಾರ್ಪೋರೇಟ್ ಕಂಪನಿಗಳಿಗೆ ಹೊರಗುತ್ತಿಗೆ / ಆನ್‌ಸೈಟ್ ಸರಬರಾಜುದಾರರಾಗಿ ಉತ್ಪನ್ನಗಳ ತಯಾರಿಕಾ ವೆಚ್ಚ / ಖರೀದಿ ವೆಚ್ಚವನ್ನು ಕಡಿಮೆ ಮಾಡಿ ಕಾರ್ಪೋರೇಟ್‌ಗಳಿಗೆ PLI ಲಾಭವನ್ನು ದ್ವಿಗುಣಗೊಳಿಸಲಿವೆ.

ಪುಟ 10 ಕ್ಕೆ

PLI ಮತ್ತು ಎಲೆಕ್ಟ್ರೋಲ್ ಬಾಂಡ್‌ಗಳ ದುಷ್ಟಕೂಟ:

ಎಲೆಕ್ಟ್ರೋಲ್ ಬಾಂಡ್‌ಗಳ ಖರೀದಿದಾರರ ಪಟ್ಟಿಯಲ್ಲಿ PLI ಯೋಜನೆಯ ಅನುಮೋದಿತ ಅರ್ಜಿದಾರರು ಅಥವಾ ಫಲಾನುಭವಿಗಳ ಹೆಸರುಗಳನ್ನು ಗುರುತಿಸಬಹುದಾಗಿದೆ. ಔಷಧಿಗಳಿಗಾಗಿ ಮೀಸಲಿರಿಸಿರುವ PLI ಯೋಜನೆಯ ಅನುಮೋದಿತ ಅರ್ಜಿದಾರರಾದ Hetero Drugs Ltd., ಕಂಪನಿಯು ರೂ.30 ಕೋಟಿ ಎಲೆಕ್ಟ್ರಾಲ್ ಬಾಂಡ್ ಅನ್ನು ಖರೀದಿಸಿದೆ. ಜವಳಿ ವಲಯದ PLI ಅನುಮೋದಿತ ಫಲಾನುಭವಿಗಳಾದ ಟೆಕ್ಸ್‌ಪೋರ್ಟ್ ಇಂಡಸ್ಟ್ರೀಸ್ ಪ್ರೈ.ಲಿ. ಹಾಗೂ ವಾಹನ ಉತ್ಪನ್ನ ವಲಯದ ಅನುಮೋದಿತ ಅರ್ಜಿದಾರರಾದ ಮಹಿಂದ್ರಾ & ಮಹಿಂದ್ರಾ, ಮಾರುತಿ ಸುಜುಕಿ, ಟಿವಿಎಸ್ ಮೋಟಾರ್ಸ್, ಹೀರೋ ಮೋಟಾರ್ಸ್, ಬಜಾಜ್ ಆಟೋಸ್ ಹಾಗೆ ಇತರೆ ವಲಯದ PLI ಅನುಮೋದಿತ ಅರ್ಜಿದಾರರಾದ ವೇದಾಂತ, ಭಾರತಿ ಏರ್‌ಟೇಲ್, ಟೊರೆಂಟೊ ಪವರ್, ಸನ್‌ಫಾರ್ಮಾಕ್ಯುಟಿಕಲ್ಸ್ ಮುಂತಾದವುಗಳು ಸಹಾ ಎಲೆಕ್ಟ್ರೋಲ್ ಬಾಂಡ್ಸ್‌ಗಳನ್ನು ಖರೀದಿಸಿವೆ. ಇದು ಕೇವಲ ಕಾಕತಾಳೀಯವಾಗಿರಲು ಸಾಧ್ಯವಿಲ್ಲ. ನಮಗೆ ನೀವು ನಿಮಗೆ ನಾವು ಎಂಬಂತೆ "ಬಾಂಡ್ ನೀಡಿ PLI ಪಡೆಯಿರಿ" ಎಂಬುದನ್ನು ತೋರುತ್ತದೆ.

ಬಂಡವಾಳ ಹೂಡಿಕೆ ವೆಚ್ಚವನ್ನು SPECS ಮೂಲಕ, ಉತ್ಪಾದನಾ ವೆಚ್ಚವನ್ನು PLI ಮೂಲಕ ಮತ್ತು ರಫ್ತಿನ ಮೇಲೆ ಪಾವತಿಸುವ ತೆರಿಗೆ ಹಾಗೂ ಸುಂಕವನ್ನು RoDTEP ಮೂಲಕ ಮರುಪಾವತಿಸುವಿಕೆ ಎಂಬ ತ್ರಿವಳಿ ಯೋಜನೆಗಳು ಕಾರ್ಪೋರೇಟ್‌ಗಳಿಗೆ ಸಾರ್ವಜನಿಕ ಹಣವನ್ನು ಹರಿಸುವ ಅಗೋಚರ ಕೊಳವೆ ಮಾರ್ಗಗಳಾಗಿವೆ. ಖಾಸಗಿ ಬಂಡವಾಳಕ್ಕೆ ನೇರ ಹಣ ಒದಗಿಸುವ ಯೋಜನೆಗಳಾಗಿವೆ. ಮುಂದುವರೆದು ಕಾರ್ಪೋರೇಟ್‌ಗಳೇನಾದರೂ ಸುಸ್ತಿ ಬಾಕಿದಾರರಾದರೆ ಅದರಿಂದ ಬಜಾವ್ ಆಗುವ ಹೊರನಡೆಯುವ ಮಾರ್ಗಗಳಾಗಿ ರೈಟ್ ಆಫ್ ಮತ್ತು IBC ಗಳು ಅವರ ಸೇವೆಗಿವೆ.



ಸಿಪಿಐ(ಎಂ) ಪ್ರಣಾಳಿಕೆ: ಯುಎಪಿಎ, ಸಿಎಎ ರದ್ದು, ಶಿಕ್ಷಣ, ಉದ್ಯೋಗ, ಆರೋಗ್ಯ ಖಾತ್ರಿ ಭರವಸೆ

ಬಿಜೆಪಿ ಮತ್ತು ಅದರ ಮೈತ್ರಿಕೂಟವನ್ನು ಸೋಲಿಸುವುದು ಪ್ರತಿಯೊಬ್ಬ ದೇಶಪ್ರೇಮಿಯ ಮೊದಲ ಹಾಗೂ ಅತ್ಯಂತ ಅತ್ಯಗತ್ಯವಾದ ಕರ್ತವ್ಯ ಎಂಬ ಸ್ಪಷ್ಟ ತಿಳುವಳಿಕೆಯೊಂದಿಗೆ ಸಿಪಿಐ(ಎಂ) ಪಕ್ಷವು ತನ್ನ ಪ್ರಣಾಳಿಕೆಯನ್ನು ಭಾರತದ ಜನರ ಮುಂದೆ ಇಡುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ತಿಳಿಸಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಲೋಕಸಭಾ ಚುನಾವಣೆಗೆ ಕೇಂದ್ರ ಸಮಿತಿ ಬಿಡುಗಡೆ ಮಾಡಿದ್ದ ಪ್ರಣಾಳಿಕೆ ಕನ್ನಡ ಅವತರಣಿಕೆಯ ಬಿಡುಗಡೆಗೊಳಿಸಿ ಮಾತನಾಡುತ್ತಾ, ಕೇಂದ್ರದಲ್ಲಿ ಜಾತ್ಯತೀತ ಸರ್ಕಾರವೊಂದನ್ನು ಸ್ಥಾಪಿಸಲು ಸಹಾಯವಾಗುವಂತೆ ತನ್ನ ಶಕ್ತಿಮೀರಿ ಸಾಧ್ಯವಾದುದೆಲ್ಲ ಪ್ರಯತ್ನವನ್ನು ಕೈಗೊಳ್ಳಲು ಸಿಪಿಐ(ಎಂ) ಪ್ರತಿಜ್ಞೆ ಮಾಡುತ್ತದೆ. ಇದಕ್ಕಾಗಿ ಮತ್ತು ಜನಪರ ನೀತಿಗಳನ್ನು ಖಾತ್ರಿಪಡಿಸುವ ಸಲುವಾಗಿ ಸಂಸತ್ತಿನಲ್ಲಿ ಒಂದು ಶಕ್ತಿಯುತವಾದ ಸಿಪಿಐ(ಎಂ)ನ ಉಪಸ್ಥಿತಿಯ ಅವಶ್ಯಕತೆ ಎಂದರು.



ಸಂವಿಧಾನದ ನಾಲ್ಕು ಆಧಾರ ಸ್ತಂಭಗಳನ್ನು–ಜಾತ್ಯತೀತ ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತ್ವ, ಒಕ್ಕೂಟವಾದ ಮತ್ತು ಸಾಮಾಜಿಕ ನ್ಯಾಯ–ವ್ಯವಸ್ಥಿತವಾಗಿ ಕಳಚಿ ಹಾಕುತ್ತಿರುವ ಪ್ರಕ್ರಿಯೆಗೆ ಭಾರತ ಇಂದು ಸಾಕ್ಷಿಯಾಗುತ್ತಿದೆ. ಭಾರತದ ದುಡಿಯುವ ಜನರ ಹಕ್ಕುಗಳನ್ನು ನಾಶಮಾಡಲು ಮೋದಿ ಸರ್ಕಾರದ ಸರ್ವಾಧಿಕಾರಿ–ಕೋಮುವಾದಿ ಆಳ್ವಿಕೆಯು ಫ್ಯಾಸಿಸ್ಟ್ ಮಾದರಿಯ ವಿಧಾನಗಳನ್ನು ಬಳಸುತ್ತಿದೆ; ಸರ್ಕಾರದ ಅಧಿಕಾರ ಯಂತ್ರಗಳನ್ನು ಮತ್ತು ತನ್ನ ಸಂಸದೀಯ ಬಹುಮತವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ; ಆ ಮೂಲಕ ಭಾರತವನ್ನು ಜಗತ್ತಿನ ಅತ್ಯಂತ ಅಸಮಾನ ಸಮಾಜವನ್ನಾಗಿ ಪರಿವರ್ತಿಸುತ್ತಿದೆ; ಸಂಕುಚಿತ ಮನೋಭಾವದ ಆಧಾರದಲ್ಲಿ ಜನರಲ್ಲಿ ವಿಭಜನೆ ಉಂಟು ಮಾಡುವ ಸಲುವಾಗಿ ಅವರ ಮೇಲೆ ತನ್ನ ವಿಷಪೂರಿತ ಕೋಮುವಾದಿ ಸಿದ್ಧಾಂತವನ್ನು ಹೇರುತ್ತಿದೆ ಎಂದರು.

ಆ ಕಾರಣದಿಂದ 18 ನೇ ಲೋಕಸಭಾ ಚುನಾವಣೆಯು ನಿರ್ಣಾಯಕ ಪ್ರಾಮುಖ್ಯತೆಯನ್ನು ಪಡೆಯುತ್ತದೆ; 'ನಾವು ಭಾರತದ ಜನರು' ಚುನಾವಣೆಯಲ್ಲಿ ಮತದಾನ ಮಾಡುವ ಮೂಲಕ ಭಾರತದ ಸಂವಿಧಾನದಲ್ಲಿ ಘೋಷಿಸಿರುವಂತೆ ಭಾರತೀಯ ಗಣತಂತ್ರದ ಗುಣಲಕ್ಷಣಗಳಾದ ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಸಾಧ್ಯವೇ ಎನ್ನುವುದನ್ನು ಅದರ ಫಲಿತಾಂಶವು ನಿರ್ಧರಿಸುತ್ತದೆ. ಭಾರತೀಯ ಗಣತಂತ್ರದ ಗುಣಲಕ್ಷಣಗಳಾದ ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವವನ್ನು ಒಂದು ವಿವೇಕರಹಿತವಾದ ಅಸಹಿಷ್ಣುತೆ, ದ್ವೇಷ ಹಾಗೂ ಹಿಂಸೆಯ ಆಧಾರದ ಸರ್ವಾಧಿಕಾರಿ ಫ್ಯಾಸಿಸ್ಟ್ ಮಾದರಿಯ ಹಿಂದುತ್ವ ರಾಷ್ಟ್ರವನ್ನಾಗಿ ರೂಪಾಂತರಿಸುವ ಬಿಜೆಪಿಯ ಪ್ರಯತ್ನದ ವಿರುದ್ಧ ಭಾರತವನ್ನು ರಕ್ಷಿಸುವ ಬಗ್ಗೆ ಈ ಬಾರಿಯ ಲೋಕಸಭಾ ಚುನಾವಣೆಯು ಇದೆ ಎನ್ನುವುದರ ಬಗ್ಗೆ ನಮಗೆ ಅನುಮಾನವೇ ಬೇಡ. ಭಾರತದ ನರನಾಡಿಗಳಲ್ಲಿ ಕೋಮುದ್ವೇಷವನ್ನು ಹರಡುತ್ತಿರುವ ಬಿಜೆಪಿಯ ಪಿತೃ ಸಂಘಟನೆಯಾದ ಆರ್.ಎಸ್.ಎಸ್. ಬಹಿರಂಗವಾಗಿ ಘೋಷಿಸಿದ ಗುರಿ ಅದಾಗಿದೆ. ಹಿಂದೆಂದೂ ಕಂಡು ಕೇಳರಿಯದಂತಹ ರೀತಿಯಲ್ಲಿ ಆರ್.ಎಸ್.ಎಸ್. ಈಗ ಭಾರತದ ಉದ್ದಕ್ಕೂ ಇರುವ ಪ್ರತಿಯೊಂದು ಸಂಘ ಸಂಸ್ಥೆಗಳನ್ನು ತನ್ನ ವಶಕ್ಕೆ ಪಡೆದಿದೆ ಎಂದು ಆರೋಪಿಸಿದರು.

ಕರ್ನಾಟಕದಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಎಂ.ಪಿ ಮುನಿವೆಂಕಟಪ್ಪ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಅವರನ್ನು ಗೆಲ್ಲಿಸಬೇಕು ಎಂದು ಜನರಲ್ಲಿ ಮನವಿ ಮಾಡುತ್ತಿದ್ದೇವೆ. ಉಳಿದ 27 ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿ ಸೋಲಿಸುವುದಕ್ಕಾಗಿ ಇಂಡಿಯಾ ಕೂಟಕ್ಕೆ ಬೆಂಬಲ ನೀಡುತ್ತಿದ್ದೇವೆ ಎಂದರು.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಾ.ಕೆ.ಪ್ರಕಾಶ್ ಮಾತನಾಡಿ, 2019ರ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ನಾವು ರದ್ದುಗೊಳಿಸುತ್ತೇವೆ. ದ್ವೇಷ ಭಾಷಣ ಮತ್ತು ಅಪರಾಧಗಳ ವಿರುದ್ಧದ ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ. ಉದ್ಯೋಗ ಖಾತ್ರಿ ಯೋಜನೆ **MGNREGA** ಗೆ ಬಜೆಟ್ ಹಂಚಿಕೆಯನ್ನು ದ್ವಿಗುಣಗೊಳಿಸಬೇಕು ಮತ್ತು ನಗರ ಉದ್ಯೋಗವನ್ನು ಖಾತರಿಪಡಿಸುವ ಹೊಸ ಕಾನೂನನ್ನು ಕಾನೂನುಬದ್ಧಗೊಳಿಸಲು ಸಂಸತ್ತಿನಲ್ಲಿ ಹೋರಾಟ ನಡೆಸುತ್ತೇವೆ ಎಂದರು.

ಸಿಪಿಐ(ಎಂ) ಪ್ರಣಾಳಿಕೆಯ ಪ್ರಮುಖಾಂಶಗಳು

- ಸಂವಿಧಾನದಲ್ಲಿ ಪ್ರತಿಪಾದಿಸಿರುವ ಜಾತ್ಯತೀತ ತತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿ.
- ರೈತರು ತಮ್ಮ ಉತ್ಪನ್ನವನ್ನು ಕನಿಷ್ಠ ಬೆಂಬಲ ಬೆಲೆಗೆ ಮಾರಾಟ ಮಾಡುವ ಹಕ್ಕನ್ನು ಜಾರಿಗೊಳಿಸಿ, ಇದು ಒಟ್ಟು ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ 50 ಪ್ರತಿಶತ ಅಧಿಕವಾಗಿದೆ.
- ಕಾರ್ಮಿಕರಿಗೆ ಶಾಸನಬದ್ಧ ಕನಿಷ್ಠ ವೇತನ ರೂ. ತಿಂಗಳಿಗೆ 26,000
- ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಪ್ರತಿ ವ್ಯಕ್ತಿಗೆ 10 ಕೆಜಿ ಆಹಾರ ಧಾನ್ಯಗಳನ್ನು ಒದಗಿಸಲು–5 ಕೆ.ಜಿ. ಉಚಿತವಾಗಿ ಮತ್ತು 5 ಕೆ.ಜಿ. ಸಬ್ಸಿಡಿ ದರದಲ್ಲಿ.
- ಉಚಿತ ಆರೋಗ್ಯ ರಕ್ಷಣೆಯ ಹಕ್ಕು; ಖಾಸಗಿ ವಿಮೆ ನೇತೃತ್ವದ ಆರೋಗ್ಯ ರಕ್ಷಣೆಯನ್ನು ಕೊನೆಗೊಳಿಸಿ–

  ಜನಗಣತಿ ಮತ್ತು ಡಿಲಿಮಿಟೇಶನ್‌ಗೆ ಲಿಂಕ್ ಮಾಡದೆ ಸಂಸತ್ತಿನಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿಗಾಗಿ ಕಾನೂನನ್ನು ತಕ್ಷಣವೇ ಜಾರಿಗೊಳಿಸಿ.
- ರಾಷ್ಟ್ರೀಯ ಶಿಕ್ಷಣ ನೀತಿ 2020 ಅನ್ನು ರದ್ದುಗೊಳಿಸಿ.
- ಸಾಂವಿಧಾನಿಕ ಹಕ್ಕಿನಂತೆ ಕೆಲಸ ಮಾಡುವ ಹಕ್ಕು; ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡುವುದು.

  ಕನಿಷ್ಠ ವೇತನದ ಅರ್ಧಕ್ಕಿಂತ ಕಡಿಮೆಯಿಲ್ಲದ ಕನಿಷ್ಠ ಮಾಸಿಕ ಪಿಂಚಣಿಯೊಂದಿಗೆ ವೃದ್ಧಾಪ್ಯ ಪಿಂಚಣಿ, ಅಥವಾ, ರೂ. ಎಲ್ಲಾ ಹಿರಿಯ ನಾಗರಿಕರಿಗೆ ತಿಂಗಳಿಗೆ 6,000, ಯಾವುದು ಹೆಚ್ಚು.
- ಸಾರ್ವಜನಿಕ ವಲಯದ ಉದ್ಯಮಗಳ ಖಾಸಗೀಕರಣವನ್ನು ನಿಲ್ಲಿಸಿ ಮತ್ತು ರಕ್ಷಣೆ, ಇಂಧನ, ರೈಲ್ವೆ ಮತ್ತು ಮೂಲ ಸೇವೆಗಳಲ್ಲಿ ಖಾಸಗೀಕರಣವನ್ನು ಹಿಮ್ಮೆಟ್ಟಿಸುವುದು.
- ಎಸ್.ಸಿ./ಎಸ್.ಟಿ.ಗಳು, ಒಬಿಸಿಗಳು ಮತ್ತು ಅಂಗವಿಕಲರಿಗೆ ಖಾಸಗಿ ವಲಯದಲ್ಲಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ.
- ಶ್ರೀಮಂತ ಮತ್ತು ಕಾರ್ಪೊರೇಟ್ ಲಾಭಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಿ; ಅತಿ ಶ್ರೀಮಂತರಿಗೆ ಸಂಪತ್ತು ತೆರಿಗೆಯನ್ನು ಮರುಸ್ಥಾಪಿಸಿ ಮತ್ತು ಪಿತ್ರಾರ್ಜಿತ ತೆರಿಗೆಯನ್ನು ಪರಿಚಯಿಸಿ; ದೀರ್ಘಾವಧಿಯ ಬಂಡವಾಳ ಲಾಭ ತೆರಿಗೆಯನ್ನು ಮರುಸ್ಥಾಪಿಸಿ.
- ಆಂಶಿಕ ಪಟ್ಟಿ ವ್ಯವಸ್ಥೆಯೊಂದಿಗೆ ಅನುಪಾತ ಪ್ರಾತಿನಿಧ್ಯವನ್ನು ಪರಿಚಯಿಸುವ ಮೂಲಕ ಚುನಾವಣಾ ವ್ಯವಸ್ಥೆಯನ್ನು ಸುಧಾರಿಸುವುದು; ಚುನಾವಣಾ ವೆಚ್ಚಗಳಿಗಾಗಿ ರಾಜ್ಯದಿಂದ ಹಣ.

ಮಾರುವುದೇ ಬಿಜೆಪಿಯ ಮೋದಿ ಕೆಲಸವಾಗಿದೆ–ಮೀನಾಕ್ಷಿ ಸುಂದರಂ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ, ಯಲಹಂಕದಲ್ಲಿ ನಡೆದ ಸಿಪಿಐ(ಎಂ) ರೋಡ್ ಶೋ

ಕಳೆದ 10 ವರ್ಷ ದೇಶದ ಆಡಳಿತ ನಡೆಸಿದ ಬಿಜೆಪಿ ದೇಶದ ಆರ್ಥಿಕತೆಯನ್ನು ದಿವಾಳಿ ಸ್ಥಿತಿಗೆ ತಂದಿದೆ. ಮೋದಿ ನೇತೃತ್ವದ ಒಕ್ಕೂಟ ಸರ್ಕಾರ ದೇಶದ ಸಾರ್ವಜನಿಕ ಉದ್ದಿಮೆಗಳನ್ನು ಮಾರುತ್ತಾ ಶ್ರೀಮಂತರ ಪರವಾಗಿ ಕೆಲಸ ಮಾಡುತ್ತಿದೆ. ಕಾರ್ಮಿಕರ ವಿರುದ್ಧವಾಗಿ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿದ್ದಾರೆ. ಇದು ಇವರ ವಿಶ್ವಗುರು ಸಿದ್ಧಾಂತ ಎಂದು ಸಿಪಿಐ(ಎಂ) ರಾಜ್ಯ ಮುಖಂಡರಾದ ಮೀನಾಕ್ಷಿ ಸುಂದರಂ ರವರು ಬಿಜೆಪಿಯ ಜನವಿರೋಧಿ ನೀತಿಗಳನ್ನು ಟೀಕಿಸಿದರು.

ಮೀನಾಕ್ಷಿ ಸುಂದರಂ ರವರು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಅಭ್ಯರ್ಥಿ ಎಂ.ಪಿ.ಮುನಿವೆಂಕಟಪ್ಪ ರವರ ಪರವಾಗಿ ಯಲಹಂಕ ಉಪನಗರದಲ್ಲಿ ರೋಡ್ ಶೋ ಬಳಿಕ ನಡೆದ ಸಭೆಯಲ್ಲಿ ಮಾತನಾಡುತ್ತಾ "ದೇಶದ ರೈತರ ಸಾಲ ಮನ್ನಾ ಮಾಡಲು ಹಣವಿಲ್ಲ ಎನ್ನುವ ಸರ್ಕಾರ ಶ್ರೀಮಂತರಿಗೆ, ಬಂಡವಾಳದಾರರಿಗೆ ಸಬ್ಸಿಡಿ ನೀಡಿದೆ. ಫಸಲ್ ಬೀಮಾ ಯೋಜನೆ, ಎಲೆಕ್ಟ್ರೋಲ್ ಬಾಂಡ್ ಹಗರಣ ಸೇರಿದಂತೆ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಬಿ.ಜೆ.ಪಿ. ತೊಡಗಿದೆ" ಎಂದು ಟೀಕಿಸಿದರು.

10 ವರ್ಷ ಅಧಿಕಾರದಲ್ಲಿದ್ದ ಬಿಜೆಪಿ ದೇಶದ ಕರಾವಳಿ ಭಾಗದ ಬಂದರುಗಳನ್ನು ಅದಾನಿಗೆ ಮಾರಿದ್ದಲ್ಲದೇ, ದೇಶದ ಬಹುತೇಕ ಕ್ಷೇತ್ರಗಳನ್ನು ಖಾಸಗಿಯವರಿಗೆ ಮಾರಿದೆ. ದೇಶದ ಸಾರ್ವಜನಿಕ ಒಡೆತನದ ರಕ್ಷಣಾ ಕಂಪನಿಗಳನ್ನು ಖಾಸಗಿಯವರಿಗೆ ಮಾರುತ್ತಿದೆ. ಮಾರುವುದೇ ಇವರ ಪ್ರಮುಖ ಕೆಲಸವಾಗಿದೆ.

ಬೆಲೆ ಏರಿಕೆಯಿಂದ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಬೆಲೆ ಏರಿಕೆ ನಿಯಂತ್ರಿಸಲು ಮೋದಿ ಹಾಗೂ ಒಕ್ಕೂಟ ಸರ್ಕಾರ ವಿಫಲವಾಗಿದೆ. ಜನಸಾಮಾನ್ಯರ ಪರವಾಗಿ ಕೆಲಸ ಮಾಡಬೇಕಿದ್ದ ಸರ್ಕಾರ ಜನರ ಬದುಕನ್ನು ಬೀದಿಗೆ ತಂದು ನಿಲ್ಲಿಸಿದೆ. ಜನರ ಐಕ್ಯತೆಯನ್ನು ಮುರಿದು ಅಧಿಕಾರದಲ್ಲಿ ಮುಂದುವರಿಯುವ ಕೆಲಸವನ್ನು ಬಿ.ಜೆ.ಪಿ ಮಾಡಿದೆ.

ಎಡಪಂಥೀಯ ಪ್ರತಿನಿಧಿಗಳು ಪಾರ್ಲಿಮೆಂಟ್‌ನಲ್ಲಿ ಕಡಿಮೆಯಾದಾಗಲೆಲ್ಲ ಜನವಿರೋಧಿ ನೀತಿಗಳನ್ನು ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಜಾರಿಗೆ ತಂದಿದೆ. ಜನರ ಧ್ವನಿಯಾಗಿ ಪಾರ್ಲಿಮೆಂಟಿನಲ್ಲಿ ಕೆಲಸ ಮಾಡಲು ಸಿಪಿಐ(ಎಂ) ಅಭ್ಯರ್ಥಿಗೆ ಓಟು ಕೊಡುವಂತೆ ಅವರು ಮತದಾರರಲ್ಲಿ ಮನವಿ ಮಾಡಿದರು.

ಸಿಪಿಐ(ಎಂ) ಅಭ್ಯರ್ಥಿ ಎಂ.ಪಿ. ಮುನಿವೆಂಕಟಪ್ಪ ಮಾತನಾಡಿ, ಅಭಿವೃದ್ಧಿ ಮಾಡ್ತೀವಿ ಅಂತ ದೇಶದಲ್ಲಿ ಅಧಿಕಾರಕ್ಕೆ ಬಂದ ಮೋದಿ ಅಭಿವೃದ್ಧಿ ಅಂದ್ರೆ ಅಂಬಾನಿ ಅದಾನಿ ಅಭಿವೃದ್ಧಿ ಅಂತಾರೆ, ಯುವಜನರಿಗೆ ಉದ್ಯೋಗ ನೀಡುವ ಬದಲು ರಾಮಮಂದಿರ ಕಟ್ಟಿದ್ದೀವಿ ಅಂತಾರೆ, ಯುವಜನರು ನಿರುದ್ಯೋಗಿದ್ದಾರೆ. ಈ ಸ್ಥಿತಿಗೆ ಇದೇ ಬಿಜೆಪಿ ಹಾಗೂ **ಪುಟ 14 ಕ್ಕೆ**



ಕಾರ್ಪೋರೇಟ್ ಲೂಟಿ ಮತ್ತು ದೋಚುವಿಕೆಯನ್ನು.....

ಪುಟ 8 ರಿಂದ

ರೂ.70,000 ಕೋಟಿಗಳ ಅನುದಾನಗಳೊಂದಿಗೆ SPECS ಯೋಜನೆಯು ಮೂಲ ಬಂಡವಾಳ ಹೂಡಿಕೆಯ ಮೇಲೆ 25 ಶೇಕಡ ಹಣಕಾಸು ಉತ್ತೇಜನೆಯನ್ನು ಕಂಪನಿಗಳಿಗೆ ನೀಡಲಿದೆ. ಟಾಟಾ ಸಮೂಹ, ಮುರುಗಪ್ಪ ಸಮೂಹ–CG, Micron ಮುಂತಾದ ಜಪಾನ್, ತೈಲಾಂಡ್ ಮತ್ತು ತೈವಾನ್ ದೇಶದ ಬಹುರಾಷ್ಟ್ರೀಯ ಕಂಪನಿಗಳಿಗೆ ಗುಜರಾತ್‌ನ ಸಾನಂದ್ ಮತ್ತು ಅಸ್ಸಾಂಗಳಲ್ಲಿ ಸೆಮಿ ಕಂಡಕ್ಟರ್ ಕಾರ್ಖಾನೆಗಳನ್ನು ತೆರೆಯಲು ರೂ.59,000 ಕೋಟಿಗಳ ಉತ್ತೇಜನ ನೆರವನ್ನು ನೀಡಲಾಗಿದೆ. MEIS ಅಡಿಯಲ್ಲಿ RoDTEF ಯೋಜನೆಯು ಈ ಎಲ್ಲಾ ಕಂಪನಿಗಳು ಮಾಡುವ ರಫ್ತಿನ ಮೇಲೆ ಪಾವತಿಸುವ ತೆರಿಗೆ ಮತ್ತು ಸುಂಕಗಳನ್ನು ಮರುಪಾವತಿಸಲಿದೆ.

ದಿವಾಳಿ ಮತ್ತು ಪಾಪರಿಕೆ ಸಂಹಿತೆ (IBC):

ಭಾರತದ ದಿವಾಳಿ ಮತ್ತು ಪಾಪರಿಕೆ ಮಂಡಳಿಯ 2022–2023 ರ ವಾರ್ಷಿಕ ವರದಿಯಂತೆ 2016ರಿಂದ 2023ರವರೆಗೆ 6571 ಕಂಪನಿಗಳು ಕಾರ್ಪೋರೇಟ್ ದಿವಾಳಿ ಪರಿಹಾರ ಪ್ರಕ್ರಿಯೆ (CIRP) ಗಳಲ್ಲಿ 4,515 ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಲಾಗಿದೆ ಮತ್ತು 2030 ಕಂಪನಿಗಳ ವಿಸರ್ಜನೆ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಈ 2030 ಕಾರ್ಪೋರೇಟ್ ಸಾಲಗಾರರ ಒಟ್ಟು ಸಾಲ ರೂ.9.20 ಲಕ್ಷ ಕೋಟಿ ರೂಗಳಾದರೆ, ಅವರ ವಾಸ್ತವ ಆಸ್ತಿ ಇದ್ದದ್ದು ಕೇವಲ 64 ಸಾವಿರ ಕೋಟಿ ಮಾತ್ರವಾಗಿತ್ತು. ಅಂದರೆ ರೂ.8.56 ಲಕ್ಷ ಕೋಟಿಗಳ ನಷ್ಟವನ್ನು ಸಾಲ ನೀಡಿದ ಸಾರ್ವಜನಿಕ ವಲಯದ ಬ್ಯಾಂಕುಗಳು ಅನುಭವಿಸಬೇಕಾಗಿ ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ Trends and Progress of Banking in India ವರದಿಯು ಬಹಿರಂಗಪಡಿಸಿರುವಂತೆ ಒಟ್ಟು ಸಾಲದ ಶೇ.23.8 ರಷ್ಟು ಮಾತ್ರ ವಸೂಲಿಯಾಗಿದೆ. ಅತಿದೊಡ್ಡ ಮೊತ್ತದ ಸಾಲ ಹೊಂದಿದ 12 ಕಾರ್ಪೋರೇಟ್ ಕಂಪನಿಗಳ ಒಟ್ಟು ಸಾಲ 3.45 ಲಕ್ಷ ಕೋಟಿಗಳಿತ್ತು. ಆದರೆ ಅವುಗಳ ವಿಸರ್ಜನಾ ಮೌಲ್ಯ ಕೇವಲ ರೂ.73,220 ಕೋಟಿಗಳಷ್ಟಿತ್ತು. ಈ 12 ಕಂಪನಿಗಳಲ್ಲಿ ಭೂಷನ್ ಪವರ್ ಅಂಡ್ ಸ್ಟೀಲ್ಸ್ ಮತ್ತು ಮುಂತಾದ ಕಂಪನಿಗಳು ಇದೀಗ PLI ಫಲಾನುಭವಿಗಳಾಗಿದ್ದಾರೆ.

IBC ಅಡಿಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿಯಲ್ಲಿ ಕಾರ್ಪೋರೇಟ್ ಪರಿಹಾರ ಪ್ರಕ್ರಿಯೆಗೆ ಒಳಪಡುವ ಕಂಪನಿಗಳನ್ನು ಪರಿಹಾರ ಪ್ರಕ್ರಿಯೆ ಭಾಗವಾಗಿ ಇತರೆ ಕಂಪನಿಗಳು ವಶಪಡಿಸಿಕೊಂಡಲ್ಲಿ ಅವುಗಳಲ್ಲಿನ ಕಾರ್ಮಿಕರನ್ನು ಮುಂದುವರಿಸಬೇಕೆಂಬ ಹಾಗೂ ಅವರ ವೇತನ, ಸೇವಾ ಷರತ್ತುಗಳನ್ನು ಸಂರಕ್ಷಿಸಬೇಕೆಂಬ ಕೈಗಾರಿಕಾ ವಿವಾದಗಳ ಕಾಯಿದೆಯ ಪ್ರಾವಧಾನಗಳು ಅನ್ವಯವಾಗುವುದಿಲ್ಲ. ಹಾಗಾಗಿ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿದ್ದಲ್ಲಿ ಅವರಿಗೆ ಕಾರ್ಖಾನೆ ಮುಚ್ಚುವಿಕೆಯ ಅಥವಾ ರಿಟ್ರೆಂಚ್‌ಮೆಂಟ್ ಪರಿಹಾರ ದೊರಕುವುದಿಲ್ಲ.

“ಐಬಿಸಿ ಯು ವ್ಯಾಪಾರಸ್ಥರನ್ನು ಮತ್ತಷ್ಟು ಸಂಕಷ್ಟದಿಂದ ಪಾರುಮಾಡಿದೆ ಮತ್ತು ಅವರಿಗೆ ನಿರ್ಗಮನದ ದಾರಿಯನ್ನು ಒದಗಿಸಿದೆ” ಎಂಬ ಪ್ರಧಾನಿ ಮೋದಿಯವರ ಹೇಳಿಕೆಯು ಶಾಸನದ ಉದ್ದೇಶವನ್ನು ತೋರುತ್ತದೆ. ಐಬಿಸಿ ಯು Ease of doing business ವ್ಯಾಪಾರವನ್ನು ಸುಲಲಿತಗೊಳಿಸುವಿಕೆ ಶ್ರೇಯಾಂಕದಲ್ಲಿ ಭಾರತವನ್ನು 100ರ ಸ್ಥಾನದಿಂದ 77ನೇ ಸ್ಥಾನಕ್ಕೆ ಏರಲು 23 ಅಂಶಗಳ ಸಾಧನವನ್ನು ಒದಗಿಸಿದೆ.

ಸಾಲಗಳ ರೈಟ್‌ಆಫ್:

2023 ಮಾರ್ಚ್‌ವರೆಗೆ 2014 ರಿಂದ ಕಾರ್ಪೋರೇಟ್‌ಗಳ ರೂ.15.35 ಲಕ್ಷ ಕೋಟಿ ರೈಟ್ ಆಫ್ ಆದ ಸಾಲಗಳಲ್ಲಿ ಕೇವಲ ಶೇ.14.07 ಮಾತ್ರ ವಸೂಲಿಯಾಗಿದೆ. ಕಾರ್ಪೋರೇಟ್ ತೆರಿಗೆಯನ್ನು ಶೇ.30 ರಿಂದ 22ಕ್ಕೆ ಮತ್ತು ಕೆಲವು ದೇಶೀಯ ಕಾರ್ಪೋರೇಟ್‌ಗಳಿಗೆ 15 ಶೇಕಡಕ್ಕೆ ಇಳಿಸಲಾಗಿದೆ. ಒಟ್ಟು ತೆರಿಗೆ ಪಾವತಿಯಲ್ಲಿ ಕಾರ್ಪೋರೇಟ್ ತೆರಿಗೆಯ ಪಾಲು 2014–15ರ 34.5 ಶೇಕಡವಿದ್ದದ್ದು 2024–25ರಲ್ಲಿ 27.2 ಶೇಕಡಕ್ಕೆ ಮತ್ತು ಕಸ್ಟಂ ಸುಂಕವು 15.1 ಶೇಕಡದಿಂದ 6 ಶೇಕಡಕ್ಕೆ ಕುಸಿದಿದೆ. ಆದರೆ ಆದಾಯ ತೆರಿಗೆಯ ಪಾಲು 20.8 ಶೇಕಡದಿಂದ 30.2 ಶೇಕಡಕ್ಕೆ ಹೆಚ್ಚಳವಾಗಿದೆ.

ಷೇರು ವಿಕ್ರಯ:

ಇತಿಹಾಸದಲ್ಲೇ ಅತಿ ಹೆಚ್ಚು ರೂ.4,41,194 ಕೋಟಿ ರೂಗಳ ಸಾರ್ವಜನಿಕ ಉದ್ದಿಮೆಗಳ ಷೇರುಗಳನ್ನು ಮೋದಿಯವರ ಆಡಳಿತದಲ್ಲಿ ವಿಕ್ರಯ ಮಾಡಲಾಗಿದೆ. 2021–2023 ರ ಎರಡು ವರ್ಷದ ಅವಧಿಯಲ್ಲಿ ರಾಷ್ಟ್ರೀಯ ನಗದೀಕರಣ ಕೊಳವೆ ಮಾರ್ಗದ ಮೂಲಕ ರೂ.2,29,000 ಕೋಟಿಗಳ ಸಾರ್ವಜನಿಕ ಆಸ್ತಿಗಳನ್ನು ನಗದೀಕರಿಸಿದ್ದಾರೆ ಅಂದರೆ ಬಹುತೇಕ ಖಾಸಗೀಕರಿಸಿದ್ದಾರೆ. ಸರ್ಕಾರಿ ಒಡೆತನದ ಕಲ್ಲಿದ್ದಲು ಗಣಿಗಳು, ರಸ್ತೆಗಳು, ವಿದ್ಯುತ್ ಸರಬರಾಜು ಮತ್ತು ವಿತರಣಾ ಕಂಪನಿಗಳು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು, ರೈಲ್ವೆ, ವಿಮಾನ ನಿಲ್ದಾಣಗಳು, ಬಂದರುಗಳು ಮುಂತಾದವುಗಳನ್ನು ದೀರ್ಘಾವಧಿಯ ಗುತ್ತಿಗೆ ನೀಡುವ ಮೂಲಕ ಈ ಪ್ರಕ್ರಿಯೆಯನ್ನು ಸಾಧಿಸಲಾಗಿದೆ. 2024ರ ವರ್ಷದಲ್ಲಿ ರೂ.1.5 ಲಕ್ಷ ಕೋಟಿ ರೂಪಾಯಿಗಳ ಆಸ್ತಿಯನ್ನು ನಗದೀಕರಿಸುವ ಯೋಜನೆಯನ್ನು ರೂಪಿಸಲಾಗಿದೆ. ಇದು ದೇಶದ ಆಸ್ತಿಗಳನ್ನು ವಿದೇಶಿ ಮತ್ತು ದೇಶೀಯ ಕಾರ್ಪೋರೇಟ್‌ಗಳಿಗೆ ಆರು ಕಾಸು ಮೂರು ಕಾಸಿಗೆ ಮಾರುವ ಪ್ರಕ್ರಿಯೆ ಆಗಿದೆ.

ಉದ್ಯೋಗ ಸೃಷ್ಟಿ :

PLI ಗೆ ಅನುಮೋದಿತ/ಫಲಾನುಭವಿ ಕಂಪನಿಗಳಲ್ಲಿ ಉದ್ಯೋಗಗಳ ಪ್ರಮಾಣ ಬಹುತೇಕ ಕಡಿಮೆ ಆಗಿದೆ ಅಥವಾ ಸ್ಥಗಿತತೆಯನ್ನು ಕಾಣುತ್ತಿದೆ. ಉದಾಹರಣೆ; ಕಾರ್ಮಿಕ ಕಾನೂನುಗಳನ್ನು ಪಾಲನೆ ಮಾಡದೇ ಇರುವುದಕ್ಕಾಗಿ ಹಾಗೂ ಕಾರ್ಖಾನೆಯಲ್ಲಿ ಹಿಂಸೆಗೆ ಕುಖ್ಯಾತಿ ಹೊಂದಿದ್ದ, ಇದೀಗ ಟಾಟಾ ಸಮೂಹದಲ್ಲಿರುವ ಆಪಲ್ ಫೋನ್ ಕಂಪನಿಗೆ ಗುತ್ತಿಗೆ ತಯಾರಕರಾಗಿರುವ ಫಾಕ್ಸ್‌ಕಾನ್ ಕಂಪನಿಗೆ ಸರಬರಾಜುದಾರರಾಗಿರುವ ವಿಸ್ಟ್ರನ್ ಕಂಪನಿಯಲ್ಲಿ ಕೇವಲ 2520 ನೌಕರರಿದ್ದಾರೆ. ಅದೇ ರೀತಿ ಸಾಮ್‌ಸಂಗ್, ಪೆಗಟ್ರಾನ್, ಡಿಕ್ಸನ್ ಮತ್ತು ಮುಂತಾದ ಫಲಾನುಭವಿಗಳಲ್ಲೂ ನೌಕರರ ಸಂಖ್ಯೆ ಕಡಿಮೆಯಿದೆ.

ಏಪ್ರಿಲ್ 2019ರಿಂದ ವಾಹನ ತಯಾರಿಕೆ ಮತ್ತು ವಾಹನ ಬಿಡಿಭಾಗಗಳ ಕಾರ್ಖಾನೆಗಳು 3.5 ಲಕ್ಷ ಕಾರ್ಮಿಕರನ್ನು ಲೇ–ಆಫ್ ಮಾಡಿದ್ದಾರೆ. ಮಾರುತಿ ಸುಜುಕಿ ಸಂಸ್ಥೆಯು ತನ್ನ ತಾತ್ಕಾಲಿಕ ಕಾರ್ಮಿಕರ ಸಂಖ್ಯೆಯನ್ನು 6 ಶೇಕಡ ಕಡಿಮೆ ಮಾಡಿದೆ. ಅನುಮೋದಿತ ಅರ್ಜಿದಾರರಾದ ಅಶೋಕ್ ಲೇಲ್ಯಾಂಡ್, ಟಾಟಾ ಮೋಟಾರ್ಸ್, ಐಷರ್, ಮಹೇಂದ್ರಾ ಅಂಡ್ ಮಹೇಂದ್ರಾ, ಕಿಯಾ ಇಂಡಿಯಾ ಪ್ರೈ.ಲಿ., ಟಯೋಟಾ ಕಿರ್ಲೋಸ್ಕರ್, ಮಿಟ್‌ಸುಬ್ಬಿ, ಟಿವಿಎಸ್, ಹೊಂಡಾ, ಹೀರೋ, ಸುಜುಕಿ ಮುಂತಾದ ವಾಹನ ತಯಾರಿಕಾ ಸಂಸ್ಥೆಗಳು ಮತ್ತು ವಾಹನ ಬಿಡಿಭಾಗ ತಯಾರಿಸುವ ಬಾಷ್ ಮುಂತಾದ ಕಂಪನಿಗಳು ಉದ್ಯೋಗಗಳನ್ನು ಹೆಚ್ಚಿಸಿಲ್ಲ ಮಾತ್ರವಲ್ಲದೆ ಸ್ವಯಂ ನಿವೃತ್ತಿ ಎಂಬ ಬಲವಂತದ ಯೋಜನೆ ಮೂಲಕ ಉದ್ಯೋಗಿಗಳನ್ನು ಮನೆಗೆ ಕಳುಹಿಸಿದ್ದಾರೆ.

ಆಹಾರ ಉತ್ಪಾದನಾ ಕಾರ್ಖಾನೆಗಳಾದ ಬ್ರಿಟಾನಿಯಾ, ಹೆಚ್‌ಎಲ್‌ಎಲ್, ಅನ್‌ಮೋಲ್, ಹಲ್ದೀರಾಮ್ಸ್, ಐಟಿಸಿ ಫುಡ್ಸ್, ಎಂಟಿಆರ್ ಫುಡ್ಸ್, ಹಟ್ಸನ್ ಮತ್ತು ಮುಂತಾದವು ನೌಕರರ ಸಂಖ್ಯೆಯನ್ನು ಹೆಚ್ಚಿಸಿಲ್ಲ. ಲೋಹಗಳು ಮತ್ತು ಖನಿಜಗಳಡಿ ಸ್ಪೆಷಾಲಿಟಿ ಸ್ಟೀಲ್‌ಗಾಗಿ ಅನುಮೋದಿತ ಅರ್ಜಿದಾರರಾದ ಜಿಂದಾಲ್, ಟಾಟಾ, ಅರ್ಸೆಲಾರ್ ಮಿಥಲ್–ನಿಪ್ಪನ್, ಭೂಷಣ್, ಜೆಎಸ್‌ಡಬ್ಲ್ಯೂ, ಕಿರ್ಲೋಸ್ಕರ್ ಫೆರೋಸ್, ಕಲ್ಯಾಣಿ, ಲಾಯ್ಡ್ ಗಳಲ್ಲಿ ಕಾರ್ಮಿಕರ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳವನ್ನು ಗಮನಿಸಲಾಗಿಲ್ಲ.

ಸಿಎಂಐಇ ಸರ್ವೆ ಪ್ರಕಾರ ಭಾರತದ ತಯಾರಿಕಾ ವಲಯದಲ್ಲಿ 2013ರಲ್ಲಿ ಶೇ.13ರಷ್ಟಿದ್ದ ಗುತ್ತಿಗೆ ಕಾರ್ಮಿಕರ ಪಾಲು 2022ರ ವೇಳೆಗೆ ಶೇ.42.5 ಕ್ಕೆ ಏರಿಕೆಯಾಗಿದೆ. ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ಮತ್ತು ಮಾನವ ಅಭಿವೃದ್ಧಿಗಾಗಿನ ಸಂಸ್ಥೆ ಬಿಡುಗಡೆ ಮಾಡಿರುವ 2024 ರ ಭಾರತ ಉದ್ಯೋಗ ವರದಿಯ ಪ್ರಕಾರ “ಭಾರತದಲ್ಲಿನ ಉದ್ಯೋಗದ ಪರಿಸ್ಥಿತಿಯು ಪೇಲವವಾಗಿದೆ ನಿರುದ್ಯೋಗಿ ಶ್ರಮಶಕ್ತಿಯಲ್ಲಿ ಯುವಜನರ ಪಾಲು ಶೇ.83ರಷ್ಟಾಗಿದೆ. ಸೆಕೆಂಡರಿ ಶಿಕ್ಷಣ ಅಥವಾ ಉನ್ನತ ಶಿಕ್ಷಣ ಪಡೆದ ಯುವಜನರ ಪಾಲು ಒಟ್ಟಾರೆ ನಿರುದ್ಯೋಗಿ ಯುವಕರಲ್ಲಿ ದ್ವಿಗುಣಗೊಂಡು 2000 ರಲ್ಲಿ 35.2 ಶೇಕಡ ಇದ್ದ ಅವರ ಪ್ರಮಾಣ 2022ಕ್ಕೆ 65.2 ಶೇಕಡಕ್ಕೆ ಹೆಚ್ಚಳವಾಗಿದೆ.” ಹಾಗಿದ್ದಲ್ಲಿ ಸೃಜಿಸಲಾಗಿವೆ ಎಂಬ ಅವರ ಪ್ರತಿಪಾದನೆಯ ಹುದ್ದೆಗಳು ಎಲ್ಲಿವೆ?

ಆದರೆ ಹೆಚ್ಚು ಉತ್ಪಾದಕತೆಯ ಷರತ್ತುಗಳನ್ನು ಕಾರ್ಮಿಕರ ಮೇಲೆ ವಿಧಿಸಿ, ಅದರಿಂದ ಹೆಚ್ಚಳಗೊಂಡ ಉತ್ಪಾದನೆಯ ಆಧಾರಿತವಾಗಿ ವಾರ್ಷಿಕ ಉತ್ಪಾದನೆ ಹೆಚ್ಚಳ ಆದ ಲೆಕ್ಕದಲ್ಲಿ PLI ಅನ್ನು ಸಂಸ್ಥೆಗಳು ಪಡೆದುಕೊಳ್ಳುತ್ತಿವೆ. ವರ್ಷದಿಂದ ವರ್ಷಕ್ಕೆ PLI ಪಡೆದ ಕಂಪನಿಗಳು ಹೂಡಬೇಕಾದ ಹೂಡಿಕೆ ಹೆಚ್ಚಳದ ಬಹುತೇಕ ಪಾಲು PLI ಹಣವೇ ಆಗಿದೆ ಎಂಬುದನ್ನು ಮನಗಾಣಬೇಕಿದೆ.

ಸ್ಥಳೀಯ ಉತ್ಪಾದನೆ ಮತ್ತು ಮೌಲ್ಯವರ್ಧನೆ:

ಅತಿ ಹೆಚ್ಚು ರಫ್ತನ್ನು ಸಾಧಿಸಿದ್ದೇವೆ ಎಂಬ ಮೊಬೈಲ್ ತಯಾರಿಕಾ ವಲಯದಲ್ಲಿನ ಮೊಬೈಲ್ ಬಿಡಿಭಾಗಗಳ ಸ್ಥಳೀಯ ಉತ್ಪಾದನೆ ಕ್ಯಾಮರಾ ಮಾಡ್ಯುಲ್ ನಲ್ಲಿ 25 ಶೇಕಡ, ಡಿಸ್ಪ್ಲೇ ಜೋಡಣೆಯಲ್ಲಿ 25 ಶೇಕಡ, ಮೆಕ್ಯಾನಿಕ್ಸ್ ನಲ್ಲಿ 25 ಶೇಕಡ, ಡೈ ಕ್ಯಾಸ್ಟ್ ನಲ್ಲಿ 15 ಶೇಕಡ ಮತ್ತು ಕನೆಕ್ಟರ್ಸ್‌ನಲ್ಲಿ 5 ಶೇಕಡದಷ್ಟಾಗಿದೆ. ಅಂದರೆ ಉಳಿದದ್ದನ್ನು ಆಮದು ಮಾಡಿಕೊಳ್ಳಲಾಗಿದೆ. ಮೊಬೈಲ್ ಫೋನ್‌ಗಳ ತಯಾರಿಕೆಯಲ್ಲಿ ಮೌಲ್ಯವರ್ಧನೆ 25 ಶೇಕಡಕ್ಕಿಂತ ಕಡಿಮೆ ಇದೆ. ಆಪಲ್ ಕಂಪನಿಯಲ್ಲಂತು ಇದು ಕೇವಲ 12 ರಿಂದ 15 ಶೇಕಡದಷ್ಟಾಗಿದೆ.

ರಫ್ತಿನ ಹೆಚ್ಚಳ ಮತ್ತು ಆಮದಿಗೆ ಪರ್ಯಾಯ:

ಇತ್ತೀಚಿನ ವಿಶ್ವ ವ್ಯಾಪಾರ ಸಂಘಟನೆಯ ಗ್ಲೋಬಲ್ ಟ್ರೇಡ್ ಔಟ್ ಲುಕ್ ಮತ್ತು ಸ್ಟಾಟಿಸ್ಟಿಕ್ಸ್ ರಿಪೋರ್ಟ್ ಪ್ರಕಾರ, ಜಾಗತಿಕ ಸರಕು ರಫ್ತಿನಲ್ಲಿ ಭಾರತದ ಪಾಲು ಕೇವಲ ಶೇ.1.8 ರಷ್ಟಾಗಿದೆ. 2023 ರಲ್ಲಿ ಸರಕುಗಳ ರಫ್ತಿನ ಪ್ರಮಾಣ 4.71 ಶೇಕಡ ಕುಸಿತವನ್ನು ಕಂಡಿದೆ. ಗ್ಲೋಬಲ್ ಟ್ರೇಡ್ ರೀಸರ್ಚ್ ಇನ್‌ಷಿಯೇಟಿವ್ ಪ್ರಕಾರ, 2022ಕ್ಕೆ ಹೋಲಿಸಿದರೆ 2023 ರಲ್ಲಿ ಭಾರತದ ರಫ್ತು ಮತ್ತು ಆಮದು ಶೇ.2.6 ರಷ್ಟು ಕುಸಿತ ಕಂಡಿದೆ. 2014 ರಲ್ಲಿ ಭಾರತದ ಜಿಡಿಪಿಯಲ್ಲಿನ ಶೇ.16.9 ರಷ್ಟಿದ್ದ ಸರಕುಗಳ ರಫ್ತಿನ ಪಾಲು 2023ರಷ್ಟರಲ್ಲಿ ಶೇ.13.3 ಕ್ಕೆ ಕುಸಿದಿದೆ ಮತ್ತು 2024ಕ್ಕೆ 11.4 ಕ್ಕೆ ಕುಸಿಯುವ ನಿರೀಕ್ಷೆ ಇದೆ.

ಜಿಡಿಪಿಯಲ್ಲಿನ ಷೇರು:

2010ರಲ್ಲಿ ಭಾರತದ ಜಿಡಿಪಿ ಗೆ 17 ಶೇಕಡ ಕೊಡುಗೆ ನೀಡಿದ್ದ ತಯಾರಿಕಾ ವಲಯವು 2014ರ ವೇಳೆಗೆ 15 ಶೇಕಡಕ್ಕೆ ಕುಸಿದಿದೆ ಮತ್ತು 2022 ರ ವೇಳೆಗೆ 13 ಶೇಕಡಕ್ಕೆ ಕುಸಿತ ಕಂಡಿದೆ.

ಹಾಗಾಗಿ ಉದ್ಯೋಗಗಳು ಸೃಷ್ಟಿಯಾಗಿಲ್ಲ, ಆಮದಿಗೆ ಪರ್ಯಾಯ ರೂಪಿತವಾಗಿಲ್ಲ, ರಫ್ತು ಬಾಸ್ಕೆಟ್‌ನಲ್ಲಿ ಬದಲಾವಣೆ ಕಾಣಲಾಗುತ್ತಿಲ್ಲ, ಮೂಲಭೂತ ಸಾಮರ್ಥ್ಯ ಮತ್ತು ಕಟ್ಟಿಂಗ್ ಎಡ್ಜ್ ತಂತ್ರಜ್ಞಾನದಲ್ಲಿ ಹೂಡಿಕೆಯನ್ನು ಕಾಣಲಾಗುತ್ತಿಲ್ಲ. ಕೇವಲ ಸಾರ್ವಜನಿಕ ಹಣ ರಾಷ್ಟ್ರೀಯ ಖಜಾನೆಯಿಂದ ಖಾಸಗಿ ಕಾರ್ಪೋರೇಟ್ ಧಣಿಗಳ ಲಾಭ ಹೆಚ್ಚಳ ಮಾಡಲು ಹರಿದಿದೆ ಅಷ್ಟೆ.

ಇದರಿಂದ ಸ್ಪಷ್ಟವಾಗುವುದೇನೆಂದರೆ, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು, ಸರ್ಕಾರದ ಮೇಲಿನ ತನ್ನ ಹಿಡಿತವನ್ನು ಬಳಸಿಕೊಂಡು, ದೊಡ್ಡ ಕಾರ್ಪೋರೇಟ್‌ಗಳಿಗೆ ಸಾರ್ವಜನಿಕ ಹಣವನ್ನು ವರ್ಗಾಯಿಸಿದೆ ಮತ್ತು ಅಧಿಕಾರದಲ್ಲಿ ಉಳಿಯಲು ಅವರಿಂದ ಕಾರ್ಪೋರೇಟ್ ದೇಣಿಗೆಯನ್ನು ಪಡೆಯುತ್ತಿದೆ. ಇದು ರಾಷ್ಟ್ರ ವಿರೋಧಿಯಲ್ಲದೆ ಬೇರೇನೂ ಅಲ್ಲ. ಮೇಕ್ ಇನ್ ಇಂಡಿಯಾ, ಆತ್ಮ ನಿರ್ಭರ ಭಾರತ ಮತ್ತು ಉದ್ಯೋಗ ಸೃಷ್ಟಿ ಇವುಗಳೆಲ್ಲಾ ಜನರನ್ನು ವಂಚಿಸುವ ನಯವಂಚಕ ಜುಮ್ಲಾಗಳಾಗಿವೆ. ಅದರಲ್ಲೂ ಉದ್ಯೋಗಕ್ಕಾಗಿ ಹತಾಶೆಯಿಂದ ಕಾದಿರುವ ಯುವಜನರನ್ನು ವಂಚಿಸುವ ಕ್ರಮಗಳಾಗಿವೆ. ಹಾಗಾಗಿ ಈ ಸರ್ಕಾರವನ್ನು ಮುಂದುವರೆಯಲು ಬಿಡಲು ಸಾಧ್ಯವಿಲ್ಲ.

ನಾನು ತಿನ್ನುವುದಿಲ್ಲ ಬೇರೆಯವರನ್ನೂ ತಿನ್ನಲು ಬಿಡುವುದಿಲ್ಲ ಎಂಬ ಮೋದಿಯವರ ಹೆಗ್ಗಳಿಕೆಗೆ ವಿರುದ್ಧವಾಗಿ ದಶಕದ ಮೋದಿ ಆಡಳಿತವು ಸಾರ್ವಜನಿಕ ಹಣದ ಲೂಟಿ ಮತ್ತು ದೋಚುವಿಕೆಯ ಆಡಳಿತವನ್ನು ಖಾತ್ರಿಗೊಳಿಸಿದೆ. ಕಾರ್ಪೋರೇಟ್ ಲೂಟಿಯ ಜೊತೆಗೆ ಮೋದಿ ಸರ್ಕಾರವು ಆರ್‌ಎಸ್‌ಎಸ್ ನ ಮನುವಾದಿ ಸಿದ್ಧಾಂತ ಆಧಾರಿತ ವಿಭಜಕ ಯತ್ನಗಳನ್ನು ಉತ್ತೇಜಿಸಿದೆ. ಈ ದಿವಾಳಿಕೋರ ನೀತಿಗಳ ವಿರುದ್ಧ ನಡೆದಿರುವ ವರ್ಗಹೋರಾಟವನ್ನು ದುರ್ಬಲಗೊಳಿಸಲು ವರ್ಗ ಐಕ್ಯತೆಯನ್ನು ಬಲಹೀನಗೊಳಿಸಲು ಈ ವಿಭಜಕ ನೀತಿಗಳನ್ನು ಅನುಸರಿಸುತ್ತಿದೆ. ಆಡಳಿತದಲ್ಲಿನ ಈ ಕಾರ್ಪೋರೇಟ್ ಕೋಮುವಾದಿ ದುಷ್ಟಕೂಟವು ನಮ್ಮ ದೇಶದ ಜನತೆಯ ಮತ್ತು ಕಾರ್ಮಿಕರ ಹಿತಾಸಕ್ತಿಗಳ ವಿರುದ್ಧವಾಗಿದೆ.

ರಾಷ್ಟ್ರವನ್ನು ಕಾರ್ಪೋರೇಟ್ ಲೂಟಿ ಮತ್ತು ದೋಚುವಿಕೆ ಹಾಗೂ ಆರ್‌ಎಸ್‌ಎಸ್ ನ ವಿಭಜಕ ರಾಜಕಾರಣವನ್ನು ಖಾತರಿಪಡಿಸುವ ಬಿಜೆಪಿಯನ್ನು ಸೋಲಿಸಲು ಮತನೀಡಿ. ●

ಸುಳ್ಳಾದ ಭರವಸೆಗಳು-ನುಚ್ಚುನೂರಾದ ಕನಸುಗಳು

ಮೋದಿಯ ಉದ್ಯೋಗರಹಿತ ಭಾರತ.

ಉದ್ಯೋಗ ಖಾತ್ರಿ ಅಡಿಯಲ್ಲಿ ದಿನಗೂಲಿ ಸರಾಸರಿ ರೂ.237 ನಂತೆ ವಾರ್ಷಿಕ 50 ದಿನಗಳಷ್ಟೆ ಲಭ್ಯ





ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ತಮ್ಮ ಮಧ್ಯಂತರ ಬಜೆಟ್ ಭಾಷಣದಲ್ಲಿ "ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲೀ' ಯೋಜನೆಯಡಿ 1 ಕೋಟಿ ಕುಟುಂಬಗಳು ಪ್ರತಿ ತಿಂಗಳು 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಪಡೆಯಲು ಸಕ್ರಿಯಗೊಳಿಸಲಾಗುವುದು. ಈ ಯೋಜನೆಯು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪವಿತ್ರ ದಿನದಂದು ಪ್ರಧಾನ ಮಂತ್ರಿಯವರ ಸಂಕಲ್ಪವನ್ನು ಅನುಸರಿಸುತ್ತದೆ." ಎಂದು ಘೋಷಿಸಿದರು. ಹೀಗೆ ಹೇಳುವ ಮೂಲಕ ಇದೊಂದು ಹೊಸ ಯೋಜನೆ ಎಂಬಂತೆ ಬಿಂಬಿಸಲು ಹೊರಟಿದ್ದಾರೆ. “ಮೋದಿ ಸರ್ಕಾರದಿಂದ 300 ಯೂನಿಟ್ ವಿದ್ಯುತ್ ಉಚಿತ” ಎಂಬ ಘೋಷಣೆಯೇ ಬಿಜೆಪಿಯವರಿಂದ ಹೆಚ್ಚಾಗಿ ಕೇಳಿಬರುತ್ತಿದೆ. ತಮ್ಮ ಮನೆಗೂ 300 ಯೂನಿಟ್ ಉಚಿತ ವಿದ್ಯುತ್ ಸಿಗುವ ಭರವಸೆಯಲ್ಲಿ ಬಹಳಷ್ಟು ಜನರಿದ್ದಾರೆ.

ಮೋದಿ–10 ವರ್ಷಗಳು / ಭಾಗ–46

ಪಿಎಂ ಸೂರ್ಯ ಘರ್ ಯೋಜನೆಯಡಿ 300 ಯೂನಿಟ್ ಉಚಿತ ವಿದ್ಯುತ್!! ಏನಿದು ಮೋದಿಯವರ ಮಾತಿನ ಮೋಡಿ?

ಭಾರತದ ಒಂದು ಕೋಟಿ ಕುಟುಂಬಗಳಿಗೆ ‘ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲೀ’ ಯೋಜನೆಯಡಿ ಪ್ರತಿ ತಿಂಗಳು 300 ಯೂನಿಟ್ ಉಚಿತ ವಿದ್ಯುತ್ ಒದಗಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2024, ಫೆಬ್ರವರಿ 1 ರಂದು ತಮ್ಮ ಮಧ್ಯಂತರ ಬಜೆಟ್ ಭಾಷಣದಲ್ಲಿ ಘೋಷಿಸಿದರು. ಇದೇ ಘೋಷಣೆಯನ್ನು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಕೊಂಡಿದೆ. ಈ ಮನೆಗಳ ಸಂಖ್ಯೆಯನ್ನು ಈಗ 3 ಕೋಟಿಗೆ ಹೆಚ್ಚಿಸಿದೆ. ಇದರಿಂದ ಕುಟುಂಬಕ್ಕೆ 15,000–18,000 ರೂ.ವರೆಗೆ ಉಳಿತಾಯವಾಗುತ್ತದೆ" ಎಂದು ಹೇಳುತ್ತಾರೆ. ಏನಿದು ಉಚಿತ ವಿದ್ಯುತ್? ಮೋದಿ ಸರ್ಕಾರ ತಾನೇ ನಿಜವಾಗಿಯೂ ಉಚಿತ ವಿದ್ಯುತ್ ಒದಗಿಸುತ್ತದೆಯೇ? ಇದಕ್ಕಾಗಿ ಕೇಂದ್ರ ಸರ್ಕಾರ ಪ್ರತಿ ಕುಟುಂಬ ಬಳಕೆಮಾಡುವ 300 ಯೂನಿಟ್ ವಿದ್ಯುತ್ ಗಾಗಿ 15,000 ದಿಂದ 18,000 ರೂ.ಗಳ ವರೆಗೆ ಅನುದಾನ ಕೊಡುತ್ತದೆಯೇ? ಈ ಯೋಜನೆಯ ಫಲಾನುಭವಿಗಳು ಬಳಕೆ ಮಾಡುವ ವಿದ್ಯುತ್ ಗೆ ಕೇಂದ್ರ ಸರ್ಕಾರ ಹಣ ಒದಗಿಸುತ್ತದೆಯೇ? ಖಂಡಿತಾ ಇಲ್ಲ. ಹಾಗಾದರೆ ಮತ್ತೇನು? ಇಲ್ಲಿದೆ ನೋಡಿ ಬಿಜೆಪಿಯವರ ಮಾತಿನ ಮೋಡಿ.

ಸಿ. ಸಿದ್ದಯ್ಯ

‘ಬಾರೀ ರಿಯಾಯಿತಿ ದರದಲ್ಲಿ ಮಾರಾಟ’, ‘ಅತೀ ಕಡಿಮೆ ಬೆಲೆಯಲ್ಲಿ ಮಾರಾಟ’,–ಇಂತಹ ಜಾಹಿರಾತುಗಳಿಗೆ ಮಣಿದು ಶಾಪಿಂಗ್ ಮಾಲ್ ಗೆ ಹೋಗಿ ಖರೀದಿ ಮಾಡುವ ಮುನ್ನ, ಈ ಜಾಹಿರಾತುಗಳ ಮೇಲ್ತುದಿಯಲ್ಲಿರುವ, ಕಣ್ಣಿಗೆ ಕಾಣದಷ್ಟು ಸಣ್ಣದಾಗಿ ಮುದ್ರಿಸಿರುವ ‘ಸ್ಟಾರ್’ ಚಿನ್ಹೆ ಮತ್ತು ಆ ಚಿನ್ಹೆಗೆ ಸಂಬಂಧಿಸಿ ಆ ಜಾಹಿರಾತು ಫಲಕದ ಕೆಳಗೆ ಚಿಕ್ಕ ಅಕ್ಷರಗಳಲ್ಲಿ ಬರೆದಿರುವ ‘ಕಂಡೀಶನ್ ಅಪ್ಲೈ ಅಥವಾ ಷರತ್ತುಗಳು ಅನ್ವಯಿಸುತ್ತವೆ’ ಎಂಬುದನ್ನು ನೋಡದಿದ್ದರೆ ಗ್ರಾಹಕರು ಮೋಸ ಹೋಗುವುದಂತೂ ಖಂಡಿತ. ಆರೋಗ್ಯ, ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ಹಲವು ಖಾಸಗಿ ವಿಮಾ ಸಂಸ್ಥೆಗಳ ಜಾಹಿರಾತುಗಳೂ ಇದೇ ರೀತಿ ಇರುತ್ತವೆ. ಇಷ್ಟೇ ಏಕೆ, ಮೋದಿ ಸರ್ಕಾರದ ‘3000 ರೂ. ನಿವೃತ್ತಿ ವೇತನ’ ಎಂಬ ಜಾಹಿರಾತನ್ನು ಹೊಂದಿರುವ ಅಟಲ್ ಪಿಂಚಣಿ ಯೋಜನೆಯೂ, ಅತ್ಯಲ್ಪ ಸಹಾಯಧನ ನೀಡಿ, ತಾನೇ ಮನೆ ಕಟ್ಟಿಸಿಕೊಟ್ಟಿದ್ದೇನೆ ಎಂದು ಹೇಳುವ ಪ್ರಧಾನ್ ಮಂತ್ರಿ ಆವಾಸ್ ಯೋಜನೆಗೂ ಇಂತದೇ ತಂತ್ರಗಳ ಮೂಲಕ ಜನರನ್ನು ವಂಚಿಸುತ್ತಿದೆ.

ವ್ಯಾಪಾರಿಗಳು ‘ಗ್ರಾಹಕರನ್ನು’ ಸೆಳೆಯುವ ಇಂತದೇ ವ್ಯಾಪಾರಿ ತಂತ್ರಗಳನ್ನು ಮೋದಿ ಮತ್ತು ಬಿಜೆಪಿಯವರು ಮತದಾರರನ್ನು ತಮ್ಮತ್ತ ಸೆಳೆಯಲು ಮಾಡತೊಡಗಿದ್ದಾರೆ. ಹಳೆಯ ಯೋಜನೆಗಳಿಗೆ ಹಿಂದಿ ಅಥವಾ ಸಂಸ್ಕೃತ ಭಾಷೆಯ ಹೊಸ ಹೆಸರನ್ನಿಟ್ಟು, ಅದಕ್ಕೆ ‘ಪ್ರದಾನ ಮಂತ್ರಿ’ ಸೇರಿಸಿ, ಇದು ಜನಸಾಮಾನ್ಯರಿಗಾಗಿ ಹೊಸದಾಗಿ ರೂಪಿಸಿದ ಯೋಜನೆ ಎಂಬಂತೆ ಬಿಂಬಿಸಿ ಪ್ರಚಾರ ಮಾಡತೊಡಗುತ್ತಾರೆ. ಇದಕ್ಕೆ ಇತ್ತೀಚಿನ ಒಂದು ಉದಾಹರಣೆ: 3 ಕೋಟಿ ಕುಟುಂಬಗಳಿಗೆ ಪ್ರತಿ ತಿಂಗಳು 300 ಯೂನಿಟ್ ಉಚಿತ ವಿದ್ಯುತ್ ಎಂಬ ಘೋಷಣೆ. ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ‘ದೇಶದ ಮೂರು ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯೂನಿಟ್ ವಿದ್ಯುತ್ ಕೊಡುತ್ತೇವೆ, ಎಂದು ಹೇಳಿದೆ. “ಪ್ರತಿ ತಿಂಗಳು 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ 1 ಕೋಟಿ ಮನೆಗಳನ್ನು ಬೆಳಗಿಸುವ ಗುರಿಯನ್ನು ಹೊಂದಿದೆ,” ಎಂದು ಪ್ರದಾನಿ ಮೋದಿ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದರು.

ಈ ಘೋಷಣೆಯಲ್ಲಿನ ‘ಕಂಡೀಶನ್’ ಅಥವಾ ‘ಷರತ್ತುಗಳು’ ಏನೆಂದು ತಿಳಿದಾಗ ಮಾತ್ರ ಈ ‘ಉಚಿತ ವಿದ್ಯುತ್’ ನ ರಹಸ್ಯ ಅರಿಯಲು ಸಾಧ್ಯ.

ಏನಿದು ಉಚಿತ ವಿದ್ಯುತ್?


ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರ ನಿಜವಾಗಿಯೂ ‘ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲೀ’ ಯೋಜನೆ ಅಥವಾ "ಪಿಎಂ ಸೂರ್ಯ ಘರ್ ಯೋಜನೆಯಡಿ ಪ್ರತಿ ತಿಂಗಳು 300 ಯೂನಿಟ್ ವಿದ್ಯುತ್ ಕೊಡುತ್ತದೆಯೇ? ಕರ್ನಾಟಕ ಸರ್ಕಾರ ಈಗ ಕೊಡುತ್ತಿರುವ 200 ಯೂನಿಟ್ ವರೆಗಿನ ವಿದ್ಯುತ್ ವೆಚ್ಚವನ್ನು ತಾನೇ ಬರಿಸುವಂತೆ ಕೇಂದ್ರ ಸರ್ಕಾರವೂ ಕೂಡ ಈ ಯೋಜನೆಯ ಫಲಾನುಭವಿಗಳು ಪ್ರತಿ ತಿಂಗಳು ಬಳಕೆ ಮಾಡುವ 300 ಯೂನಿಟ್ ಗಳಿಗೆ ಆಗುವ ವೆಚ್ಚವನ್ನು ತಾನೇ ಕೊಡುತ್ತದೆಯೇ? ಮೋದಿ ಮತ್ತು ಬಿಜೆಪಿಯವರ ಪ್ರಚಾರ ವೈಖರಿಯನ್ನು ನೋಡಿ, ಮೋದಿ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ನಮ್ಮ ಮನೆಗೂ 300 ಯೂನಿಟ್ ವಿದ್ಯುತ್ ಉಚಿತ ಸಿಗುತ್ತದೆ ಎಂದು ನಂಬಿರುವವರೂ ಇದ್ದಾರೆ. ವಿರೋಧ ಪಕ್ಷಗಳ ಆಡಳಿತ ಇರುವ ದೆಹಲಿ, ಪಂಜಾಬ್, ಕರ್ನಾಟಕ, ತೆಲಂಗಾಣ ರಾಜ್ಯಗಳಲ್ಲಿ ನಿರ್ಧಿಷ್ಟ ಪ್ರಮಾಣದ ಗೃಹಬಳಕೆಯ ವಿದ್ಯುತ್ ಅನ್ನು ಉಚಿತವಾಗಿ ಕೊಡುತ್ತಿರುವುದು ಬಿಜೆಪಿಗೆ ಸಂಕಟ ತಂದಿದೆ. ಇದಕ್ಕೆ ಪ್ರತಿಯಾಗಿ, ತಮ್ಮ ನೇತೃತ್ವದ ಕೇಂದ್ರ ಸರ್ಕಾರವೂ 300 ಯೂನಿಟ್ ಉಚಿತ ವಿದ್ಯುತ್ ಕೊಡುವುದಾಗಿಯೂ, ಈ ಬಾರಿಯೂ ನಮಗೆ ಮತ ನೀಡಿ ಗೆಲ್ಲಿಸಬೇಕೆಂದೂ ಬಿಜೆಪಿಯವರು ಹೇಳಿಕೊಳ್ಳತೊಡಗಿದ್ದಾರೆ.

ಉಚಿತ ವಿದ್ಯುತ್ ಅಲ್ಲ: ಸೋಲಾರ್ ಅಳವಡಿಕೆಗೆ ಸಬ್ಸಿಡಿ ಮಾತ್ರ

ಈ ಯೋಜನೆಯ ಹೆಸರು ‘ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲೀ’. ಎಂದರೆ, ‘ಸೂರ್ಯನ ಮನೆ ಉಚಿತ ವಿದ್ಯುತ್’. ಸೂರ್ಯನ ಮನೆಗೆ ಸೂರ್ಯನೇ ಉಚಿತವಾಗಿ ವಿದ್ಯುತ್ ಕೊಡುತ್ತಾನೆ. ಅಥವಾ ಸೂರ್ಯನ ಕಿರಣದಿಂದ ನಾವೇ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಬೇಕು. ಇದಕ್ಕೆ ನಮ್ಮ ಮನೆಯ ಮೇಲೆ ಸೌರಫಲಕ (ಸೋಲಾರ್ ಸಿಸ್ಟಮ್) ಅಳವಡಿಸಿಕೊಳ್ಳಬೇಕು. ಇದಕ್ಕೆ ನಾವು ಒಂದೆರೆಡು ಲಕ್ಷ ರೂಪಾಯಿ ಬಂಡವಾಳ ಹೂಡಿಕೆ ಮಾಡಬೇಕು.

ಸೋಲಾರ್ ಸಿಸ್ಟಮ್ ಗೆ ಬಂಡವಾಳ ಹಾಕುವವರು ನಾವು (ಒಂದೆರಡು ಲಕ್ಷ ರೂಪಾಯಿ ಬಂಡವಾಳ ಹಾಕುವ ಸಾಮರ್ಥ್ಯ ಇರುವವರು ಮಾತ್ರ), ಮನೆ ಚಾವಣಿ ನಮ್ಮದು, (ಸ್ವಂತ ಮನೆ ಇರಬೇಕು, ಸೋಲಾರ್ ಅಳವಡಿಸಲು ಅನುಕೂಲಕರವಾದ ಮತ್ತು ಸಾಕಷ್ಟು ಸ್ಥಳಾವಕಾಶ ಇರುವ ಮೇಲ್ಚಾವಣಿ ಹೊಂದಿರಬೇಕು, ಸೂರ್ಯನ ಬೆಳಕು ಮನೆಯ ಛಾವಣಿ ಮೇಲೆ ಬೀಳುವಂತಿರಬೇಕು), ಸೂರ್ಯ ಮತ್ತು ಸೂರ್ಯನ ಕಿರಣಗಳು ಸಕಲ ಜೀವರಾಶಿಗಳಿಗೂ ಸೇರಿದ್ದು, ಇಷ್ಟೆಲ್ಲಾ ಆದ ನಂತರ ಅದರಿಂದ

ಪುಟ 14 ಕ್ಕೆ



ಕರ್ನಾಟಕದಲ್ಲಿದೆ ಸೌರ ವ್ಯವಸ್ಥೆಗಳನ್ನು ಅಳವಡಿಸಲು ಸಬ್ಸಿಡಿ

ಭಾರತದಲ್ಲಿ ಸೌರ ವಿದ್ಯುತ್ ಉತ್ಪಾಧನಾ ಘಟಕಗಳ ಸ್ಥಾಪನೆಗೆ ಮತ್ತು ಮನೆಗಳ ಮೇಲ್ಚಾವಣಿಯಲ್ಲಿ ಸೌರ ಫಲಕಗಳ ಅಳವಡಿಕೆಗಳಿಗೆ ಸರ್ಕಾರಗಳು ಹಲವು ವರ್ಷಗಳಿಂದ ಧನಸಹಾಯ ಮಾಡುತ್ತಾ ಬಂದಿವೆ. ನಮ್ಮ ಕರ್ನಾಟಕ ರಾಜ್ಯವನ್ನೇ ತೆಗೆದುಕೊಂಡರೆ, ಕರ್ನಾಟಕವು 2011 ರಲ್ಲಿ ಮೀಸಲಾದ ಸೌರ ನೀತಿಯನ್ನು ಘೋಷಿಸಿದ ಮೊದಲ ರಾಜ್ಯವಾಗಿದೆ. ಅಂದಿನಿಂದ, ಈ ಉದ್ಯಮದಲ್ಲಿ ವೇಗವಾಗಿ ಬದಲಾಗುತ್ತಿರುವ ಪರಿಸರಕ್ಕೆ ಅನುಗುಣವಾಗಿ ರಾಜ್ಯವು ತನ್ನ ಎಲ್ಲಾ ನೀತಿಗಳನ್ನು ನಿಯಮಿತವಾಗಿ ನವೀಕರಿಸುತ್ತಿದೆ.

ಕರ್ನಾಟಕವು 2011 ರಲ್ಲಿ ಮೀಸಲಾದ ಸೌರ ನೀತಿಯನ್ನು ಘೋಷಿಸಿದ ಮೊದಲ ರಾಜ್ಯವಾಗಿದೆ. ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ (MNRE) ಪ್ರಕಟಿಸಿದ ರಾಜ್ಯ ಮೇಲ್ಛಾವಣಿಯ ಸೌರ ಆಕರ್ಷಣೆ ಸೂಚ್ಯಂಕದ ಪ್ರಕಾರ, ಕರ್ನಾಟಕ ಸೌರ ವಿದ್ಯುತ್ ಸ್ಥಾವರವು ಮೇಲ್ಛಾವಣಿಯ ಸೌರ ಯೋಜನೆಗಳನ್ನು ಸ್ಥಾಪಿಸುವಲ್ಲಿ ಅತ್ಯಂತ ಆಕರ್ಷಕ ರಾಜ್ಯವಾಗಿ ಇತರ ರಾಜ್ಯಗಳನ್ನು ಹಿಂದಿಕ್ಕಿದೆ. ರಾಜ್ಯ ಸರ್ಕಾರವು ಎಲ್ಲಾ ಮಾರುಕಟ್ಟೆ ಕ್ಷೇತ್ರಗಳ ಗ್ರಾಹಕರು ತಮ್ಮ ಛಾವಣಿಯ ಮೇಲೆ ಸ್ವತಂತ್ರವಾಗಿ ಸೌರಶಕ್ತಿಯನ್ನು ಉತ್ಪಾದಿಸಲು ಅನುವು ಮಾಡಿಕೊಡುವ ಅನುಕೂಲಕರ ಕಾನೂನುಗಳನ್ನು ಜಾರಿಗೆ ತಂದಿದೆ.

MNRE ಮಾರ್ಚ್ 2019 ರಲ್ಲಿ ‘ಸೌರ ಗೃಹ ಯೋಜನೆ’ಯನ್ನು ಘೋಷಿಸಿತು ಮತ್ತು ನೋಡಲ್ ಏಜೆನ್ಸಿಗಳಾಗಿ ಕಾರ್ಯನಿರ್ವಹಿಸಲು ಎಸ್ಕಾಮ್ ಗಳಿಗೆ ಜವಾಬ್ದಾರಿಯನ್ನು ವಹಿಸಿದೆ. MNRE ಮಾರ್ಗಸೂಚಿಗಳ ಪ್ರಕಾರ, ಗ್ರಾಹಕರಿಗೆ 3 kWh ವರೆಗೆ ಶೇ. 40 ಸಬ್ಸಿಡಿ ಮತ್ತು 3 kWh ಗಿಂತ ಹೆಚ್ಚಿನ ಅನುಸ್ಥಾಪನೆಗೆ ಶೇ. 20 ಸಬ್ಸಿಡಿ ನೀಡಲಾಗುತ್ತಿತ್ತು. ಸೌರ ಮೇಲ್ಛಾವಣಿ ಸಬ್ಸಿಡಿ ಯೋಜನೆಯಡಿ ವಸತಿ ಮತ್ತು ವಾಣಿಜ್ಯ ಆಸ್ತಿ ಮಾಲೀಕರು ತಮ್ಮ ಮೇಲ್ಛಾವಣಿಯ ಮೇಲೆ ಸೌರ ಫಲಕಗಳನ್ನು ಹಾಕಲು ಹಣಕಾಸಿನ ಪ್ರೋತ್ಸಾಹವನ್ನು ಪಡೆಯಬಹುದು. ಕರ್ನಾಟಕದಲ್ಲಿ ಸೋಲಾರ್ ಸಬ್ಸಿಡಿ ವಸತಿ ಗೃಹಗಳು, ಸರ್ಕಾರಿ ಕಟ್ಟಡಗಳು, ಶಾಲೆಗಳು, ಕಾಲೇಜುಗಳು ಇತ್ಯಾದಿಗಳಿಗೆ ಲಭ್ಯವಿದೆ.

10 ನವೆಂಬರ್ 2022ರ ಒಂದು ವರದಿಯಂತೆ, ಬೆಸ್ಕಾಂನ ಅಂದಾಜಿನ ಪ್ರಕಾರ, 2014 ರಿಂದ 2022ರ ವರೆಗೆ ಬೆಂಗಳೂರು ನಗರದ ಗ್ರಾಹಕರು ಸರ್ಕಾರದಿಂದ ಸಬ್ಸಿಡಿ ಪಡೆಯದೆಯೂ 175.259 MW ನಷ್ಟು ಸೋಲಾರ್ ಮೇಲ್ಛಾವಣಿಗಳನ್ನು ಸ್ಥಾಪಿಸಿದ್ದಾರೆ. ಇದಲ್ಲದೆ ಬೆಸ್ಕಾಂ ಇನ್ನೂ 4 ಮೆಗಾವ್ಯಾಟ್ ನಷ್ಟು ಸೋಲಾರ್ ಮೇಲ್ಛಾವಣಿಗಳನ್ನು ಸ್ಥಾಪಿಸುವಲ್ಲಿ ಆ ಅವಧಿಯಲ್ಲಿ ಯಶಸ್ವಿಯಾಗಿದೆ.

ಡೆಕ್ಕನ್ ಹೆರಾಲ್ಡ್ 08 ಜನವರಿ 2024ರ ವರದಿಯ ಪ್ರಕಾರ, (ಕೇಂದ್ರ ಸರ್ಕಾರ ‘ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲೀ’ ಯೋಜನೆ ಘೋಷಣೆಗೂ ಮುಂಚಿನ ವರದಿ) ಸುಮಾರು 200 ಯುನಿಟ್‌ಗಳ ಉತ್ಪಾದನೆಗೆ ಸೌರ ಮೇಲ್ಛಾವಣಿ ಅಳವಡಿಕೆಯು ರೂ. 3 ಲಕ್ಷ ವೆಚ್ಚವಾಗಬಹುದು. ಕರ್ನಾಟಕ ಸರ್ಕಾರವು ಸೌರ ಮೇಲ್ಛಾವಣಿ ಅಳವಡಿಕೆಗಳಿಗೆ ಸಬ್ಸಿಡಿಗಳನ್ನು ಕೊಡುತ್ತಿದೆ. 3 kWh ಸಾಮರ್ಥ್ಯದವರೆಗಿನ ಮೇಲ್ಛಾವಣಿಯ ಸೌರ ವ್ಯವಸ್ಥೆಗಳನ್ನು ಅಳವಡಿಸಲು ಕರ್ನಾಟಕವು ಶೇ. 50ರಷ್ಟು ಅಥವಾ ರೂ. 50,000 ವರೆಗೆ ಸಬ್ಸಿಡಿಯನ್ನು ನೀಡುತ್ತದೆ.

ಸೋಲಾರ್ ವಾಟರ್ ಹೀಟರ್ ಸಬ್ಸಿಡಿ

ಕರ್ನಾಟಕ ರಾಜ್ಯದ ಶುದ್ಧ ಇಂಧನ ಯೋಜನೆಯು, ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಸೋಲಾರ್ ವಾಟರ್ ಹೀಟಿಂಗ್ ಸಿಸ್ಟಮ್‌ಗಳನ್ನು ಉತ್ತೇಜಿಸಲು, ರಾಜ್ಯ ಸರ್ಕಾರವು ಹಲವು ವರ್ಷಗಳಿಂದ ಸಬ್ಸಿಡಿಗಳನ್ನು ನೀಡುತ್ತಾ ಬಂದಿದೆ. ಸೋಲಾರ್ ವಾಟರ್ ಹೀಟಿಂಗ್ ಸಿಸ್ಟಮ್‌ಗಳನ್ನು ಅಳವಡಿಸಲು 100 ಎಲ್‌ಪಿಡಿಗೆ ರೂ. 5000 ಸಹಾಯಧನ ಕೊಡುತ್ತಿದೆ. ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರು ಈ ಸಬ್ಸಿಡಿಯನ್ನು ಪಡೆಯಬಹುದು.

ತಮಿಳುನಾಡು ಇಂಡಿಯಾ ಕೂಟದ ದಕ್ಷಿಣದ ಭದ್ರಕೋಟೆಯಾಗಿ ಉಳಿಯುವುದೆ?

ಇಂಡಿಯಾ ಕೂಟವು ತನ್ನ ಒಗ್ಗಟ್ಟು, 2019 ರ ಚುನಾವಣೆಗಳಲ್ಲಿ ಸಾಬೀತಾಗಿರುವ ಸಂಖ್ಯಾಶಕ್ತಿ ಮತ್ತು ಮೂರು ವರ್ಷದ ಡಿಎಂಕೆ ಸರಕಾರದ ಕಲ್ಯಾಣ ಯೋಜನೆಗಳಂತಹ ಹಲವಾರು ಅಂಶಗಳಿಂದಾಗಿ ಮೊದಲ ಸ್ಥಾನದಲ್ಲಿದೆ ಎಂಬುದರ ಬಗ್ಗೆ ಸಂಶಯವಿಲ್ಲ. ಇಂಡಿಯಾ ಕೂಟದ ವಿರುದ್ಧ ಮತಗಳು–ಎ.ಐ.ಎ.ಡಿ.ಎಂ.ಕೆ, ಬಿಜೆಪಿ ರಂಗಗಳಲ್ಲದೆ ಎನ್.ಟಿ.ಕೆ–ಹೀಗೆ ಮೂರಾಬಟ್ಟೆಯಾಗಿ ವಿಭಜಿತವಾಗುತ್ತವೆ. ಎಐಎಡಿಎಂಕೆ ಸಾಮಾನ್ಯವಾಗಿ ಅಲ್ಪಸಂಖ್ಯಾತರ ನಡುವೆ ಉತ್ತಮ ಬೆಂಬಲ ಹೊಂದಿದ್ದರೂ, ಈ ಬಾರಿಯ ಪರಿಸ್ಥಿತಿಯಿಂದಾಗಿ ಅಲ್ಪಸಂಖ್ಯಾತರ ಮತಗಳು ಇಂಡಿಯಾ ಕೂಟದ ಪರವಾಗಿ ಕ್ರೋಢೀಕೃತವಾಗುವ ಸಾಧ್ಯತೆ ಹೆಚ್ಚು. ಹಾಗಾಗಿ ಇಂಡಿಯಾ ಕೂಟ ಬಹುಪಾಲು ಸೀಟುಗಳನ್ನು ಗೆಲ್ಲುವುದು ಖಚಿತ. 2019ರ ಸಾಧನೆ ರಿಪೀಟ್ ಆದರೂ, ಅಥವಾ ಸೆಂಟ್ ಪರ್ಸೆಂಟ್ ಹೊಡೆದರೂ ಆಶ್ಚರ್ಯ ಪಡಬೇಕಾಗಿಲ್ಲ.

ವಸಂತರಾಜ ಎನ್.ಕೆ.

ತಮಿಳುನಾಡಿನಲ್ಲಿ 18 ನೇ ಲೋಕಸಭಾ ಚುನಾವಣೆಯ ಮತದಾನ ಮುಗಿದಿದೆ. ಏಪ್ರಿಲ್ 19ರಂದು ನಡೆದ ಮೊದಲ ಹಂತದಲ್ಲಿ 21 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ 102 ಸ್ಥಾನಗಳಿಗೆ ಚುನಾವಣೆ ನಡೆದಿದೆಯಾದರೂ, ಒಂದೇ ದಿನ ಮತದಾನ ನಡೆದ ಏಕಮಾತ್ರ ರಾಜ್ಯ ತಮಿಳುನಾಡು. ಈ ರಾಜ್ಯದ ಎಲ್ಲಾ 39 ಕ್ಷೇತ್ರಗಳಲ್ಲಿ ಮತದಾನ ನಡೆದಿದೆ. ತಮಿಳುನಾಡು ಚುನಾವಣೆಯಲ್ಲಿ ಡಿಎಂಕೆ (ಇಂಡಿಯಾ ಮೈತ್ರಿಕೂಟ), ಎಐಎಡಿಎಂಕೆ (ಮಿನಿ ಮೈತ್ರಿಕೂಟ) ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ನಡುವೆ ತೀವ್ರ ಹಣಾಹಣಿ ನಡೆಯುತ್ತಿದೆ. ನಾಮ್ ತಮಿಳಾರ್ ಕಚ್ಚಿ ಏಕಾಂಗಿ ಸ್ಪರ್ಧೆಯಲ್ಲಿದೆ. ಬಿಜೆಪಿ ಉನ್ನತ ನಾಯಕರು ಹಿಂದೆಂದೂ ಕಾಣದ ರೀತಿಯಲ್ಲಿ ತಮಿಳುನಾಡಿನತ್ತ ಗಮನ ಹರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಮತ್ತಿತರರು ಎನ್.ಡಿ.ಎ. ಅಭ್ಯರ್ಥಿಗಳ ಗೆಲುವಿಗಾಗಿ ಪ್ರಚಾರ ನಡೆಸಿದರು. ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರು ಭಾರತದ ಮೈತ್ರಿಯನ್ನು ಬಲಪಡಿಸಲು ಎರಡು ಬಾರಿ ಬಂದರು. ಡಿಎಂಕೆ ಮುಖ್ಯಮಂತ್ರಿ ಸ್ಟಾಲಿನ್, ಉದಯನಿಧಿ ಸ್ಟಾಲಿನ್, ಡಿಎಂಕೆ ಉಪ ಪ್ರಧಾನ ಕಾರ್ಯದರ್ಶಿ ಕನಿಮೊಳಿ ಪ್ರಚಾರ ನಡೆಸಿದರು.

ಸ್ಪರ್ಧೆ ದ್ವಿ–ಧ್ರುವೀಯವೇ, ಬಹು–ಧ್ರುವೀಯವೇ?

ಈ ಚುನಾವಣೆಯ ಹೊತ್ತಿಗೆ ರೂಪುಗೊಂಡ ಇಂಡಿಯಾ ಕೂಟದ ಮೂಲ ಮಾದರಿಯನ್ನು ತಮಿಳುನಾಡು 2019ರ ಲೋಕಸಭಾ ಚುನಾವಣೆಯಲ್ಲಿಯೇ ಸಫಲವಾಗಿ ರೂಪಿಸಿತ್ತು. ರಾಜ್ಯದಲ್ಲಿ 2014ರಲ್ಲಿ ರಚಿಸಲಾದ ಜಾತ್ಯತೀತ,ಪ್ರಗತಿಪರ ಕೂಟ (ಎಸ್.ಪಿ.ಎ.) ಎಂದು ಹೆಸರಿದ್ದ ಈ ಕೂಟ 2019ರ ಲೋಕಸಭಾ ಚುನಾವಣೆಯಲ್ಲಿ 39 ಸೀಟುಗಳಲ್ಲಿ 38 ಸೀಟುಗಳನ್ನು ಪಡೆಯುವುದರೊಂದಿಗೆ ಇಂದಿನ ಇಂಡಿಯಾ ಕೂಟಕ್ಕೆ ಮುನ್ನುಡಿ ಬರೆದಿತ್ತು. ಆ ನಂತರ ನಡೆದ 2021ರ ವಿಧಾನಸಭೆ ಚುನಾವಣೆಗಳಲ್ಲಿ ಈ ಕೂಟ ಮುಂದುವರೆದಿದ್ದು ಅದು 234ರಲ್ಲಿ 157 ಸೀಟು ಗೆದ್ದು ಭಾರಿ ಬಹುಮತ ಪಡೆಯುವ ಮೂಲಕ ಪ್ರಮುಖ ವಿರೋಧ ಪಕ್ಷ ಎಐಎಡಿಎಂಕೆ ನಾಯಕತ್ವದ ರಂಗವನ್ನು ಗುಡಿಸಿಹಾಕಿತ್ತು. ಅದೇ ಕೂಟ 2024ರ ಲೋಕಸಭಾ ಚುನಾವಣೆಯಲ್ಲೂ ಮುಂದುವರೆದಿದೆ. ಈ ಕೂಟದಲ್ಲಿ ಡಿಎಂಕೆ ಅಲ್ಲದೆ ಕಾಂಗ್ರೆಸ್, ಎಡ ಪಕ್ಷಗಳಾದ ಸಿಪಿಐ, ಸಿಪಿಐ(ಎಂ), ಮುಸ್ಲಿಂ ಲೀಗ್ ಮತ್ತು ವಿಸಿಕೆ, ಎಂಡಿಎಂಕೆ ಮತ್ತಿತರ ಸಣ್ಣ ಪಕ್ಷಗಳನ್ನು ಒಳಗೊಂಡಿದೆ. ಈ ಕೂಟ 2024ರ ಲೋಕಸಭಾ ಚುನಾವಣೆಯಲ್ಲೂ ಸೀಟು ಹೊಂದಾಣಿಕೆಯನ್ನು ಸಾಕಷ್ಟು ಸುಗಮವಾಗಿಯೇ ಮಾಡಿ 2019ರ ಫಲಿತಾಂಶವನ್ನು ರಿಪೀಟ್ ಮಾಡುವ ಹುಮ್ಮಸ್ಸಿನಲ್ಲಿದೆ.



ಕೂಟ#	ಗೆದ್ದ ಸೀಟುಗಳು			ಶೇಕಡಾ ಮತಗಳಿಕೆ		
	2014	2019	2021	2014	2019	2021
ಡಿಎಂಕೆ ಕೂಟ	00	39	157	27.18	53.15	37.70
ಎಐಎಡಿಎಂಕೆ ಕೂಟ	37	01	75	44.92	30.56	33.29
ಬಿಜೆಪಿ ಕೂಟ	02	–	–	18.80	–	–

ಕೂಟದ ಅಂಗಪಕ್ಷಗಳು ಪ್ರತಿ ಬಾರಿ ಬೇರೆಯಾಗಿದ್ದವು.

* 2019, 2021ರಲ್ಲಿ ಬಿಜೆಪಿ ಮತ್ತು ಎಐಎಡಿಎಂಕೆ ಎನ್.ಡಿ.ಎ. ಕೂಟದಲ್ಲಿದ್ದವು.

ಇಂಡಿಯಾ ಕೂಟದ ವಿರುದ್ಧ ಎಐಎಡಿಎಂಕೆ ನಾಯಕತ್ವದ ಕೂಟ ಮುಖ್ಯ ಪ್ರತಿಸ್ಪರ್ಧಿ. ಹಲವು ಸಣ್ಣ ಪಕ್ಷಗಳು ಡಿಎಂಕೆ ಮತ್ತು ಎಐಎಡಿಎಂಕೆ ನಾಯಕತ್ವದ ಕೂಟಗಳ ನಡುವೆ ಓಡಾಡಿದ್ದು ಇದೆ. ಡಿಎಂಕೆ ಮತ್ತು ಎಐಎಡಿಎಂಕೆ ಗಳೇ ಸ್ವತಃ ತಮ್ಮ ಕೂಟಗಳೊಂದಿಗೆ ಕೇಂದ್ರದಲ್ಲಿ ಕಾಂಗ್ರೆಸ್. ಜನತಾ ಮತ್ತು ಬಿಜೆಪಿ ಪಕ್ಷಗಳ ಕೂಟಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಭಾಗಿಯಾಗಿವೆ. ಎಐಎಡಿಎಂಕೆ ಬಿಜೆಪಿ ಜತೆ ಹಿಂದಿನಿಂದಲೂ ಪ್ರೇಮ–ಕಲಹ ಗಳ ಮಧ್ಯೆ ಓಲಾಡುತ್ತಿದ್ದ ಪಕ್ಷ. ಎಐಎಡಿಎಂಕೆ 1998ರಲ್ಲಿ ಬಿಜೆಪಿ ಜತೆ ಕೈಜೋಡಿಸಿ, 1999ರಲ್ಲೇ ಕೈಕೊಟ್ಟಿತ್ತು. 2004ರಲ್ಲಿ ಮತ್ತೆ ಕೈಜೋಡಿಸಿ, 2009ರಲ್ಲಿ ಮತ್ತೆ ಕೈಕೊಟ್ಟಿತ್ತು. 2014ರಲ್ಲಿ ಎನ್.ಡಿ.ಎ. ಸೇರದೆ ಸ್ವತಂತ್ರವಾಗಿ ಸ್ಪರ್ಧಿಸಿ 39ರಲ್ಲಿ 37 ಸೀಟುಗಳ ಭಾರೀ ಜಯ ಗಳಿಸಿತ್ತು. 2019ರಲ್ಲಿ ಮತ್ತೆ ಎನ್.ಡಿ.ಎ ಸೇರಿ, ಭಾರೀ ಪರಾಭವ ಕಂಡಿತ್ತು. ಈ ಚುನಾವಣೆಯಲ್ಲಿ ಎನ್.ಡಿ.ಎ ಯಲ್ಲಿ ಅದು ಮುಂದುವರೆಯಬೇಕೆಂದು ಬಿಜೆಪಿ ಬಯಸಿತ್ತು. ಜಯಲಲಿತ ನಿಧನದ ನಂತರ ಪಕ್ಷದಲ್ಲಿ 2–3 ಬಣಗಳ ಹೋರಾಟದಲ್ಲಿ ದುರ್ಬಲವಾಗಿತ್ತು. ಮುಖ್ಯ ಬಣ ಎನ್.ಡಿ.ಎ. ಯಲ್ಲಿ ಅದು ಮುಂದುವರೆಯುವುದನ್ನು ವಿರೋಧಿಸಿತ್ತು. ಬಿಜೆಪಿ ಸಹ ಎನ್.ಡಿ.ಎ. ದುರ್ಬಲವಾಗಿರುವ ಈ ಸಂದರ್ಭ ಬಳಸಿ ಬೆಳೆಯಬೇಕೆಂದು ಬಯಸಿ ಪ್ರತ್ಯೇಕ ಕೂಟ ರಚಿಸಿತು. ಈಗ ಎಐಎಡಿಎಂಕೆ ಕೂಟದಲ್ಲಿ ಡಿಎಂಡಿಕೆ, ಎಸ್.ಡಿ.ಪಿ.ಐ ಮತ್ತು ಎಐಎಂಐಎಂ ಮಾತ್ರ ಇವೆ.



ಬಿಜೆಪಿ ಮೂರನೇ ದ್ರಾವಿಡ–ವಿರೋಧಿ ರಂಗ ಕಟ್ಟಿದ್ದು ರಾಮದಾಸ್ ಅವರ ಪಿಎಂಕೆ, ತಮಿಳು ಮನಿಲಾ ಕಾಂಗ್ರೆಸ್, ಮಾಜಿ ಎಐಎಡಿಎಂಕೆ ನಾಯಕರಾದ ಟಿ.ಟಿ.ವಿ. ದಿನಕರನ್ ಅವರ ಎಎಂಎಂಕೆ, ಒ.ಪನ್ನೀರಸೆಲ್ವಂ ಮತ್ತು ಇತರ 4 ಸಣ್ಣ ಪಕ್ಷಗಳು ಅದರಲ್ಲಿ ಸೇರಿವೆ.

ಇಂಡಿಯಾ ಕೂಟ ಮುಂದಿದೆ

ಇಂಡಿಯಾ ಕೂಟವು ತನ್ನ ಒಗ್ಗಟ್ಟು, 2019 ಚುನಾವಣೆಗಳಲ್ಲಿ ಸಾಬೀತಾಗಿರುವ ಸಂಖ್ಯಾಶಕ್ತಿ ಮತ್ತು ಮೂರು ವರ್ಷದ ಡಿಎಂಕೆ ಸರಕಾರದ ಕಲ್ಯಾಣ ಯೋಜನೆಗಳಂತಹ ಹಲವಾರು ಅಂಶಗಳಿಂದಾಗಿ ಮೊದಲ ಸ್ಥಾನದಲ್ಲಿದೆ ಎಂಬುದರ ಬಗ್ಗೆ ಸಂಶಯವಿಲ್ಲ. ಮೊದ ಮೊದಲು ರಾಜ್ಯದಲ್ಲಿ ಎರಡು ದ್ರಾವಿಡ ಪಕ್ಷಗಳ ಕೂಟದ ನಡುವೆ ದ್ವಿ–ಧ್ರುವೀಯ ಸ್ಪರ್ಧೆ, ಬಿಜೆಪಿ ಸ್ಪರ್ಧೆಯಲ್ಲೇ ಇಲ್ಲ ಎಂದು ಬಿಂಬಿಸಲು ಯತ್ನಿಸಿದ ಡಿಎಂಕೆ ಬೇಗನೇ ತಂತ್ರ ಬದಲಿಸಿತು. ಇದು ರಾಷ್ಟ್ರೀಯ ಚುನಾವಣೆ, ಮೋದಿ 7 ಬಾರಿ ರಾಜ್ಯಕ್ಕೆ ಭೇಟಿ ನೀಡಿ ಡಿಎಂಕೆ ಯ ದುರಾಡಳಿತ ಮತ್ತು ಕರುಣಾನಿಧಿ 'ಪರಿವಾರವಾದ' ದ ಮೇಲೆ ಭಾರೀ ದಾಳಿ ನಡೆಸಿದಾಗ, ಮೋದಿ ಮತ್ತು ಅವರ ಬಿಜೆಪಿ ಸರಕಾರದ ವಿರುದ್ಧ ತೀವ್ರ ದಾಳಿಯನ್ನು ಆರಂಭಿಸಿತು. ಆ ಮೂಲಕ ಕೆಲವು ಪ್ರದೇಶಗಳಲ್ಲಿ ಮತ್ತು ಜನವಿಭಾಗಗಳಲ್ಲಿ ಮೂರು ವರ್ಷದ ಆಡಳಿತದ ನ್ಯೂನತೆಗಳ ವಿಷಯವನ್ನು ಮರೆಗೆ ಸರಿಸುವುದೂ ಸುಲಭವೆಂಬುದನ್ನೂ ಮನಗಂಡಿತು.

ರಾಜ್ಯಪಾಲರುಗಳ ದುರುಪಯೋಗ, ರಾಜ್ಯ ವಿಧಾನಸಭೆ ಮಂಜೂರು ಮಾಡಿದ ಕಾನೂನುಗಳನ್ನು ತಡೆ ಹಿಡಿಯುವುದು, ಒಕ್ಕೂಟವಾದದ ಮೇಲಿನ ದಾಳಿ, ರಾಜ್ಯಗಳಿಗೆ ಸಮಾನ ಹಣಕಾಸಿನ ಹಕ್ಕುಗಳ ನಿರಾಕರಣೆ, ನೆರೆ ಪರಿಹಾರ ಅನುದಾನ ನಿರಾಕರಣೆ, ಹಲವು ಸರಳ ವಿಷಯಗಳ ಕುರಿತು ಸುಪ್ರೀಂ ಕೋರ್ಟಿಗೆ ಹೋಗಬೇಕಾಗಿರುವ ಪರಿಸ್ಥಿತಿ, ಕಡ್ಡಾಯ ನೀಟ್ ಪರೀಕ್ಷೆ ರಿಯಾಯಿತಿಗೆ ನಿರಾಕರಣೆ, ಹಿಂದಿ ಹೇರಿಕೆ, ಮನುವಾದ, ಚುನಾವಣಾ ಬಾಂಡುಗಳ ಬ್ರಹ್ಮಾಂಡ ಭ್ರಷ್ಟಾಚಾರ, 10 ವರ್ಷಗಳ ಕೇಂದ್ರದ ದುರಾಡಳಿತ... ಹೀಗೆ ಮೋದಿ ಮತ್ತು ಬಿಜೆಪಿ ಕೇಂದ್ರ ಸರಕಾರದ ಮೇಲೆ ಬ್ರಹ್ಮಾಸ್ತ್ರಗಳ ಸುರಿಮಳೆ ಸುರಿಸಿದರು.

ದಿನಕ್ಕೆ ಸರಾಸರಿ ಎರಡು ಸಾರ್ವಜನಿಕ ಸಭೆಗಳನ್ನು ನಡೆಸಿದ ಮುಖ್ಯಮಂತ್ರಿ ಸ್ಟಾಲಿನ್, ಮೋದಿಯನ್ನು 'ತಮಿಳುನಾಡು–ವಿರೋಧಿ', ತಮಿಳು–ವಿರೋಧಿ, 'ದ್ರಾವಿಡ–ವಿರೋಧಿ', 'ಮನುವಾದಿ', ಚುನಾವಣಾ ಸೀಸನ್ ನಲ್ಲಿ ಬರುವ 'ವಲಸೆ ಹಕ್ಕಿ', ಭ್ರಷ್ಟಾಚಾರದ ವಿವಿಯ ಕುಲಪತಿ, ಬಾಂಡುಗಳ 'ವಸೂಲಿ ರಾಜ' ಎಂದೆಲ್ಲಾ ಟೀಕಿಸಿದರು. ಅಲ್ಲದೆ, ಎಐಎಡಿಎಂಕೆ ತನ್ನ ಮಾಜಿ ಮಿತ್ರ ಬಿಜೆಪಿಯೊಂದಿಗೆ 'ರಹಸ್ಯ ಸಂಬಂಧ'ದಲ್ಲಿದೆ ಎಂದೂ ದೂಷಿಸಿದರು.

ಇಂಡಿಯಾ ಕೂಟ ಸಾಮಾಜಿಕ ಮಾಧ್ಯಮಗಳಲ್ಲೂ ಪರಿಣಾಮಕಾರಿ ಪ್ರಚಾರ ನಡೆಸಿದೆ. ಕ್ಯೂಆರ್ ಕೋಡ್ ನೊಂದಿಗೆ ಜಿ

ಪುಟ 14 ಕ್ಕೆ


ನಾಲ್ಕು ಕ್ಷೇತ್ರಗಳಲ್ಲಿ ಎಡಪಕ್ಷಗಳ ಸ್ಪರ್ಧೆ

ಇಂಡಿಯಾ ಮೈತ್ರಿಕೂಟದ ಭಾಗವಾಗಿ ತಮಿಳುನಾಡಿನಲ್ಲಿ ಎಡಪಕ್ಷಗಳು ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿವೆ. ಮಧುರೈ ಮತ್ತು ದಿಂಡಿಗಲ್ನಲ್ಲಿ ಸಿಪಿಎಂ ಸ್ಪರ್ಧಿಸಿದ್ದರೆ, ನಾಗಪಟ್ಟಣಂ ಮತ್ತು ತಿರುಪುರದಲ್ಲಿ ಸಿಪಿಐ ಸ್ಪರ್ಧಿಸುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸಿಪಿಎಂ ಕೊಯಮತ್ತೂರು ಮತ್ತು ಮದುರೈ ಕ್ಷೇತ್ರಗಳಲ್ಲಿ ಹಾಗೂ ಸಿಪಿಐ ನಾಗಪಟ್ಟಣಂ ಮತ್ತು ತಿರುಪುರ್ ಕ್ಷೇತ್ರಗಳಲ್ಲಿ ಒಟ್ಟು ನಾಲ್ಕು ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದವು.

ಸಿಪಿಎಂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಸಿಪಿಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಮಧುರೈನಲ್ಲಿ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವಿಗಾಗಿ ಪ್ರಚಾರ ನಡೆಸಿದ್ದಾರೆ. ಮುಖ್ಯಮಂತ್ರಿ ಸ್ಟಾಲಿನ್ ಅವರು ರಾಜ್ಯಾದ್ಯಂತ ಬಿರುಸಿನ ಪ್ರವಾಸ ಮಾಡಿ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದರು. ದೇಶದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಮೋದಿ ಮತ್ತೆ ಅಧಿಕಾರಕ್ಕೆ ಬರದಂತೆ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸಿ ಜಾತ್ಯತೀತತೆಯನ್ನು ಕಾಪಾಡುವಂತೆ ಮತದಾರರಿಗೆ 'ಇಂಡಿಯಾ' ಕೂಟದ ಈ ಎಲ್ಲಾ ನಾಯಕರು ಕರೆ ನೀಡಿದರು.









ನ್ಯಾಯಾಂಗ ಎದೆಗಾರಿಕೆ ತೋರಿಸಲಿ

ಭೀಮಾ–ಕೋರೆಗಾಂವ್ ಪ್ರಕರಣದ ಆರೋಪಿಯಾಗಿ ಆರು ವರ್ಷಗಳ ಕಾಲ ಜೈಲು ವಾಸ ಅನುಭವಿಸಿದ ನಂತರ, ಪ್ರೊಫೆಸರ್ ಶೋಮಾ ಸೆನ್ ಅವರಿಗೆ ಸರ್ವೋಚ್ಚ ನ್ಯಾಯಾಲಯವು ಏಪ್ರಿಲ್ 5ರಂದು ಜಾಮೀನು ನೀಡಿದೆ. ಅವರ ಜಾಮೀನು ಅರ್ಜಿಯ ವಿಚಾರಣೆಯ ಸಮಯದಲ್ಲಿ "ಜಾಮೀನು, ಆರೋಪಿಯ ಹಕ್ಕು ಅಲ್ಲ" ಎಂಬ ಪ್ರಸಕ್ತ ಸರಕಾರದ ವಿಕೃತ ನ್ಯಾಯಶಾಸ್ತ್ರವನ್ನು ಅದು ಭಾರತ ಸಂವಿಧಾನದ ಕಲಮು 21ರ ಉಲ್ಲಂಘನೆ ಎಂದು ತಿರಸ್ಕರಿಸಿತು. ಇದು ಒಳ್ಳೆಯ ಸುದ್ದಿಯೇ. ಆದರೂ ಇದು ಮೂಲಭೂತ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ: ಅದರಲ್ಲಿ ಮೊದಲನೆಯದು, ನಿರಾಧಾರವಾಗಿ ಮತ್ತು ವಿಚಾರಣೆ ಇಲ್ಲದೆ ಅವರನ್ನು ದೀರ್ಘಾವಧಿಯ ಜೈಲು ವಾಸದ ಶಿಕ್ಷೆಗೆ ಒಳಪಡಿಸಿದ್ದಕ್ಕಾಗಿ ಸರ್ಕಾರವನ್ನು ಯಾವುದಾದರೂ ಒಂದು ರೀತಿಯ ಶಿಕ್ಷೆಗೆ ಒಳಪಡಿಸಬೇಕಲ್ಲವೇ?
ಹಿಟ್ಲರನ ಆಳ್ವಿಕೆಯ ಆರಂಭದ ದಿನಗಳಲ್ಲಿ ತನ್ನ ಸಾಂವಿಧಾನಿಕ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಜರ್ಮನಿಯ ನ್ಯಾಯಾಂಗವು ತೋರಿದ ಎದೆಗಾರಿಕೆಯನ್ನು ಭಾರತದ ನ್ಯಾಯಾಂಗವೂ ತೋರಬೇಕೆಂಬುದು ಜನತೆಯ ಬಯಕೆ.

ಪ್ರೊ.ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**

ಜರ್ಮನಿಯನ್ನು ಒಂದು ಉದಾರವಾದಿ ಪ್ರಜಾಪ್ರಭುತ್ವದಿಂದ ಒಂದು ಫ್ಯಾಸಿಸ್ಟ್ ಸರ್ವಾಧಿಕಾರಿ ಪ್ರಭುತ್ವವಾಗಿ ಪರಿವರ್ತಿಸುವಲ್ಲಿ 1933ರಲ್ಲಿ ರೈಖ್‌ಸ್ಟಾಗ್ (ಜರ್ಮನಿಯ ಸಂಸತ್ತಿ)ಗೆ ಬೆಂಕಿ ಹಚ್ಚಿದ ಘಟನೆಯು ನಿರ್ಣಾಯಕವಾಗಿತ್ತು. ಸ್ವತಃ ನಾಜಿಗಳೇ ಬೆಂಕಿ ಹಚ್ಚಿದ್ದರೆಂದು ಶಂಕಿಸಲಾದ ಈ ಘಟನೆಗೆ ಕಮ್ಯುನಿಸ್ಟರನ್ನು ತಪ್ಪಾಗಿ ದೂಷಿಸಲಾಯಿತು ಮತ್ತು ಈ ನೆಪದಲ್ಲಿ ಅವರ ಮೇಲೆ ಒಂದು ಭಯಂಕರ ಹಿಂಸಾತ್ಮಕ ದಾಳಿಯನ್ನು ಹರಿಯ ಬಿಡಲಾಯಿತು. ಜರ್ಮನ್ ಸಂಸತ್ತಿನ 81 ಕಮ್ಯುನಿಸ್ಟ್ ಸಂಸದರಲ್ಲಿ ಅನೇಕರನ್ನು ಬಂಧಿಸಲಾಯಿತು. ಅದುವರೆಗೆ ಸಂಸತ್ತಿನಲ್ಲಿ ಬಹುಮತ ಹೊಂದದ ನಾಜಿಗಳು ಕಮ್ಯುನಿಸ್ಟ್ ಸಂಸದರ ಅನುಪಸ್ಥಿತಿಯಲ್ಲಿ ಪಡೆದ ಬಹುಮತದ ಮೂಲಕ ಎಲ್ಲ ಅಧಿಕಾರವನ್ನೂ ದುರ್ಬಳಕೆ ಮಾಡಿಕೊಂಡು ಜರ್ಮನಿಯನ್ನು ಒಂದು ಫ್ಯಾಸಿಸ್ಟ್ ಪ್ರಭುತ್ವವಾಗಿ ಪರಿವರ್ತಿಸಿದರು. ಸಂಸತ್ತಿಗೆ ಬೆಂಕಿ ಹಚ್ಚಿದ ಆಪಾದನೆ ಮತ್ತು ವಿಚಾರಣೆಗೆ ಒಳಗಾದ ಕಮ್ಯುನಿಸ್ಟರಲ್ಲಿ ಆ ಸಮಯದಲ್ಲಿ ಅಕಸ್ಮಾತಾಗಿ ಜರ್ಮನಿಯಲ್ಲಿದ್ದ ಬಲ್ಗೇರಿಯನ್ ಕ್ರಾಂತಿಕಾರಿ ಜಾರ್ಜಿ ದಿಮಿತ್ರೋವ್ ಒಬ್ಬರು.

ವಿಚಾರಣೆಯ ಸಮಯದಲ್ಲಿ, ತಮ್ಮ ಪ್ರತಿವಾದವನ್ನು ಸ್ವತಃ ತಾವೇ ಮಂಡಿಸಿದ ದಿಮಿತ್ರೋವ್, ಪ್ರಾಸಿಕ್ಯೂಶನ್ ಪರವಾಗಿ ಸಾಕ್ಷಿ ಹೇಳಲು ಬಂದಿದ್ದ ವಿಮಾನ ಯಾನ ಮಂತ್ರಿ ಮತ್ತು ಹಿಟ್ಲರನ ಬಲಗೈ ಬಂಟನಾಗಿದ್ದ ಹರ್ಮನ್ ಗೋರಿಂಗ್‌ನನ್ನು ಪಾಟಿ ಸವಾಲು ಮಾಡುವ ತಮ್ಮ ಹಕ್ಕಿಗಾಗಿ ಪಟ್ಟುಹಿಡಿದರು. ಹಿಟ್ಲರ್ ಆಡಳಿತದಿಂದ ನೇಮಿಸಲ್ಪಟ್ಟಿದ್ದರೂ ಸಹ, ಆ ನ್ಯಾಯಾಧೀಶರು, ಡಿಮಿತ್ರೋವ್ ಅವರ ಪಾಟಿ ಸವಾಲಿನ ಹಕ್ಕನ್ನು ಮಾನ್ಯ ಮಾಡಿದರು. ದಿಮಿತ್ರೋವ್ ಮತ್ತು ಗೋರಿಂಗ್ ನಡುವೆ ನ್ಯಾಯಾಲಯದಲ್ಲಿ ನಡೆದ ಮುಖಾಮುಖಿ, ವಿಶೇಷವಾಗಿ, ಗೋರಿಂಗ್‌ನ ಉಗ್ರ ಮತ್ತು ಬೆದರಿಕೆಯ ಹೇಳಿಕೆಗಳನ್ನು ಶಾಂತವಾಗಿ ದಿಮಿತ್ರೋವ್ ಎದುರಿಸಿದ ರೀತಿ ಮತ್ತು ಬೆಂಕಿ ಹಚ್ಚಿದ ಆರೋಪದಿಂದ ನಾಜಿ ನ್ಯಾಯಾಲಯದಿಂದ ದಿಮಿತ್ರೋವ್ ಅವರು ಹೊಂದಿದ ಖುಲಾಸೆಯು ಒಂದು ದಂತಕಥೆಯಾಗಿದೆ. ನಂತರದಲ್ಲಿ, ದಿಮಿತ್ರೋವ್ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನ ಅಧ್ಯಕ್ಷರಾದರು ಮತ್ತು 1935ರಲ್ಲಿ ಅದರ ಏಳನೇ ಮಹಾಧಿವೇಶನದಲ್ಲಿ, ಫ್ಯಾಸಿಸಂ ವಿರುದ್ಧ ಹೋರಾಡಲು ಅನುಸರಿಸಬೇಕಾದ ಸಂಯುಕ್ತ ರಂಗದ ಕಾರ್ಯತಂತ್ರವನ್ನು ರೂಪಿಸಿದರು.

ಭೀಮಾ–ಕೋರೆಗಾಂವ್ ಪ್ರಕರಣದ ಆರೋಪಿಯಾಗಿ ಆರು ವರ್ಷಗಳ ಕಾಲ ಜೈಲು ವಾಸ ಅನುಭವಿಸಿದ ನಂತರ, ಪ್ರೊಫೆಸರ್ ಶೋಮಾ ಸೆನ್ ಅವರಿಗೆ ನ್ಯಾಯಾಲಯವು ಏಪ್ರಿಲ್ 5ರಂದು ಜಾಮೀನು ನೀಡಿದೆ. ಅವರಿಗೆ ಜಾಮೀನು ನೀಡುವಾಗ, ಆಕೆ ಯಾವುದೇ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಬಂಧ ಹೊಂದಿದ್ದಾರೆ ಅಥವಾ ಯಾವುದೇ ಭಯೋತ್ಪಾದನಾ ಕೃತ್ಯಗಳೊಂದಿಗೆ ಸಂಬಂಧ ಹೊಂದಿದ್ದಾರೆ ಎಂಬುದನ್ನು ಮೇಲ್ನೋಟಕ್ಕೆ ತೋರಿಸುವ (prima facie case) ಪ್ರಕರಣವೇನೂ ಅಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆದಾಗ್ಯೂ, ಶ್ರೀಮತಿ ಸೆನ್ ತನ್ನ ಜೀವನದ ಆರು ವರ್ಷಗಳನ್ನು ಜೈಲಿನಲ್ಲಿ ಕಳೆಯಬೇಕಾಯಿತು. ಇದು ಎರಡು ಮೂಲಭೂತ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ: ಮೊದಲನೆಯದು, ಸುಪ್ರೀಂ ಕೋರ್ಟ್‌ನ ಪ್ರಕಾರವೇ, ನಿರಾಧಾರವಾಗಿ ಮತ್ತು ವಿಚಾರಣೆ ಇಲ್ಲದೆ ಶ್ರೀಮತಿ ಶೋಮಾ ಸೆನ್ ಅವರನ್ನು ದೀರ್ಘಾವಧಿಯ ಜೈಲು



ವಾಸದ ಶಿಕ್ಷೆಗೆ ಒಳಪಡಿಸಿದ್ದಕ್ಕಾಗಿ ಸರ್ಕಾರವು ಹೊಣೆ ಹೊರಬೇಕಲ್ಲವೇ ಮತ್ತು ಸರ್ಕಾರವನ್ನು ಯಾವುದಾದರೂ ಒಂದು ರೀತಿಯ ಶಿಕ್ಷೆಗೆ ಒಳಪಡಿಸಬೇಕಲ್ಲವೇ? ಎರಡನೆಯದಾಗಿ, ಆಕೆಯ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ನ್ಯಾಯಾಲಯಗಳು ಸಂವಿಧಾನದ ಅಡಿಯಲ್ಲಿ ಕರ್ತವ್ಯ ಬದ್ಧರಾಗಿರುವಾಗ, ಈ ಆರು ವರ್ಷಗಳ ಕಾಲ ಶ್ರೀಮತಿ ಸೆನ್ ಜೈಲಿನಲ್ಲಿ ಕೊಳೆಯುತ್ತಿದ್ದಾಗ, ನಾನಾ ಹಂತದ ನ್ಯಾಯಾಲಯಗಳು ಏನು ಮಾಡುತ್ತಿದ್ದವು?

ಎನ್‌ಐಎಯ ವಿಕೃತ ನ್ಯಾಯಶಾಸ್ತ್ರ

ಈ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆಯು(ಎನ್‌ಐಎ) ಶ್ರೀಮತಿ ಸೆನ್ ಅವರ ಜಾಮೀನು ಅರ್ಜಿಯ ವಿಚಾರಣೆಯ ಸಮಯದಲ್ಲಿ "ಜಾಮೀನು, ಆರೋಪಿಯ ಹಕ್ಕು ಅಲ್ಲ" ಎಂಬ ನಿಲುವನ್ನು ತಳೆಯಿತು. ಫಿರ್ಯಾದಿಯು ಮುಂದಿಟ್ಟ ಈ ಅತಿರೇಕದ ವಾದವನ್ನು, ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ, ಭಾರತ ಸಂವಿಧಾನದ ಕಲಮು 21ರ ಉಲ್ಲಂಘನೆ ಎಂದು ತಿರಸ್ಕರಿಸಿತು. ಈ ಅತಿರೇಕದ ವಾದವನ್ನು ಮತ್ತು ಆಕೆಯ ವಿರುದ್ಧ ಯಾವುದೇ ಭಯೋತ್ಪಾದಕಕೃತ್ಯವಾಗಲಿ ಅಥವಾ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ ಬಗ್ಗೆಯಾಗಲಿ ಮೇಲ್ನೋಟಕ್ಕೇ ಯಾವುದೇ ಅಂಶ ಇಲ್ಲದಿದ್ದರೂ ಆಕೆಯನ್ನು ಬಂಧಿಸಿ ಆರು ವರ್ಷಗಳ ಕಾಲ ಜೈಲಿನಲ್ಲಿ ಇರಿಸಲಾಗಿತ್ತು ಎಂಬ ಅಂಶದೊಂದಿಗೆ ನೋಡಿದಾಗ, ಕೇಂದ್ರ ಸರ್ಕಾರವು ಒಂದು ಅಸಾಧಾರಣವಾದ ಪ್ರತಿಪಾದನೆಯನ್ನು ಮುಂದಿಡುತ್ತಿದೆ ಎಂಬುದು ನಮಗೆ ಕಂಡುಬರುತ್ತದೆ. ಈ ಅಸಾಧಾರಣ ಪ್ರತಿಪಾದನೆಯ ಪ್ರಕಾರ, ಎನ್‌ಐಎನಂತಹ ಏಜೆನ್ಸಿಗಳನ್ನು ನಿಯಂತ್ರಿಸುವ ಕೇಂದ್ರ ಸರ್ಕಾರವು ತನ್ನ ಇಚ್ಛೆಯ ಮೇರೆಗೆ ಯಾರನ್ನು ಬೇಕಾದರೂ ಬಂಧಿಸಬಹುದು ಮತ್ತು "ಜಾಮೀನು ಆರೋಪಿಯ ಹಕ್ಕು ಅಲ್ಲ" ಎಂಬ ನೆಲೆಯ ಮೇಲೆ ಒಬ್ಬ ಆರೋಪಿಯನ್ನು ಸರ್ಕಾರವು ಬಯಸಿದಷ್ಟು ಕಾಲವೂ ಜೈಲಿನಲ್ಲಿ ಇರಿಸಬಹುದು. ಈ ಪ್ರತಿಪಾದನೆಯು, ಅಪರಾಧಿ ಎಂದು ಸಾಬೀತಾಗುವ ವರೆಗೂ ಒಬ್ಬ ವ್ಯಕ್ತಿಯನ್ನು ನಿರಪರಾಧಿ ಎಂದು ಪರಿಗಣಿಸಬೇಕು ಎನ್ನುವ ನ್ಯಾಯಶಾಸ್ತ್ರದ ಸಹಜ ನೆಲೆಗಟ್ಟಿನ ನಿರಾಕರಣೆಯಾಗುತ್ತದೆ. ಮೋದಿ ಸರ್ಕಾರವು ಪ್ರಯೋಗಿಸುತ್ತಿರುವ ಈ ನ್ಯಾಯಶಾಸ್ತ್ರವು ಹೇಳುವುದೇನೆಂದರೆ, ಅಪರಾಧವನ್ನು ಸಾಬೀತು ಮಾಡುವಂಥಹ ಯಾವ ಸಾಕ್ಷ್ಯವೂ ಇಲ್ಲದೆ ಯಾರನ್ನಾದರೂ ಬಂಧಿಸಬಹುದು ಮತ್ತು ಎಷ್ಟು ಸಮಯದವರೆಗೂ ಜೈಲಿನಲ್ಲಿ ಇರಿಸಬಹುದು ಮತ್ತು ವಿಚಾರಣೆಯನ್ನೇ ನಡೆಸದೆಯೂ ಒಬ್ಬ ವ್ಯಕ್ತಿಯನ್ನು ಆತ ನಿರಪರಾಧಿ ಎಂದು ಸಾಬೀತಾಗುವ ವರೆಗೂ ಅಪರಾಧಿ ಎಂದು ಪರಿಗಣಿಸಬಹುದು ಎಂಬುದನ್ನು.

ಸುಪ್ರೀಂ ಕೋರ್ಟ್ ಪ್ರೊಫೆಸರ್ ಶೋಮಾ ಅವರಿಗೆ ಜಾಮೀನು ನೀಡಿದೆ ಎಂಬುದೇ ಒಂದು ಬಹಳ ಒಳ್ಳೆಯ ಸುದ್ದಿ ಮತ್ತು ಅದು ಸರ್ಕಾರ ಪ್ರತಿಪಾದಿಸಿದ ವಿಕೃತ ನ್ಯಾಯಶಾಸ್ತ್ರವನ್ನು ಒಪ್ಪಿಕೊಂಡಿಲ್ಲ ಎಂಬ ಕಾರಣದಿಂದಲೂ ಅದು ಬಹಳ ಒಳ್ಳೆಯ ಸುದ್ದಿಯೇ ಹೌದು. ಈ ವಿಕೃತ ನ್ಯಾಯಶಾಸ್ತ್ರದ ನಿರಾಕರಣೆಯನ್ನು ಎರಡು ಕಾರಣಗಳಿಂದಾಗಿ ಇನ್ನೂ ಅಂತಿಮವೆಂದು ಪರಿಗಣಿಸಲಾಗದು. ಮೊದಲನೆಯದು, ವ್ಯಕ್ತಿಯ ಹಕ್ಕುಗಳನ್ನು ಕಾರ್ಯಾಂಗವು ದಮನಿಸುತ್ತಿರುವುದರ ವಿರುದ್ಧವಾಗಿ ವ್ಯಕ್ತಿಯ ಹಕ್ಕುಗಳನ್ನು ರಕ್ಷಿಸುವ ಅಗತ್ಯದ ಬಗ್ಗೆ ಕೆಳ ಹಂತದ ನ್ಯಾಯಾಂಗವನ್ನು ಸಂವೇದಿಯಾಗಿಸುವ ಕಾರ್ಯವು ಇನ್ನೂ ನಡೆಯದಿರುವ ಸನ್ನಿವೇಶದಲ್ಲಿ ಈ ಆದೇಶವು ಸರ್ವೋಚ್ಚ ನ್ಯಾಯಾಲಯದಿಂದ ಬಂದಿದೆ. ಎರಡನೆಯದಾಗಿ, ಶೋಮಾ ಅವರ ಜಾಮೀನು ಅರ್ಜಿಗೆ ತನ್ನ ಆಕ್ಷೇಪಣೆಗಳನ್ನು ಸ್ವತಃ ಎನ್‌ಐಎ ಹಿಂತೆಗೆದುಕೊಂಡಿತು ಮತ್ತು ಇನ್ನು ಮುಂದೆ ಅವರನ್ನು ವಿಚಾರಣೆಗೆ ಒಳಪಡಿಸುವ ಅಗತ್ಯವಿಲ್ಲ ಎಂದು ಹೇಳಿತು. ಈ ವಾದವು ಎಷ್ಟು ಅಸಂವೇದನಾಶೀಲವಾಗಿತ್ತೊ ಅಷ್ಟೇ ಅಸಂಬದ್ಧವೂ ಆಗಿತ್ತು: ಆರು ವರ್ಷಗಳ ಅವಧಿಯಲ್ಲಿ ಎನ್‌ಐಎ ಅವರನ್ನು ವಿಚಾರಣೆಗೆ ಒಳಪಡಿಸಿತ್ತು ಎಂದಲ್ಲ ಅಥವಾ ವಿಚಾರಣೆಯನ್ನು ಪೂರ್ಣಗೊಳಿಸಲು ಶೋಮಾ ಅವರ ಜೀವನದ ಆರು ವರ್ಷಗಳು ಬೇಕಿದ್ದವು ಎಂದಲ್ಲ. ಜಾಮೀನಿಗೆ ಎನ್‌ಐಎ ಆಕ್ಷೇಪ ಎತ್ತದ ನಿಲುವಿನ ಹಿಂದಿರುವ ಪ್ರಮುಖ ಪರಿಗಣನೆ ಎಂದರೆ, ಎನ್‌ಐಎ ವಿರೋಧದ ಹೊರತಾಗಿಯೂ ಸುಪ್ರೀಂ ಕೋರ್ಟ್ ಆಕೆಗೆ ಒಂದು ವೇಳೆ ಜಾಮೀನು ನೀಡಿದರೆ, ಈ ನಿದರ್ಶನವನ್ನು ಇನ್ನು ಮುಂದೆ ಇದೇ ರೀತಿಯಲ್ಲಿ ಬಂಧನದಲ್ಲಿ ಇರಿಸಿರುವ ಇತರರು ತಮ್ಮ ಜಾಮೀನು ಅರ್ಜಿಗಳಲ್ಲಿ ಉಲ್ಲೇಖಿಸಬಹುದು ಎಂಬುದು. ಹಾಗಾಗಿ, ಕೊನೆಯ ಕ್ಷಣದಲ್ಲಿ ಆಕ್ಷೇಪಣೆಯನ್ನು ಎನ್‌ಐಎ ಹಿಂತೆಗೆದುಕೊಂಡ ಕ್ರಮವು, ಇದೇ ರೀತಿಯ ಪ್ರಕರಣಗಳಲ್ಲಿ ಇನ್ನು ಮುಂದೆ ಕೆಳ ಹಂತದ ನ್ಯಾಯಾಂಗವು, ಜಾಮೀನು ನೀಡಲು ಒಂದು ಆಧಾರವಾಗುತ್ತದೆಯೇ ಅಥವಾ ಪ್ರಸ್ತುತ ಸರ್ಕಾರವು ಪ್ರತಿಪಾದಿಸುತ್ತಿರುವ ವಿಕೃತ ನ್ಯಾಯಶಾಸ್ತ್ರದೊಂದಿಗೆ ಅದು ಸಾಗುತ್ತದೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಲಾಗದು.

ಪ್ರಬೀರ್ ಪುರ್ಕಾಯಸ್ಥ ಪ್ರಕರಣದಲ್ಲೂ..

ಇದೇ ವಿಕೃತ ನ್ಯಾಯಶಾಸ್ತ್ರವನ್ನು ಪ್ರಬೀರ್ ಪುರ್ಕಾಯಸ್ಥ ಪ್ರಕರಣದಲ್ಲೂ ಅನ್ವಯಿಸಲಾಗಿದೆ.

ಪುಟ 15 ಕ್ಕೆ

ತಮಿಳುನಾಡು ಇಂಡಿಯಾ ಕೂಟದ ದಕ್ಷಿಣದ ಭದ್ರಕೋಟೆಯಾಗಿ....... ಪುಟ 12 ರಿಂದ

(ಮೋದಿ) ಪೇ ಪೋಸ್ಟರ್ ಗಳನ್ನು ರಾಜ್ಯಾದ್ಯಂತ ಅಂಟಿಸಲಾಯಿತು. ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಮೋದಿ ಸರಕಾರದ ಭ್ರಷ್ಟಾಚಾರ ಬಯಲಿಗೆಳೆಯುವ, ವಿಡಿಯೊಗಳತ್ತ ಒಯ್ಯುತ್ತಿತ್ತು. 'ಮೋದಿ' ಗ್ಯಾರಂಟಿ'ಗಳನ್ನು ಲೇವಡಿ ಮಾಡುವ ವಿಡಿಯೊ, ರೀಲ್ಸ್ ಗಳನ್ನು ವೈರಲ್ ಮಾಡಲಾಗಿದೆ. ಬಿಜೆಪಿ ಸರ್ಕಾರವು ಎಐಐಎಂಎಸ್ ನಿರ್ಮಾಣ ಮಾಡದಿರುವ ವೀಡಿಯೊ ಜಾಹೀರಾತು 2021 ರಲ್ಲಿಯೇ ವೈರಲ್ ಆಗಿತ್ತು.

2019ನ್ನು ರಿಪೀಟ್ ಮಾಡಲು ಅಥವಾ ಪಾಂಡಿಚೇರಿ ಸೇರಿ, 40ರಲ್ಲಿ 40 ಸೀಟು ಗೆಲ್ಲಲು ಇಂಡಿಯಾ ಕೂಟ ಬಿರುಸಿನ ಪ್ರಚಾರ ನಡೆಸಿದೆ. ಇಂಡಿಯಾ ಕೂಟಕ್ಕೆ ಅದರ ಅಂಗ ಪಕ್ಷಗಳ ನೆಲೆಯ ವೈವಿಧ್ಯತೆಯಿಂದಾಗಿ ಹಲವು ಪ್ರಭಾವಿ ಸಮುದಾಯಗಳಲ್ಲದೆ, ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತರ ನಡುವೆ ಅಪಾರ ಬೆಂಬಲ, ನೆಲೆಯಿದೆ.

ವಿರೋಧ ಪಕ್ಷಗಳು ಮೂರಾಬಟ್ಟೆ

ಇದಕ್ಕೆ ವಿರುದ್ಧವಾಗಿ ಎಐಎಡಿಎಂಕೆ 'ಡಿಎಂಕೆಯ ದುರಾಡಳಿತದ' ಪ್ರಚಾರ ನಡೆಸಿತು. ಮೋದಿ ಮತ್ತು ಬಿಜೆಪಿಯ ವಿರುದ್ಧ ಮೊದ ಮೊದಲು ಟೀಕಿಸದೆ, ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಗಳೆಲ್ಲ ಡಿಎಂಕೆ ಸರಕಾರದ ವೈಫಲ್ಯವೆಂದು ಬಿಂಬಿಸಲು ಪ್ರಯತ್ನಿಸಿ, ಕೊನೆಯ ಸುತ್ತಿನಲ್ಲಿ ಬಿಜೆಪಿ/ಮೋದಿಯನ್ನು ಟೀಕಿಸಿತು. ಎಐಎಡಿಎಂಕೆ ಜಯಲಲಿತ ನಿಧನದ ನಂತರ ಬಣಗಳ ಜಗಳದಲ್ಲಿ ನಂತರದ ಒಡಕು, ಉಚ್ಚಾಟನೆಗಳಿಂದ ದುರ್ಬಲವಾಗಿದೆ. ಆದರೂ ಅದಕ್ಕೆ ಸಾಕಷ್ಟು ದೊಡ್ಡ ಜನಬೆಂಬಲದ ನೆಲೆಯಿದೆ. ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಹೆಚ್ಚಿನ ನೆಲೆ ಹೊಂದಿದ್ದು ಅದನ್ನು ಉಳಿಸಿಕೊಳ್ಳಲು, 2026ರ ವಿಧಾನ ಸಭೆಯಲ್ಲಿ ಪ್ರಧಾನ ಸ್ಪರ್ಧಿಯೆಂದು ತೋರಿಸಲು ಹೆಣಗುತ್ತಿದೆ.

ಕರುಣಾನಿಧಿ ಮತ್ತು ಜಯಲಲಿತ ನಿಧನದ ನಂತರ ಪ್ರಭಾವಿ ನಾಯಕರ ಅಭಾವದಿಂದಾಗಿ ಮತ್ತು ದೀರ್ಘಕಾಲದ ವೈಫಲ್ಯಗಳಿಂದ ದ್ರಾವಿಡ ರಾಜಕಾರಣದ ಅಂತ್ಯದ ಆರಂಭವಾಗಿದೆ. ಇದು ಬಿಜೆಪಿ ಸ್ವತಂತ್ರ ಅಸ್ತಿತ್ವ ಹೊಂದಲು ಸರಿಯಾದ ಸಮಯವೆಂದು ಭಾವಿಸಿ ಮೂರನೇ ರಂಗ ಕಟ್ಟಲು ಮುಂದಾಗಿದೆ. ಮೋದಿ ಹೆಸರಿನಲ್ಲಿ, ಹಿಂದೂ ಧರ್ಮ, ರಾಮನ ಹೆಸರಲ್ಲಿ ಮತ್ತು ಮೋದಿ ಸಾಧನೆಗಳ ಗ್ಯಾರಂಟಿಗಳ ಆಧಾರಿತವಾಗಿ, ದ್ರಾವಿಡ ರಾಜಕಾರಣದ ಪರಿವಾರವಾದ, ಭ್ರಷ್ಟಾಚಾರಗಳ ವಿರುದ್ಧ ಮತ್ತು ಇವಕ್ಕೆಲ್ಲ ಬಿಜೆಪಿಯೇ ಬದಲಿಯೆಂದು ಪ್ರಚಾರ ಮಾಡುತ್ತಿದೆ. ಇದಕ್ಕಾಗಿ ವನ್ನಿಯಾರ್, ದಿನಕರನ್-ಒಪಿಎಸ್ ಅವರ ಸಮುದಾಯಗಳು ಮತ್ತು ಇತರ ಹಲವು ಸಣ್ಣ ದಲಿತ ಜಾತಿಗಳ ನಡುವೆ ಸೋಶಿಯಲ್ ಇಂಜಿನೀಯರಿಂಗ್ ನಡೆಸಿದ್ದಾರೆ.

ಕನಿಷ್ಠ 3-4 ಸೀಟುಗಳನ್ನು ಗೆಲ್ಲುತ್ತೇವೆ ಎಂದು ಬಿಜೆಪಿಯೂ ಮತ್ತು ಅವರ ಬೆಂಬಲಿಗ ಮಾಧ್ಯಮಗಳೂ ಹೇಳುತ್ತಿವೆ. ಆದರೆ 2021 ರ ಅಸೆಂಬ್ಲಿ ಚುನಾವಣೆಯಲ್ಲಿ ಸುಮಾರು 7 ಪ್ರತಿಶತದಷ್ಟು ಮತ ಗಳಿಸಿದ್ದು, 10ಕ್ಕೂ ಹೆಚ್ಚು ಪ್ರತಿಶತ ಮತಗಳಿಕೆ ಮತ್ತು 10 ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿರುವುದನ್ನು ಬಿಜೆಪಿ ಕೂಟ ನಿಜವಾಗಿಯೂ ಗುರಿಯಿಟ್ಟುಕೊಂಡಿದೆ.

ಹೊಸ ಪಕ್ಷವಾದ ಎನ್.ಟಿ.ಕೆ. ಮುಖ್ಯಸ್ಥ ಎಸ್ ಸೀಮನ್ ಅವರು ತಮಿಳು ರಾಷ್ಟ್ರೀಯತೆಯ ಬಗ್ಗೆ ತಮ್ಮ ಜ್ವಲಂತ ಭಾಷಣಗಳೊಂದಿಗೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಯುವಜನರನ್ನು (ವಿಶೇಷವಾಗಿ ದಕ್ಷಿಣ ಭಾಗಗಳಲ್ಲಿ) ಸೆಳೆಯುತ್ತಿದ್ದಾರೆ ಎಂದು ಹೇಳಲಾಗಿದೆ. ಎನ್.ಟಿ.ಕೆ ಮತ್ತು ಬಿ.ಎಸ್.ಪಿ ಸಹ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತಿವೆ.

ಇಂಡಿಯಾ ಕೂಟದ ವಿರುದ್ಧ ಮತಗಳು ಹೀಗೆ ಮೂರಾಬಟ್ಟೆಯಾಗಿ ವಿಭಜಿತವಾಗುತ್ತವೆ. ಎಐಎಡಿಎಂಕೆ ಸಾಮಾನ್ಯವಾಗಿ ಅಲ್ಪಸಂಖ್ಯಾತರ ನಡುವೆ ಬೆಂಬಲ ಹೊಂದಿದ್ದರೂ, ಈ ಬಾರಿಯ ಪರಿಸ್ಥಿತಿಯಿಂದಾಗಿ ಅಲ್ಪಸಂಖ್ಯಾತರ ಮತಗಳು ಇಂಡಿಯಾ ಕೂಟದ ಪರವಾಗಿ ಕ್ರೋಢೀಕೃತವಾಗುವ ಸಾಧ್ಯತೆ ಹೆಚ್ಚು. ಹಾಗಾಗಿ ಇಂಡಿಯಾ ಕೂಟ ಬಹುಪಾಲು ಸೀಟುಗಳನ್ನು ಗೆಲ್ಲುವುದು ಖಚಿತ. 2019ರ ಸಾಧನೆ ರಿಪೀಟ್ ಆದರೂ, ಅಥವಾ ಸೆಂಟ್ ಪರ್ಸೆಂಟ್ ಹೊಡೆದರೂ ಆಶ್ಚರ್ಯ ಪಡಬೇಕಾಗಿಲ್ಲ.

ಹುಬ್ಬಳ್ಳಿಯಲ್ಲಿ ಯುವತಿ ಹತ್ಯೆ: ಕೊಲೆಗಡುಕನನ್ನು ಕಠಿಣ ಶಿಕ್ಷೆಗೆ ಒಳಪಡಿಸುವಂತೆ ಜೆಎಂಎಸ್ ಒತ್ತಾಯ

ಹುಬ್ಬಳ್ಳಿಯಲ್ಲಿ ಯುವತಿಯೊಬ್ಬಳನ್ನು ಅಮಾನುಷವಾಗಿ ಕೊಚ್ಚಿ ಕೊಂದು ಹಾಕಿದ ಘಟನೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ತೀವ್ರವಾಗಿ ಖಂಡಿಸಿದೆ. ಅಪರಾಧಿಯನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರಾದರೂ ತಕ್ಷಣವೇ ಕಾನೂನಿನ ಪ್ರಕ್ರಿಯೆ ನಡೆದು ಕೊಲೆಗಡುಕನನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಇಂಥ ಬರ್ಬರ ಘಟನೆಗಳು ನಡೆದಾಗ ಯಾವುದೇ ಕಾರಣಕ್ಕೂ ಶಿಕ್ಷೆ ನೀಡುವಲ್ಲಿ ವಿಳಂಬ ಮಾಡಬಾರದು. ಯುವತಿಯ ಕುಟುಂಬದ ಜೊತೆ ಮಹಿಳಾ ಸಂಘಟನೆ ನಿಲ್ಲುತ್ತದೆ ಎಂದು ಸಂಘಟನೆಯ ರಾಜ್ಯ ಅಧ್ಯಕ್ಷರಾದ ಡಾ ಮೀನಾಕ್ಷಿ ಬಾಳಿ ಮತ್ತು ಪ್ರ. ಕಾರ್ಯದರ್ಶಿ ದೇವಿ ಹೇಳಿದ್ದಾರೆ.

ಯುವಕ ಮತ್ತು ಯುವತಿ ಪರಸ್ಪರ ಪರಿಚಿತರು ಎಂದು ಮಾಧ್ಯಮಗಳ ವರದಿ ಇದೆ. ವಿವಾಹವಾಗಲು ನಿರಾಕರಿಸಿದಳೆಂದು ಕೊಲೆಯಾಗಿದೆ ಎನ್ನಲಾಗಿದೆ. ಇಲ್ಲಿ ಈ ಸಮಾಜದಲ್ಲಿ ಆಳವಾಗಿ ಬೇರೂರಿರುವ ಪುರುಷ ಪ್ರಧಾನ ಪಾಳೆಯಗಾರಿ ಮನೋಭಾವ ಕಣ್ಣಿಗೆ ರಾಚುತ್ತಿದೆ. ಮಹಿಳೆಯೊಬ್ಬಳ ಆಯ್ಕೆ ಸ್ವಾತಂತ್ರ್ಯ ಅಥವಾ ನಿರಾಕರಣೆಯ ಸ್ವಾತಂತ್ರ್ಯವನ್ನು ಒಪ್ಪದ ಈ ತೆರನ ದಾರ್ಷ್ಟ್ಯ ಎಲ್ಲೆಲ್ಲೂ ಕಾಣಸಿಗುತ್ತವೆ. ಇದನ್ನು ಹೀನ ಅಪರಾಧವನ್ನಾಗಿ ಪರಿಗಣಿಸಬೇಕು. ಮತ್ತು ಅಪರಾದಕ್ಕೆ ತಕ್ಕ ಶಿಕ್ಷೆಗಾಗಿ ನಾವು ಒತ್ತಾಯಿಸುತ್ತೇವೆ.

ಆದರೆ ಇದೇ ಸಂದರ್ಭದಲ್ಲಿ ರಾಜಕಾರಣಿಗಳು ಇಂಥ ಘಟನೆಗಳಿಗೆ ಧರ್ಮ ಜಾತಿಗಳ ಬಣ್ಣ ಬಳಿದು ದುರ್ಬಳಕೆ ಮಾಡಿಕೊಳ್ಳಬಾರದು. ಅಪರಾಧವನ್ನು ಅಪರಾಧವೆಂದು ಪರಿಗಣಿಸಿ ಕೊಲೆಗಡುಕನಿಗೆ ತಕ್ಷಣವೇ ಉಗ್ರವಾದ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಾರುವುದೇ ಬಿಜೆಪಿಯ ಮೋದಿ ಕೆಲಸವಾಗಿದೆ... ಪುಟ 9 ರಿಂದ

ಮೋದಿ ಕಾರಣ ಎಂದರು.

ಬಿಜೆಪಿಯಿಂದ ಗೆದ್ದು ಪಾರ್ಲಿಮೆಂಟ್ ನಲ್ಲಿ ಒಂದು ಮಾತೂ ಆಡದವರು ಐದು ವರ್ಷ ಎಂ.ಪಿ. ಆಗಿದ್ದ ಬಿಜೆಪಿಯವರು, ಚಿಕ್ಕಬಳ್ಳಾಪುರ ಕ್ಷೇತ್ರದ ಜನರ ಸಮಸ್ಯೆಗಳ ಬಗ್ಗೆ ಒಂದೇ ಒಂದು ಮಾತೂ ಆಡಲಿಲ್ಲ.

ಕುಡಿಯುವ ನೀರು ಹಾಗೂ ಕೃಷಿಗೆ ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ ಬಿ.ಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳು ಮಾಡಿದ್ದೇನು? ಡಾ. ಪರಮಶಿವಯ್ಯ ವರದಿ ಜಾರಿಗೆ ಕ್ರಮ ಕೈಗೊಳ್ಳಲಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯ ಜನರು ನಮಗೆ ಕುಡಿಯುವ ನೀರಿಲ್ಲ, ನೀರು ಕೊಡಿ ಅಂತ ಸರ್ಕಾರವನ್ನು ಕೇಳಿದರೆ ಶುದ್ಧ ಕುಡಿಯುವ ನೀರನ್ನು ಪೂರೈಸಲಿಲ್ಲ. ಬದಲಾಗಿ ಬೆಂಗಳೂರಿನ ಕೊಳಚೆ ನೀರನ್ನು ಶುದ್ಧೀಕರಿಸಿ ನೀಡುತ್ತೇವೆಂದು ಇದೇ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಹೇಳುತ್ತಿವೆ. ಇದು ನಾಚಿಕೇಗೇಡಿನ ಸಂಗತಿ ಎಂದರು.

ಕಳೆದ ಬಿಜೆಪಿ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಡಾ.ಸುಧಾಕರ್ ಅವರು ಕರೋನಾ ಕಾಲದಲ್ಲಿ ಮಾಡಿದ ಹಗರಣಗಳೇನೆಂಬುದು ಜನತೆಗೆ ಗೊತ್ತಿದೆ. ಚಿಕ್ಕಬಳ್ಳಾಪುರದಲ್ಲಿರುವ ಎಲ್ಲ ಬೆಟ್ಟಗುಡ್ಡಗಳಲ್ಲಿರುವ ಸಂಪತ್ತನ್ನು ದೋಚಿರುವ ಬಗ್ಗೆ ಜನತೆಗೆ ತಿಳಿದಿದೆ ಎಂದು ಕಿಡಿ ಕಾರಿದರು.

ಈ ಹಿನ್ನೆಲೆಯಲ್ಲಿ ನಿರಂತರವಾಗಿ ಜನರ ಪರವಾಗಿ ಹೋರಾಡುತ್ತಿರುವ ಸಿಪಿಐ(ಎಂ) ಪಕ್ಷಕ್ಕೆ ಮತ ನೀಡಿ ಎಂದು ಮನವಿ ಮಾಡಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹುಳ್ಳಿ ಉಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಹನುಮಂತರಾವ್ ಹವಲ್ದಾರ್ ವಂದಿಸಿದರು.

ಯಲಹಂಕದ ಎನ್.ಇ. ಎಸ್ ಬಸ್ ನಿಲ್ದಾಣದಿಂದ ಪ್ರಾರಂಭವಾದ ರೋಡ್ ಶೋ ನಲ್ಲಿ ಕಾರ್ಯಕರ್ತರೊಂದಿಗೆ ತೆರಳಿದ ಸಿಪಿಐ(ಎಂ) ಅಭ್ಯರ್ಥಿ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಮತ ಯಾಚಿಸಿದರು.

ರೋಡ್ ಶೋನಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಟಿ.ಲೀಲಾವತಿ, ಡಿ.ಚಂದ್ರಶೇಖರ್ ಹಾಗೂ ಜಿಲ್ಲಾ ಸಮಿತಿ ಸದಸ್ಯರಾದ ಹನುಮಂತರಾವ್ ಹವಲ್ದಾರ್, ಮಂಗಳಕುಮಾರಿ, ರಾಜಣ್ಣ, ಹರೀಶ್, ಅಲ್ಲದೇ ರೇಣುಕ, ವಿಜಯಲಕ್ಷ್ಮಿ, ಎ.ಹೆಚ್. ವಿನಾಯಕ. ಬಿ.ವಿ, ಖಾಸೀಮ್ ಸಾಬ್, ಪುಷ್ಪಲತ ಸೇರಿದಂತೆ ಹಲವರು ಭಾಗವಹಿಸಿದ್ದರು.

ವರದಿ: ವಿನಾಯಕ ಬಿ.ವಿ.

ಪಿಎಂ ಸೂರ್ಯ ಘರ್ ಯೋಜನೆಯಡಿ 300 ಯೂನಿಟ್ ಉಚಿತ ವಿದ್ಯುತ್......... ಪುಟ 11 ರಿಂದ

ಉತ್ಪನ್ನವಾಗುವ ವಿದ್ಯುತ್ ಕೂಡಾ ನಮ್ಮದೇ ಅಲ್ಲವೇ? ಹಾಗಾದರೆ, ನಾವು 3 ಕೋಟಿ ಮನೆಗಳಿಗೆ ಉಚಿತ ವಿದ್ಯುತ್ ಕೊಡುತ್ತೇವೆ ಎಂಬ ಬಿಜೆಪಿಯವರ ಘೋಷಣೆ ಮೋಸದಿಂದ ಕೂಡಿದ್ದಲ್ಲವೇ?

ಮನೆಯ ಮೇಲ್ಛಾವಣಿಯಲ್ಲಿ ಸೋಲಾರ್ ಸಿಸ್ಟಮ್ ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಈ ಯೋಜನೆಯು 1 kW ಸಿಸ್ಟಮ್‌ಗೆ 30,000 ರೂ. 2 kW ಸಿಸ್ಟಮ್‌ಗಳಿಗೆ 60,000 ರೂ. ಮತ್ತು 3 kW ಅಥವಾ ಹೆಚ್ಚಿನ ಸಿಸ್ಟಮ್‌ಗಳಿಗೆ 78,000 ರೂ. ಸಬ್ಸಿಡಿಯನ್ನು ಒದಗಿಸುತ್ತದೆ. ಅಂದರೆ ವೆಚ್ಚದ ಶೇ. 60 ಅಥವಾ ಶೇ. 40 ರಷ್ಟು ಸಹಾಯಧನ ಕೊಡುತ್ತದೆ. ಇಷ್ಟು ಸಹಾಯಧನ ಕೊಡುವ ಬಿಜೆಪಿ ಸರ್ಕಾರ ತಾನೇ ಪ್ರತಿ ಮನೆಗಳಿಗೆ ಉಚಿತವಾಗಿ 300 ಯೂನಿಟ್ ವಿದ್ಯುತ್ ಕೊಡುತ್ತೇನೆ ಎಂಬಂತೆ ಪ್ರಚಾರ ಮಾಡುತ್ತಿದೆ. ಇದರಿಂದ ಕುಟುಂಬಕ್ಕೆ 15,000 ರೂ. ನಿಂದ 18,000 ರೂ. ಉಳಿತಾಯವಾಗುತ್ತದೆ(?!) ಎಂದು ಕೂಡಾ ಹೇಳುತ್ತಿದೆ.

ಇದಕ್ಕೂ ಮುಂಚಿನಿಂದಲೂ ಸಬ್ಸಿಡಿ ಇದೆ

"ಮೋದಿ ಸರ್ಕಾರ ಇಷ್ಟಾದರೂ ಧನಸಹಾಯ ನೀಡಲು ಮುಂದಾಗಿದೆಯಲ್ಲ, ಇದನ್ನೂ ಟೀಕಿಸುವುದು ಎಷ್ಟು ಸರಿ" ಎನ್ನುತ್ತೀರಾ? ಮನೆಗಳ ಛಾವಣಿಯ ಮೇಲೆ ಸೌರ ಫಲಕಗಳನ್ನು ಅಳವಡಿಸುವವರಿಗೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಸಹಾಯಧನ ಕೊಡುತ್ತಿರುವುದು ಇದೇ ಮೊದಲಲ್ಲ. ಹಲವು ವರ್ಷಗಳಿಂದಲೂ ಇಂತಹ ಯೋಜನೆಗಳಿವೆ. ಇಂದಿಗೂ ಹಲವು ರಾಜ್ಯ ಸರ್ಕಾರಗಳು ಇದಕ್ಕಾಗಿ ಸಹಾಯಧನ ಕೊಡುತ್ತಲೇ ಬಂದಿವೆ. ಕರ್ನಾಟಕವೂ ಸೇರಿದಂತೆ ಇತರೆ ರಾಜ್ಯಗಳೂ ಮೇಲ್ಛಾವಣಿ ಸೌರ ಯೋಜನೆಗಳಿಗೆ ಧನಸಹಾಯ ನೀಡುತ್ತಿವೆ. ನರೇಂದ್ರ ಮೋದಿಯವರೇ 30, ಜುಲೈ 2022 ರಂದು ರೂಫ್‌ಟಾಪ್ ಸೋಲಾರ್‌ಗಾಗಿ ರಾಷ್ಟ್ರೀಯ ಪೋರ್ಟಲ್ ಅನ್ನು ಸಹಾ ಪ್ರಾರಂಭಿಸಿದ್ದಾರೆ.24 ವರ್ಷಗಳ ಹಿಂದಿನಿಂದಲೇ ಸೌರಶಕ್ತಿಯನ್ನು ಉತ್ತೇಜಿಸಲು ಸರ್ಕಾರದ ಉಪಕ್ರಮ

ದೇಶದಲ್ಲಿ ಸೌರಶಕ್ತಿಯನ್ನು ಉತ್ತೇಜಿಸಲು ಭಾರತ ಸರ್ಕಾರವು 2000 ರಿಂದ, ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ, ವಿದ್ಯುತ್ ಕಾಯಿದೆ 2003, ರಾಷ್ಟ್ರೀಯ ವಿದ್ಯುತ್ ನೀತಿ 2005, ಸುಂಕ ನೀತಿ 2006 ಮತ್ತು ಅದರ ತಿದ್ದುಪಡಿ 2011, ಹವಾಮಾನ ಬದಲಾವಣೆಯ ರಾಷ್ಟ್ರೀಯ ಕ್ರಿಯಾ ಯೋಜನೆ 2008, ಸೆಮಿಕಂಡಕ್ಟರ್ 2007 ಮತ್ತು ಕರ್ನಾಟಕ ಸೆಮಿಕಂಡಕ್ಟರ್ ಪಾಲಿಸಿ 2010. ಹಾಗೆಯೇ 14 ರಾಜ್ಯಗಳು ತಮ್ಮ ರಾಜ್ಯದ ನಿರ್ದಿಷ್ಟ ಸೌರ ನೀತಿಗಳನ್ನು ಏಪ್ರಿಲ್ 2014 ರವರೆಗೆ ಘೋಷಿಸಿವೆ.

ಸೌರ ಮೇಲ್ಛಾವಣಿ ಸಬ್ಸಿಡಿ ಯೋಜನೆ

ಸೌರ ಮೇಲ್ಛಾವಣಿ (ರೂಫ್ ಟಾಪ್ ಸೋಲಾರ್ ಪ್ಲಾಂಟ್) ಸಬ್ಸಿಡಿ ಯೋಜನೆ ಮೂಲಕ ದೇಶದಲ್ಲಿ ಸೌರ ಛಾವಣಿಯ ವಿದ್ಯುತ್ ಬಳಕೆಯನ್ನು ಉತ್ತೇಜಿಸಲು ಭಾರತ ಸರ್ಕಾರ ಈ ಮೊದಲೇ ಕ್ರಮಕೈಗೊಂಡಿದೆ. ಕೇಂದ್ರ ಸರ್ಕಾರವು ಸೌರ ಮೇಲ್ಛಾವಣಿ ಸಬ್ಸಿಡಿ ಯೋಜನೆ ಮೂಲಕ ಗ್ರಾಹಕರಿಗೆ ಸೌರ ಮೇಲ್ಛಾವಣಿ ಸ್ಥಾಪನೆಗಳ ಮೇಲೆ ಸಬ್ಸಿಡಿಗಳನ್ನು ಒದಗಿಸುತ್ತದೆ. ಕೇಂದ್ರ ಸರ್ಕಾರವು ಸಾಮಾನ್ಯ ವರ್ಗಗಳಲ್ಲಿ ರಾಜ್ಯಗಳಿಗೆ ಮೇಲ್ಛಾವಣಿಯ ಸೌರ ಸ್ಥಾವರಗಳ ಸ್ಥಾಪನೆಗೆ ಶೇ. 30 ಸಬ್ಸಿಡಿಯನ್ನು ಪಾವತಿಸುತ್ತದೆ. ವಿಶೇಷ ರಾಜ್ಯಗಳಾದ ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ, ಜಮ್ಮು ಮತ್ತು ಕಾಶ್ಮೀರ ಮತ್ತು ಲಕ್ಷದ್ವೀಪಗಳಿಗೆ ಕೇಂದ್ರ ಸರ್ಕಾರವು ಶೇ. 70 ವರೆಗೆ ಸಹಾಯಧನವನ್ನು ನೀಡುತ್ತಾ ಬಂದಿದೆ.

ಸರ್ಕಾರದ ಮೇಲ್ಛಾವಣಿ ಸೌರ ಸ್ಥಾಪನೆಗಳ ಗುರಿಯು ತನ್ನ ವೇಗವನ್ನು ಪಡೆಯಲಿಲ್ಲ. 2022 ರ ಅಂತ್ಯದ ವೇಳೆಗೆ ಸಾಧಿಸಬೇಕಾದ 40 GW ಗುರಿಗೆ ಬದಲಾಗಿ, ಕೇವಲ 5.87 GW ಛಾವಣಿಯ ಸೌರ ಯೋಜನೆಗಳನ್ನು ಸ್ಥಾಪಿಸಲಾಗಿದೆ. ಇದು ಗುರಿಯ ಶೇ. 15ಕ್ಕಿಂತ ಕಡಿಮೆಯಾಗಿದೆ ಎಂದು 2023ರ ಮೇ ತಿಂಗಳಲ್ಲಿ ಇಂಧನ ಸಂಸತ್ ಸ್ಥಾಯಿ ಸಮಿತಿ ಹೇಳಿತ್ತು. ಈ ಕಾರಣದಿಂದ ಸಬ್ಸಿಡಿ ಮೊತ್ತವನ್ನು ಹೆಚ್ಚಿಸಿ ಪ್ರಧಾನ ಮಂತ್ರಿ ಸೂರ್ಯೋದಯ ಯೋಜನೆ ಎಂದು ಹೆಸರಿಡಲಾಗಿದೆ. ●

ಬಿಜೆಪಿ ಜೊತೆ ಶಾಮೀಲು ಆರೋಪ-ಸಿಪಿಐ(ಎಂ) ಖಂಡನೆ

ಕೇರಳದ ಅಲ್ಪ ಸಂಖ್ಯಾತ ಮತದಾರರನ್ನು ಸೆಳೆಯುವ ಉದ್ದೇಶದಿಂದ, ಸಿಪಿಐ(ಎಂ) ಪಕ್ಷ ಸರ್ವಾಧಿಕಾರಿ ಹಾಗೂ ಕೋಮುವಾದಿ ಬಿಜೆಪಿ ಜೊತೆ ಶಾಮೀಲಾಗಿದೆ ಎಂಬ ಸುಳ್ಳು ಆರೋಪ ಹೊರಿಸಿ ರಾಹುಲ್ ಗಾಂಧಿ, ಕರ್ನಾಟಕ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಹಾಗೂ ತೆಲಂಗಾಣದ ಮುಖ್ಯಮಂತ್ರಿ ರೇವಂತರೆಡ್ಡಿ ಅವರು ನೀಡುತ್ತಿರುವ ಹೇಳಿಕೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಜಾರಿಗೊಳಿಸಿ ದೇಶವನ್ನು ಆರ್ಥಿಕ ದಿವಾಳಿತನಕ್ಕೆ ತಳ್ಳಿದ ಕೀರ್ತಿ ಕಾಂಗ್ರೆಸ್ ಪಕ್ಷದ್ದಾಗಿದೆ. ಕಾಂಗ್ರೆಸ್ ತನ್ನ ಆಡಳಿತದ ಅವಧಿಯಲ್ಲಿ ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕದೆ, ಅದರ ಬಗ್ಗೆ ಮೆದು ಧೋರಣೆ ತಾಳುವ ಮೂಲಕ ಅದರ ಬೆಳವಣಿಗೆಗೆ ಸಹಕರಿಸಿದೆ. ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕಲು ಕಾಂಗ್ರೆಸ್ ಬಳಿ ಜನರ ವಿಶ್ವಾಸ ಗಳಿಸುವ ಕಾರ್ಯಕ್ರಮಗಳು ಇಲ್ಲದೇ ಇರುವುದರಿಂದ ಮತ್ತು ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರಕಾರ ಅದರ ಜನಪರ ಕಾರ್ಯಕ್ರಮಗಳಿಂದಾಗಿ ಮತ್ತು ಕೋವಿಡ್ ಸಂದರ್ಭದಲ್ಲಿ ಅದರ ನಿರ್ವಹಣೆ ಜನಮನ್ನಣೆ ಗಳಿಸಿ, ಸತತ ಎರಡನೆ ಬಾರಿಗೆ ಅಧಿಕಾರ ಪಡೆದಿರುವುದು ಕಾಂಗ್ರೆಸ್ ಪಕ್ಷಕ್ಕೆ ಬೆದರಿಕೆಯಾಗಿದೆ. ಸೋಲುವ ಭೀತಿಯಿಂದ ಹೆದರಿದ ಅದು ಆದಾರ ರಹಿತ ಆರೋಪ ಮಾಡಿ ಮತದಾರರಲ್ಲಿ ಸಂಶಯ ಹುಟ್ಟು ಹಾಕುವ ಕೆಲಸದಲ್ಲಿ ತೊಡಗಿದೆ.

ಅವರು ಒಂದು ಕಡೆ ಪ್ರಜಾಪ್ರಭುತ್ವದ ಪರವಾಗಿದ್ದೇನೆಂದು ಹೇಳುವಾಗಲೆ, ಮತ್ತೊಂದು ಕಡೆ ಕೇರಳದ ಮುಖ್ಯಮಂತ್ರಿಯನ್ನು ಕರಾಳ ಕಾಯ್ದೆಗಳಡಿ ಮತ್ತು ಸ್ವಯತ್ತ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿ ಬಂದಿಸುವಂತೆ ಅಪ್ರತ್ಯಕ್ಷವಾಗಿ ಬಿಜೆಪಿಗೆ ಪ್ರಚೋದನೆ ನೀಡುತ್ತಿರುವುದು ಅಕ್ಷಮ್ಯವಾಗಿದೆ.

ಸರ್ವಾಧಿಕಾರದ ವಿರುದ್ದ ಮತ್ತು ಸ್ವಾಯತ್ತ ಸಂಸ್ಥೆಗಳಾದ ಈ.ಡಿ., ಐ.ಟಿ. ಹಾಗೂ ಸಿಬಿಐ ದುರ್ಬಳಕೆ ತಡೆಯಬೇಕು. ಜನಗಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯುಎಪಿಎ, ಪಿ.ಎಮ್.ಎಲ್.ಎ. ಕರಾಳ ಕಾಯ್ದೆಗಳನ್ನು ರದ್ದು ಪಡಿಸಬೇಕೆಂದು ದೇಶದ ಜನ ಹೋರಾಟ ನಡೆಸುತ್ತಿರುವಾಗ, ಕಾಂಗ್ರೆಸ್ ನಡೆ ಅದಕ್ಕೆ ತದ್ವಿರುದ್ದವಾಗಿರುವುದು ಅದು ಅನುಭವದಿಂದ ಪಾಠ ಕಲಿಯಲು ತಯಾರಿಲ್ಲವೆಂಬುದನ್ನು ಹೇಳುತ್ತದೆ ಎಂದು ಸಿಪಿಐ(ಎಂ) ಕಟುವಾಗಿ ವಿಮರ್ಶಿಸಿದೆ. ನರೇಂದ್ರ ಮೋದಿಯವರ ನಡೆಯನ್ನು ಕಾಂಗ್ರೆಸ್ ಅಪೇಕ್ಷಿಸುತ್ತದೆಯೇ? ಕಾಂಗ್ರೆಸ್ ಸ್ಪಷ್ಟಪಡಿಸಲಿ ಎಂದು ಅದು ಆಗ್ರಹಿಸಿದೆ.

ಇಂತಹ ಹೇಳಿಕೆ ನೀಡದಂತೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮಧ್ಯ ಪ್ರವೇಶಿಸಬೇಕು ಮತ್ತು ಕಾಂಗ್ರೆಸ್ ಪಕ್ಷ ಇಂತಹ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಕೈ ಬಿಡಬೇಕು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

ನ್ಯಾಯಾಂಗ ಎದೆಗಾರಿಕೆ ತೋರಿಸಲಿ... ಪುಟ 13 ರಿಂದ

ಸುಮಾರು ಎರಡು ವರ್ಷಗಳಿಂದಲೂ ನ್ಯೂಸ್‌ಕ್ಲಿಕ್ ಪತ್ರಿಕೆಯನ್ನು ಬೆನ್ನಟ್ಟಿದ ಮೋದಿ ಸರ್ಕಾರವು ಪತ್ರಿಕೆಯ ಸ್ಥಾಪಕ ಪ್ರಬೀರ್ ಪುರ್ಕಾಯಸ್ಥ ಅವರ ಕಚೇರಿ ಮತ್ತು ಮನೆಯನ್ನು ಹಣ ದುರುಪಯೋಗದ ಪುರಾವೆಗಾಗಿ ವಾರಗಟ್ಟಲೆ ಶೋಧಿಸಿದ ನಂತರವೂ ಏನೂ ಸಿಗದಿದ್ದಾಗ, ಚೀನಾದ ಸರ್ಕಾರದೊಂದಿಗೆ ಸಂಬಂಧ ಹೊಂದಿರುವ ಅಮೆರಿಕದ ಶ್ರೀಮಂತ ಉದ್ಯಮಿ ನೆವಿಲ್ಲ್ ರಾಯ್ ಸಿಂಘಮ್ ನ್ಯೂಸ್‌ಕ್ಲಿಕ್ ಪತ್ರಿಕೆಯೊಂದಿಗೂ ಸಂಬಂಧ ಹೊಂದಿದ್ದಾರೆ ಎಂಬುದಾಗಿ ಸೂಚಿಸುವ ಒಂದು ಲೇಖನದ (ದಿ ನ್ಯೂಯಾರ್ಕ್ ಟೈಮ್ಸ್, ಆಗಸ್ಟ್ 5, 2023) ಆಧಾರದ ಮೇಲೆ ಪ್ರಬೀರ್ ಪುರ್ಕಾಯಸ್ಥ ಅವರನ್ನು ಜಾಮೀನಿಗೆ ಅವಕಾಶವಿಲ್ಲದ ಯುಎಪಿಎ ಅಡಿಯಲ್ಲಿ ಬಂಧಿಸಲಾಯಿತು. ನ್ಯೂಯಾರ್ಕ್ ಟೈಮ್ಸ್‌ನ ಈ ಲೇಖನದ ಉದ್ದೇಶವೆಂದರೆ, ಚೀನಾದಲ್ಲಿ ನೆಲೆಸಿರುವ ಮತ್ತು ಪ್ರಗತಿಪರ ಅಭಿಪ್ರಾಯಗಳನ್ನು ಹೊಂದಿರುವ ಅಮೇರಿಕನ್ ಬಿಲಿಯನೇರ್ ಉದ್ಯಮಿ ನೆವಿಲ್ಲ್‌ರಾಯ್ ಸಿಂಘಂ ಅವರು ಬೆಳೆಯುತ್ತಿರುವ ಚೀನಾದ ಪ್ರಭಾವವನ್ನು ವಿಶ್ವಾದ್ಯಂತ ಹರಡುತ್ತಾರೆ ಎಂಬ ರೀತಿಯ ಸನ್ನಿವೇಶವನ್ನು ಸೃಷ್ಟಿಸುವುದು ಮತ್ತು ಚೀನಾ ಒಂದು ಜಾಗತಿಕ ಬೆದರಿಕೆ ಎಂಬ ಭ್ರಮೆಯನ್ನು ಸೃಷ್ಟಿಸುವುದು ಮತ್ತು ಇಂಥಹ ಉದ್ದೇಶಕ್ಕಾಗಿ ಅಮೆರಿಕಾದ ಯುದ್ಧ-ವಿರೋಧಿ ಸಂಘಟನೆಗಳೂ ಸೇರಿದಂತೆ ವಿಶ್ವಾದ್ಯಂತ ಹಲವಾರು ಎಡ ಸಂಘಟನೆಗಳಿಗೆ ಸಿಂಘಂ ಹಣ ಒದಗಿಸುತ್ತಾರೆ ಎಂಬುದು. ಈ ಲೇಖನದಲ್ಲಿ, ಸಿಂಘಂ-ಚೀನಾ ಸರ್ಕಾರ ಸಂಬಂಧದ ಬಗ್ಗೆ ಯಾವ ಪುರಾವೆಯನ್ನೂ ಉಲ್ಲೇಖಿಸಿಲ್ಲ ಅಥವಾ ಅದನ್ನು ನೇರವಾಗಿ ಹೇಳಲೂ ಇಲ್ಲ. ಈ ಬಿಲಿಯನೇರ್ ಮಾಡಿದ ಯಾವ ತಪ್ಪನ್ನಾಗಲಿ ಅಥವಾ ಕಾನೂನಿನ ನಿರ್ದಿಷ್ಟ ಉಲ್ಲಂಘನೆಯನ್ನಾಗಲಿ ಉಲ್ಲೇಖಿಸಿಲ್ಲ. ಈ ಲೇಖನದ ಉದ್ದೇಶವೆಂದರೆ, ಅಮೆರಿಕಾದ ಯುದ್ಧ-ವಿರೋಧಿ ಗುಂಪುಗಳ ಮೇಲೆ ಮೆಕಾರ್ಥಿವಾದೀ ಬೇಟೆಯನ್ನು ಆರಂಭಿಸುವುದು (ಅಮೆರಿಕಾದ ಸೆನೆಟರ್ ಜೋಸೆಫ್ ಮೆಕಾರ್ಥಿ 1950ರ ದಶಕದಲ್ಲಿ ಕಮ್ಯೂನಿಸಂ ಹರಡುವ ಭೀತಿಯನ್ನು (Red Scare) ಸೃಷ್ಟಿಸಿದ್ದ ಮತ್ತು ಅದಕ್ಕೆ ಪರಿಹಾರವಾಗಿ, ವ್ಯಕ್ತಿಗಳ ಮೇಲೆ ದೇಶದ್ರೋಹ, ಗೂಢಚರ್ಯೆ, ವಿಧ್ವಂಸಕ ಕೃತ್ಯ ಮುಂತಾದ ಸುಳ್ಳು ಆರೋಪ ಹೊರಿಸಿ, ತನಿಖಾ ಸಂಸ್ಥೆಗಳನ್ನು ಅವರ ಮೇಲೆ ಛೂ ಬಿಟ್ಟು, ಕಿರುಕುಳ ಕೊಡುವ ಮತ್ತು ದಮನಕಾರಿ ಕ್ರಮಗಳನ್ನು ಕೈಗೊಳ್ಳುವ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಯಿತು) ಮತ್ತು ಅದೇ ಸಮಯದಲ್ಲಿ ಈ ವಿಷಯವನ್ನು ಕಾನೂನು ಕ್ರಮ ಎದುರಾಗದ ರೀತಿಯಲ್ಲಿ ಹೇಳುವುದಕ್ಕಾಗಿ (ಅಂದರೆ ಪ್ರಕಟಿಸಿದ ಲೇಖನದಲ್ಲಿ ಸುಳ್ಳುಗಳನ್ನು ಸೇರಿಸದೆ) ಲೇಖನದಲ್ಲಿ ಕೇವಲ ದ್ವಂದ್ವಾರ್ಥ-ಸೂಚ್ಯಾರ್ಥಗಳುಳ್ಳ ಪದ ಬಳಕೆಮಾಡಲಾಗಿದೆ. ಈ ಲೇಖನದಲ್ಲಿ, ಬಿದ್ದು ಹೋಗುವುದು ಎದ್ದು ಹೋಗಲಿ ಎನ್ನುವ ರೀತಿಯಲ್ಲಿ, ನ್ಯೂಸ್‌ಕ್ಲಿಕ್ ಕೂಡ ಈ ಬಿಲಿಯನೇರ್ ನಿಧಿಯ ಫಲಾನುಭವಿ ಎಂಬಂತೆ ಬರೆಯಲಾಗಿದೆ.

ನ್ಯೂಯಾರ್ಕ್ ಟೈಮ್ಸ್ ಹವಣಿಸಿದ ಈ ಯೋಜನೆಗೆ ಫ್ಲೋರಿಡಾದ ಬಲಪಂಥೀಯ ಸೆನೆಟರ್ ಮಾರ್ಕೊ ರೂಬಿಯೊ, ಅಮೆರಿಕಾದಲ್ಲಿರುವ ಒಂಬತ್ತು ಯುದ್ಧ-ವಿರೋಧಿ ಗುಂಪುಗಳ ಬಗ್ಗೆ ತನಿಖೆ ಕೈಗೊಳ್ಳುವಂತೆ ಆಗ್ರಹಿಸಿ ಅಟಾರ್ನಿ ಜನರಲ್ ಅವರಿಗೆ ಬರೆದ ಪತ್ರವು ಒಂದಿಷ್ಟು ವಿಶ್ವಾಸಾರ್ಹತೆಯನ್ನು ಒದಗಿಸಿತಾದರೂ, ತನಿಖೆಯನ್ನು ಆರಂಭಿಸಲು ಸರಿಯಾದ ಆಧಾರವಿಲ್ಲದ ಕಾರಣ ಅದು ಬಿದ್ದುಹೋಯಿತು. ಮೇಲಾಗಿ, ವಿಶ್ವಾದ್ಯಂತ ಮಾನವ ಹಕ್ಕುಗಳನ್ನು ತುಳಿದು ಹಾಕುತ್ತಿರುವ ಅಮೆರಿಕಾದ ಆಡಳಿತವು, ತನ್ನ ದೇಶದೊಳಗಿನ ನಾಗರಿಕರ ಹಕ್ಕುಗಳ ವಿಷಯಕ್ಕೆ ಬಂದಾಗ ಅದು ಹೆಚ್ಚು ಸೂಕ್ಷ್ಮವಾಗಿ ವರ್ತಿಸುತ್ತದೆ. ಆದರೆ, ನ್ಯೂಯಾರ್ಕ್ ಟೈಮ್ಸ್‌ನ ಇದೇ ಲೇಖನವನ್ನು ಭಾರತದಲ್ಲಿ ಪ್ರಬೀರ್ ಮತ್ತು ಅವರ ಇನ್ನೊಬ್ಬ ಸಹೋದ್ಯೋಗಿಯ ಬಂಧನಕ್ಕೆ ಸಮರ್ಥನೆಯಾಗಿ ಬಳಸಲಾಗಿದೆ: ಭಾರತ ಸರ್ಕಾರವು ತನ್ನ ನೂತನ ಫ್ಯಾಸಿಸ್ಟ್ ತೆರನ ನ್ಯಾಯಶಾಸ್ತ್ರದೊಂದಿಗೆ ಸಾಮ್ರಾಜ್ಯಶಾಹಿ ಅಮೆರಿಕಾದ ಸರ್ಕಾರವೂ ಸಹ ಸಮರ್ಥಿಸಲಾಗದ ಕ್ರಮಗಳೊಂದಿಗೆ ಸಾಗಿದೆ. ಪ್ರಬೀರ್ ಅವರನ್ನು ಬಂಧಿಸಿದ ಸುಮಾರು ಆರು ತಿಂಗಳ ನಂತರ ಅವರ ವಿರುದ್ಧ ಸಿದ್ಧಪಡಿಸಿದ ಆರೋಪ-ಪಟ್ಟಿಯಲ್ಲಿ, ನ್ಯೂಯಾರ್ಕ್ ಟೈಮ್ಸ್‌ನ ಕೆಲವು ಕೊಂಕು ನುಡಿಗಳನ್ನು ಆರೋಪಗಳಾಗಿ ಪುನರಾವರ್ತಿಸುವುದರ ಜೊತೆಗೆ, ಸರ್ಕಾರದ ಕೋವಿಡ್ ನೀತಿಯ ಬಗ್ಗೆ ನ್ಯೂಸ್‌ಕ್ಲಿಕ್ ಮಾಡಿದ ಟೀಕೆ-ಟಿಪ್ಪಣಿಗಳನ್ನು ಮತ್ತು ರೈತರ ಆಂದೋಲನಕ್ಕೆ ನ್ಯೂಸ್‌ಕ್ಲಿಕ್ ನೀಡಿದ ಬೆಂಬಲವನ್ನು ಕಾನೂನಿನ ದೃಷ್ಟಿಯಲ್ಲಿ ಒಂದು ಅಪರಾಧವೆಂದು ಪರಿಗಣಿಸಲಾಗಿದೆ!

ಬಿನ್ನಹದ ನಿಲುವು ಬೇಡ

ಹಿಟ್ಲರನ ಆಳ್ವಿಕೆಯ ಆರಂಭದ ದಿನಗಳಲ್ಲಿ ಜರ್ಮನಿಯ ನ್ಯಾಯಾಂಗವು ಹರ್ಮನ್ ಗೋರಿಂಗ್ ಅವರನ್ನು ಒಬ್ಬ ಸಾಕ್ಷಿಯಾಗಿ ಪಾಟಿ ಸವಾಲಿಗೆ ಒಳಪಡಲು ಕರೆಸುವ ಮೂಲಕ ನಾಜಿಗಳು ತೊಡಗಿದ್ದ ಕಾರ್ಯದಲ್ಲಿ ಅಡ್ಡಗಾಲು ಹಾಕಿತು ಮತ್ತು ಅಲ್ಲಿನ ಸಂಸತ್ತಿಗೆ ಬೆಂಕಿ ಹಚ್ಚಿದ ಆರೋಪದಿಂದ ಜಾರ್ಜಿ ಡಿಮಿತ್ರೋವ್ ಅವರನ್ನು ಖುಲಾಸೆಗೊಳಿಸಿತು. ಆದರೆ, ಭಾರತದಲ್ಲಿ ಕಾರ್ಯಾಂಗವು ಸಂವಿಧಾನಕ್ಕೆ ವಿರುದ್ಧವಾಗಿ ಒಂದು ಫ್ಯಾಸಿಸ್ಟ್ ತೆರನ ಮಾರ್ಗವನ್ನು ಮತ್ತು ಸಂವಿಧಾನ ವಿರೋಧಿಯಾದ ಒಂದು ಅಸಹ್ಯ ನ್ಯಾಯಶಾಸ್ತ್ರವನ್ನು ಪ್ರತಿಪಾದಿಸುತ್ತಿರುವಾಗಲೂ, ಭಾರತದ ನ್ಯಾಯಾಂಗವು ಬಗ್ಗೆ, ಇದುವರೆಗೂ, ಹೆಚ್ಚಾಗಿ ಬಿನ್ನಹದ ನಿಲುವನ್ನು ತೋರಿದೆ. ನಿಜ, ಜರ್ಮನಿಯಲ್ಲಿ ಹಿಟ್ಲರ್ ಪ್ರಾಬಲ್ಯ ಹೊಂದುವುದನ್ನು ತಡೆಯುವುದು ನ್ಯಾಯಾಂಗಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ, ಅದು ಅದರ ಕೈಗಳಲ್ಲಿ ಇರಲಿಲ್ಲ. ಆದರೆ, ಅದು ತನ್ನ ಸಾಂವಿಧಾನಿಕ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸ್ವಲ್ಪವಾದರೂ ಎದೆಗಾರಿಕೆಯನ್ನು ತೋರಿಸಿತು. ಭಾರತದ ನ್ಯಾಯಾಂಗವೂ ಇದೇ ರೀತಿಯ ಎದೆಗಾರಿಕೆಯನ್ನು ತೋರಬೇಕೆಂಬುದು ಜನತೆಯ ಬಯಕೆ.

ಭಾರತ ಸಂವಿಧಾನವನ್ನು ಕಾರ್ಯಾಂಗದ ತುಳಿತದಿಂದ ತಡೆಯುವಂತೆ ವಿದೇಶಗಳ ಹಲವಾರು ಗಣ್ಯ ಅಧ್ಯಯನಕಾರರು ಮತ್ತು ಲೇಖಕರು ಭಾರತದ ಪ್ರಭುತ್ವದ ಸಿಬ್ಬಂದಿಗೆ, ವಿಶೇಷವಾಗಿ ನ್ಯಾಯಾಂಗಕ್ಕೆ, ಇತ್ತೀಚೆಗೆ ಮಾಡಿರುವ ಮನವಿಯು ಈ ನಿರ್ದಿಷ್ಟ ಸಂದರ್ಭದಲ್ಲಿ ತುರ್ತಿನದಾಗಿದೆ.

ಇಸ್ರೇಲ್ ಯುದ್ಧವನ್ನು ಇನ್ನಷ್ಟು... ಪುಟ 16 ರಿಂದ

ಖಚಿತಪಡಿಸುವ. ಒಂದು ಮೂಲಭೂತ ಗುರಿಯೊಂದಿಗೆ ಯು.ಎಸ್. ಸರ್ಕಾರವು ಜಾಗತಿಕ ಮಟ್ಟದಲ್ಲಿ ತನ್ನ ಕಾರ್ಯಾಚರಣೆಗಳನ್ನು ನಡೆಸುತ್ತದೆ. ಈ ಕಾರಣಕ್ಕಾಗಿ, ಇಸ್ರೇಲ್ ಅನ್ನು ಯುಎಸ್ ಸಾಮ್ರಾಜ್ಯ ತನ್ನ ಅಮೂಲ್ಯವಾದ ಸಾಧನವೆಂದು ಪರಿಗಣಿಸಿದೆ. ದಶಕಗಳಲ್ಲಿ ಇಸ್ರೇಲ್ ತಾನು ಪಶ್ಚಿಮ ಏಷ್ಯಾದಲ್ಲಿ ಯಾವುದೇ ಪ್ರಗತಿಪರ ಅಥವಾ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಅತ್ಯಂತ ವಿಶ್ವಾಸಾರ್ಹ ಮತ್ತು ಆಕ್ರಮಣಕಾರಿ ಎದುರಾಳಿಯೆಂದು ಸಾಬೀತುಪಡಿಸಿದೆ. ಇಸ್ರೇಲ್ ಈ ಪ್ರದೇಶದ ಹೃದಯಭಾಗದಲ್ಲಿರುವ ಒಂದು ದೊಡ್ಡ ಯು.ಎಸ್. ಮಿಲಿಟರಿ ನೆಲೆಯೇ ಎನ್ನಬಹುದು.

ಹಾಗಾಗಿ ಇಸ್ರೇಲ್ ಮತ್ತು ಇರಾನ್ ನಡುವಿನ, ನೇರ ಮುಖಾಮುಖಿಯಲ್ಲಿ, ಇರಾನಿನ ವಿಜಯವನ್ನು ತಪ್ಪಿಸಲು ಯುಎಸ್ ಸರ್ಕಾರವು ಏನನ್ನಾದರೂ ಮಾಡಲು ಸಿದ್ಧವಿದೆ. ಇರಾನಿನ 1950ರ ದಶಕದ ರಾಷ್ಟ್ರವಾದಿ ಸರಕಾರದ ಕಾಲದಿಂದಲೂ ಇರಾನ್ ಸರಕಾರ ಬದಲಾವಣೆಗೆ ಯುಎಸ್ ನ ಪ್ರಮುಖ ವ್ಯೂಹಾತ್ಮಕ ಗುರಿಯಾಗಿದೆ. ಇಸ್ರೇಲ್ ಮೇಲಿನ ಇಂತಹ ಸಂಘರ್ಷದಲ್ಲಿ ಇರಾನ್ ಮತ್ತು ಅದರ 'ಪ್ರತಿರೋಧದ ಅಕ್ಷದ' ಮಿತ್ರರಾಷ್ಟ್ರಗಳು ಮೇಲುಗೈ ಸಾಧಿಸಿದರೆ, ಅದು ಇಸ್ರೇಲಿ ಸರಕಾರಕ್ಕೆ ಐತಿಹಾಸಿಕ ಸೋಲು ಮಾತ್ರವಲ್ಲದೆ, ಯುಎಸ್ ಸಾಮ್ರಾಜ್ಯಶಾಹಿಗೆ ಚೇತರಿಸಿಕೊಳ್ಳಲು ಸಾಧ್ಯವಾಗದ ಭಾರಿ ಹೊಡೆತವಾಗಿರುತ್ತದೆ.

ಅದೇ ಸಮಯದಲ್ಲಿ, ಪ್ಯಾಲೆಸ್ಟೈನ್ ಜೊತೆಗೆ ಸೌಹಾರ್ದದ ಸಾಮೂಹಿಕ ಚಳುವಳಿಯು ಬಿಡೆನ್ ಆಡಳಿತಕ್ಕೆ ಆಳವಾದ ರಾಜಕೀಯ ಬಿಕ್ಕಟ್ಟನ್ನು ಉಂಟುಮಾಡಿದೆ. ರಾಷ್ಟ್ರವ್ಯಾಪಿ ನಗರಗಳು ಮತ್ತು ಪಟ್ಟಣಗಳಲ್ಲಿ ವಾರದಿಂದ ವಾರಕ್ಕೆ ಅಗಾಧವಾದ ಬೆಂಬಲದ ಪ್ರಬಲ ಅಭಿವ್ಯಕ್ತಿ, ಡೆಮಾಕ್ರಟಿಕ್ ಪ್ರೈಮರಿಗಳಲ್ಲಿ 'ನೋಟಾ' ರೀತಿಯ (ಎಲ್ಲ ಅಭ್ಯರ್ಥಿಗಳನ್ನು ತಿರಸ್ಕರಿಸುವ) ಮತ ಹಾಕುವ ಬೃಹತ್ ಚಳುವಳಿ ಮತ್ತು ವ್ಯವಹಾರವನ್ನು ಸ್ಥಗಿತಗೊಳಿಸುವ ನಿರಂತರ ನಾಗರಿಕ ಅಸಹಕಾರ ಕ್ರಮಗಳು ಬಿಡೆನ್ ಮೇಲೆ ಭಾರಿ ಒತ್ತಡವನ್ನು ಹೇರಿವೆ. ಗಾಜಾದಲ್ಲಿ ನರಮೇಧಕ್ಕೆ ಬಿಡೆನ್ ಅವರ ಬೆಂಬಲವು, ಅವರ ಮರು-ಚುನಾವಣೆಯನ್ನು ಸಹ ಬಲಿ ತೆಗೆದುಕೊಳ್ಳಬಹುದು ಎಂದು ಎಲ್ಲರೂ ಗುರುತಿಸುತ್ತಾರೆ. ಈ ಅಲ್ಪಾವಧಿಯ ಚುನಾವಣಾ ಹಿತಾಸಕ್ತಿಗಳು ಯುಎಸ್ ಸಾಮ್ರಾಜ್ಯದ ದೀರ್ಘಾವಧಿಯ ಹಿತಾಸಕ್ತಿಗಳೊಂದಿಗೆ ಘರ್ಷಣೆಯಾಗುತ್ತಿವೆ ಮತ್ತು ಅಂತಿಮ ಫಲಿತಾಂಶವು ಸಹಜವಾಗಿ ಅನಿಶ್ಚಿತವಾಗಿದೆ. ಆಂದೋಲನವು ಈ ಒತ್ತಡವನ್ನು ಹೆಚ್ಚಿಸಿದರೆ, ಯುಎಸ್-ಇಸ್ರೇಲಿ ಶಿಬಿರದೊಳಗಿನ ಅಪಶ್ರುತಿಯು ಪ್ಯಾಲೇಸ್ಟಿನಿಯನ್ ಹೋರಾಟಕ್ಕೆ ಅನುಕೂಲಕರವಾದ ರೀತಿಯಲ್ಲಿ ತೀವ್ರಗೊಳ್ಳುತ್ತದೆ.

ಇರಾನಿನ ಪ್ರತಿದಾಳಿಯಲ್ಲಿ ಭಾಗಿಯಾಗಿರುವ ಡಜನುಗಟ್ಟಲೆ ಡ್ರೋನುಗಳು ಮತ್ತು ಕ್ಷಿಪಣಿಗಳನ್ನು ಯುಎಸ್ ಮಿಲಿಟರಿ ಹೊಡೆದುರುಳಿಸಿತು ಮತ್ತು ಅದರ ಜೂನಿಯರ್ ಪಾಲುದಾರರಾದ ಬ್ರಿಟನ್ ಮತ್ತು ಫ್ರಾನ್ಸ್ ಸಹ ಕೊಡುಗೆ ನೀಡಿತು. ಈ ಅರ್ಥದಲ್ಲಿ, ಅವರು ತಮ್ಮ ಪ್ರಮುಖ ಶತ್ರುವಾದ ಇರಾನ್ ವಿರುದ್ಧ, ಆ ಪ್ರದೇಶದಲ್ಲಿ ತಮ್ಮ ಪ್ರಮುಖ ಆಸ್ತಿಯಾದ ಇಸ್ರೇಲಿ ವರ್ಣಭೇದ ಆಡಳಿತದ ಸಹಾಯಕ್ಕೆ ಬಂದರು. ಬಿಡೆನ್ ಆಡಳಿತವು ನಂತರ ಇದನ್ನು ಗಮನಾರ್ಹವಾದ ಮಿಲಿಟರಿ ವಿಜಯವೆಂದು ಹೇಳಿಕೊಂಡಿತು. ಹಾಗಾಗಿ ಇಸ್ರೇಲಿನಿಂದ ಯಾವುದೇ "ಪ್ರತೀಕಾರದ ಅಗತ್ಯವಿರುವುದಿಲ್ಲ. ಇಸ್ರೇಲ್ ಅದನ್ನು ಕೈಗೊಂಡರೆ ಬಿಡೆನ್ ಆಡಳಿತವು ಅಂತಹ ಯಾವುದೇ "ಪ್ರತೀಕಾರದ" ಭಾಗವಾಗುವುದಿಲ್ಲ ಎಂದು ಹೇಳಿದರು.

ಪ್ರಾದೇಶಿಕ ಯುದ್ಧವು ಪಶ್ಚಿಮ ಏಷ್ಯಾದ ಜನರಿಗೆ ಸಂಪೂರ್ಣವಾಗಿ ವಿನಾಶಕಾರಿಯಾಗಿದೆ. ಇಸ್ರೇಲ್ ಅಂತಹ ಯುದ್ಧವನ್ನು ಪ್ರಚೋದಿಸುವಲ್ಲಿ ಯಶಸ್ವಿಯಾದರೆ, ಸಾವು, ಸಂಕಟ ಮತ್ತು ವಿನಾಶವು ಬೃಹತ್ ಪ್ರಮಾಣದಲ್ಲಿರುತ್ತದೆ. ಅಂತಹ ಯುದ್ಧದ ಬೆದರಿಕೆಯನ್ನು ತೆಗೆದುಹಾಕಲು - ಗಾಜಾದಲ್ಲಿ ನರಮೇಧವನ್ನು ಕೊನೆಗೊಳಿಸುವುದು. ಇದಕ್ಕಿರುವುದು ಒಂದೇ ಮಾರ್ಗ.

ಪ್ಯಾಲೆಸ್ಟೀನಿಯನ್ನರ ವಿರುದ್ಧ ಇಸ್ರೇಲಿನ ನರಮೇಧದ ಅಮಲು ಮುಂದುವರಿಯುವವರೆಗೆ, ಹೋರಾಟವು ಯಾವುದೇ ಕ್ಷಣದಲ್ಲಿ ಅನಿಯಂತ್ರಿತವಾಗಿ ಉಲ್ಬಣಗೊಳ್ಳಬಹುದು. ಶಾಂತಿಯಲ್ಲಿ ಆಸಕ್ತಿ ಹೊಂದಿರುವ ಎಲ್ಲರೂ ಪ್ಯಾಲೇಸ್ಟಿನಿಯನ್ ಜನರೊಂದಿಗೆ ನಿಲ್ಲಬೇಕು, ಇಸ್ರೇಲಿಗೆ ಎಲ್ಲಾ ಯುಎಸ್ ಸಹಾಯವನ್ನು ಕೊನೆಗೊಳಿಸಬೇಕು ಮತ್ತು ಗಾಜಾ ನರಮೇಧ ಅತಿಕ್ರಮಣಗಳನ್ನು ಕೊನೆಗೊಳಿಸಬೇಕು. ಮತ್ತು ಎರಡು-ದೇಶಗಳ ಪರಿಹಾರವನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಬೇಕು.

NEW No. MAG(3)/NPP/205/2021-2022
JANASHAKTHI KANNADA VARA PATRIKE April 22-28, 2024 Price: Rs. 10/- Date of Publication: 19 April 2024 RNI No. KARKAN /2006/17926 Posted on 23-04-2024
Posted at BG PSO, BG - 560026 **Posted at Periodical Rate -** Rs. 2

ಇಸ್ರೇಲ್ ಯುದ್ಧವನ್ನು ಇನ್ನಷ್ಟು ವ್ಯಾಪಕಗೊಳಿಸುವುದೇ?

ಕಳೆದ ವಾರಾಂತ್ಯದಲ್ಲಿ ಇಸ್ರೇಲಿನ ಒಳಗಿನ ಮಿಲಿಟರಿ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಇರಾನ್ ನಡೆಸಿದ ನೂರಾರು ಡ್ರೋನುಗಳ ಮತ್ತು ಕ್ಷಿಪಣಿಗಳ ಅಲೆಯ ಭಾರೀ ದಾಳಿಯ ನಂತರ, ಇಸ್ರೇಲಿ ಸರ್ಕಾರ ಮತ್ತು ಮಿಲಿಟರಿಯ ಉನ್ನತ ನಾಯಕರು ಇರಾನ್ ಮೇಲೆ ಪ್ರತಿದಾಳಿಯನ್ನು ಪ್ರಾರಂಭಿಸಬೇಕೆ ಅಥವಾ ಬೇಡವೇ ಎಂದು ಚರ್ಚಿಸುತ್ತಿದ್ದಾರೆ. ಇದರಿಂದಾಗಿ ಪಶ್ಚಿಮ ಏಷ್ಯಾದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ತೀವ್ರ ಆತಂಕ ಹರಡಿದೆ, ಪ್ರಶ್ನೆಗಳು ಎದ್ದಿವೆ?. ಇಸ್ರೇಲ್ ಯುದ್ಧವನ್ನು ಇನ್ನಷ್ಟು ವ್ಯಾಪಕಗೊಳಿಸುವುದೇ? ವ್ಯಾಪಕಗೊಳಿಸಿದರೆ ಅದರ ಪರಿಣಾಮಗಳೇನು?

ವಸಂತರಾಜ ಎನ್.ಕೆ.

ಅಂತರರಾಷ್ಟ್ರೀಯ ಮಾಧ್ಯಮಗಳು ಹರಡುತ್ತಿರುವ ಇರಾನ್ ಆಕ್ರಮಣಕಾರಿ ಎಂಬ ಕತೆ ಅಸಂಬದ್ಧ ಮತ್ತು ವಾಸ್ತವಕ್ಕೆ ವಿರುದ್ಧವಾಗಿದೆ. ನಿಜವಾಗಿಯೂ ಇದು ಏಪ್ರಿಲ್ 1 ರಂದು ಸಿರಿಯಾದ ಡಮಾಸ್ಕಸ್ ನಲ್ಲಿರುವ ಇರಾನಿ ರಾಯಭಾರ ಕಚೇರಿಯ ಮೇಲೆ ಇಸ್ರೇಲ್ ಮಾಡಿದ ಬಾಂಬ್ ದಾಳಿಗೆ ಪ್ರತಿದಾಳಿಯಾಗಿತ್ತು. ಎಪ್ರಿಲ್ 1ರ ದಾಳಿ ಇರಾನಿನ ಉನ್ನತ ಮಿಲಿಟರಿ ನಾಯಕರು ಮತ್ತು ಇತರ ಸಿಬ್ಬಂದಿ ಸೇರಿದಂತೆ 12 ಜನರನ್ನು ಹತ್ಯೆ ಮಾಡಿದ ಇಸ್ರೇಲಿನ ಲಜ್ಜೆಗೆಟ್ಟ ಯುದ್ಧದ ಕೃತ್ಯವಾಗಿತ್ತು. ಅಂತರಾಷ್ಟ್ರೀಯ ಕಾನೂನಿನಡಿಯಲ್ಲಿ, ರಾಯಭಾರ ಕಚೇರಿಯನ್ನು ನಿರ್ವಹಿಸುವ ಆಯಾ ದೇಶದ ಸಾರ್ವಭೌಮ ಪ್ರದೇಶವೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಇದು ಇಸ್ರೇಲ್ ಇರಾನ್ ನೆಲದ ಮೇಲೆ ಬಾಂಬ್ ದಾಳಿ ನಡೆಸಿದಂತೆಯೇ. ಇರಾನ್ ಸ್ವ-ರಕ್ಷಣೆಯ ಭಾಗವಾಗಿ ಅದಕ್ಕೆ ಪ್ರತಿಕ್ರಿಯಿಸಲು ಎಲ್ಲಾ ಕಾನೂನು ಮತ್ತು ನೈತಿಕ ಹಕ್ಕನ್ನು ಹೊಂದಿತ್ತು ಮತ್ತು ಅದೇ ಪರಿಸ್ಥಿತಿಯಲ್ಲಿ ಯಾವುದೇ ಇತರ ದೇಶಗಳಂತೆ ವರ್ತಿಸಿತು.



ಮುಂದೆ ಏನಾಗುತ್ತದೆ ಎಂದು ಊಹಿಸಲು ಸಹಜವಾಗಿ ಅಸಾಧ್ಯ. ಆದರೆ ಗಾಜಾನಲ್ಲಿ ಇಸ್ರೇಲಿನ ನರಮೇಧವನ್ನು ವಿರೋಧಿಸುವವರು ಮತ್ತು ಶಾಂತಿಪ್ರಿಯರು ಇನ್ನೊಂದು ವಿನಾಶಕಾರಿ ಪ್ರಾದೇಶಿಕ ಯುದ್ಧವು ಭುಗಿಲೆಳುವುದನ್ನು ಬಯಸುವುದಿಲ್ಲ. ಇದಕ್ಕಾಗಿ ಇದರಲ್ಲಿ ಭಾಗವಹಿಸುತ್ತಿರುವ ಮೂರು ಪ್ರಮುಖ ಪಕ್ಷಗಳು ಈ ಬೆಳವಣಿಗೆಯನ್ನು ಹೇಗೆ ನೋಡುತ್ತವೆ ಎಂದು ಅರ್ಥ ಮಾಡಿಕೊಳ್ಳುವುದು ಅಗತ್ಯ.

ಇಸ್ರೇಲ್

ಗಾಜಾದ ಮೇಲಿನ ದಾಳಿಯ ಯಾವ ಉದ್ದೇಶಗಳನ್ನು– ಗಾಜಾದಲ್ಲಿ ಪ್ಯಾಲೇಸ್ಟಿನಿಯನ್ ಪ್ರತಿರೋಧವನ್ನು ನಾಶಪಡಿಸುವುದು ಮತ್ತು ಇಸ್ರೇಲಿ ಒತ್ತೆಯಾಳುಗಳನ್ನು ಹಿಂದೆ ತರುವುದು–ಸಹ ಸಾಧಿಸಲು ಇಸ್ರೇಲಿಗೆ ಸಾಧ್ಯವಾಗಲಿಲ್ಲ. ನೆತನ್ಯಾಹು ಅವರ ಮೇಲೆ ಆಂತರಿಕ ಒತ್ತಡವು ಹೆಚ್ಚುತ್ತಿದೆ.ಇಸ್ರೇಲಿ ಒತ್ತೆಯಾಳುಗಳನ್ನು ಬಿಡುಗಡೆಗಾಗಿ ಒಪ್ಪಂದವನ್ನು ಮಾಡಲು ವಿಫಲವಾದ ಸರ್ಕಾರವನ್ನು ಖಂಡಿಸುವ ಸಾಮೂಹಿಕ ಪ್ರದರ್ಶನಗಳು ನಡೆಯುತ್ತಿವೆ. ಪ್ರತಿಪಕ್ಷಗಳು ಹೊಸ ಚುನಾವಣೆಯಲ್ಲಿ ನಿರ್ಣಾಯಕವಾಗಿ ಗೆಲ್ಲುತ್ತವೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಯು.ಎಸ್. ನಲ್ಲಿ ಸಹ ಸಾರ್ವಜನಿಕ ಅಭಿಪ್ರಾಯವು ಪ್ಯಾಲೆಸ್ಟೈನ್ ಪರವಾಗಿ ವೇಗವಾಗಿ ಬದಲಾಗುತ್ತಿದ್ದು, ಜೋ ಬಿಡೆನ್ ಗೆ ಚುನಾವಣಾ ಬಿಕ್ಕಟ್ಟನ್ನು ಉಂಟುಮಾಡುವ ಮೂಲಕ ಯು.ಎಸ್. ಜತೆಗಿನ ಇಸ್ರೇಲಿನ ಪ್ರಮುಖ ಅಂತರರಾಷ್ಟ್ರೀಯ ಮೈತ್ರಿ ಸಂಬಂಧ ಅಭೂತಪೂರ್ವ ಒತ್ತಡಕ್ಕೊಳಗಾಗಿದೆ.

ಈ ಸಂದರ್ಭಗಳಲ್ಲಿ, ಬಿಕ್ಕಟ್ಟನ್ನು ಉಲ್ಬಣಗೊಳಿಸುವಲ್ಲಿ ನೆತನ್ಯಾಹು ಅವರ ವೈಯಕ್ತಿಕ ಹಿತಾಸಕ್ತಿ ಅಡಗಿದೆ. ಯುದ್ಧವು ಮುಂದುವರೆದಷ್ಟು ಕಾಲ ಆತ ಪ್ರಧಾನಿಯಾಗಿ ಉಳಿಯುತ್ತಾರೆ. ಇರಾನಿನ ಅಣುಸ್ಥಾವರಗಳ ಮೇಲೆ ದಾಳಿ ಮಾಡುವುದನ್ನೂ ಇಸ್ರೇಲಿ ಮಿಲಿಟರಿ–ರಾಜಕೀಯ ನಾಯಕತ್ವ ಪರಿಶೀಲಿಸುತ್ತಿದೆ ಎಂಬುದು ಅತ್ಯಂತ ಅಪಾಯಕಾರಿ ಉಲ್ಬಣ ಯೋಜನೆಯಾದೀತು. ಯುದ್ಧವು ಕೊನೆಗೊಂಡರೆ, ಚುನಾವಣೆಯು ನಡೆದು ಆತ ಅಧಿಕಾರವನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ ಮತ್ತು ಹಲವಾರು ಕ್ರಿಮಿನಲ್ ಭ್ರಷ್ಟಾಚಾರದ ವಿಚಾರಣೆಗಳನ್ನು ಎದುರಿಸಬೇಕಾಗುತ್ತದೆ. ಪ್ರಾದೇಶಿಕ ಯುದ್ಧವು ವಿಜಯವನ್ನು ಮರುವ್ಯಾಖ್ಯಾನಿಸಲು ಮತ್ತು ಅವರು ಮುನ್ನಡೆಸುವ ಬಲಪಂಥೀಯ ಮೈತ್ರಿಗೆ ಹೆಚ್ಚಿನ ಸಮಯವನ್ನು ಪಡೆಯಲು ಮತ್ತು ಜನಪ್ರಿಯತೆಯನ್ನು ಮರಳಿ ಪಡೆಯಲು ಅನುವು ಮಾಡಿಕೊಡುತ್ತದೆ.

ಪ್ರಾದೇಶಿಕ ಯುದ್ಧವು ಪ್ರಾರಂಭವಾದರೆ, ಯು.ಎಸ್. ಹೊರಗುಳಿಯುವುದು ತುಂಬಾ ಕಷ್ಟವಾಗುತ್ತದೆ. ಪಶ್ಚಿಮ ಏಷ್ಯಾದಲ್ಲಿ ಪ್ರಾಬಲ್ಯ ಸಾಧಿಸುವ ಯು.ಎಸ್. ಪ್ರಯತ್ನಗಳನ್ನು ವಿರೋಧಿಸುವ 'ಪ್ರತಿರೋಧದ ಅಕ್ಷ' ಎಂದು ಕರೆಯಲ್ಪಡುವ ಇರಾನ್ ನೇತೃತ್ವದ ಬಣದೊಂದಿಗೆ ಯು.ಎಸ್. ಸಾಮ್ರಾಜ್ಯಶಾಹಿಯು ದೀರ್ಘಾವಧಿಯ ಯುದ್ಧದಲ್ಲಿ ತೊಡಗಿದೆ. ಇಸ್ರೇಲ್ ಮತ್ತು ಪ್ರತಿರೋಧದ ಅಕ್ಷ' (ಇದು ಪ್ಯಾಲೇಸ್ಟಿನಿಯನ್ ಪ್ರತಿರೋಧದ ಭಾಗಗಳನ್ನು ಒಳಗೊಂಡಿದೆ), ನಡುವಿನ ಮುಖಾಮುಖಿಯಲ್ಲಿ ಪ್ರತಿರೋಧದ ವಿಜಯವು ಈ ಪ್ರದೇಶದಲ್ಲಿ ತನಗೆ ತುಂಬಾ ವಿನಾಶಕಾರಿಯಾಗಿದೆ ಎಂದು ಬಿಡೆನ್ ಸರಕಾರ ಯುದ್ಧದಲ್ಲಿ ಹೆಚ್ಚು ನೇರವಾಗಿ ಭಾಗಿಯಾಗಲೇ ಬೇಕಾಗಬಹುದು.

ಆದಾಗ್ಯೂ, ಇಸ್ರೇಲಿ ಪ್ರಭುತ್ವದೊಳಗೆ ಈ ಕ್ಷಣದಲ್ಲಿ ಉಲ್ಬಣಗೊಳಿಸುವುದರ ವಿರುದ್ಧ ವಾದಿಸುವ ಮತ್ತೊಂದು ವಿಭಾಗವಿದೆ. ಅದರ ತರ್ಕ ಹೀಗಿದೆ. ಗಾಜಾದಲ್ಲಿ ನರಮೇಧ ಪ್ರಾರಂಭವಾದಾಗಿನಿಂದ ನಮ್ಮ ಮಿತ್ರರಾಷ್ಟ್ರಗಳ ನಡುವೆ ನಾವು ಅಂತರರಾಷ್ಟ್ರೀಯ ಮಟ್ಟದಲ್ಲಿ ತೀರಾ ಒಂಟಿಯಾಗಿದ್ದೇವೆ. ಇರಾನಿನ ಆಕ್ರಮಣದ ಬಲಿಪಶುಗಳಾಗಿ ನಟಿಸುವ ಮೂಲಕ ಮತ್ತು ಅದರ ಆಧಾರದ ಮೇಲೆ ಸಹಾಯವನ್ನು ಕೋರುವ ಮೂಲಕ ಜಾಗತಿಕ ಬೆಂಬಲವನ್ನು ಮರಳಿ ಪಡೆಯಲು ಇದು ನಮ್ಮ ಅವಕಾಶವಾಗಿದೆ. ಪ್ರಮುಖ ಪಾಶ್ಚಿಮಾತ್ಯ ಶಕ್ತಿಗಳು ಪ್ರಾದೇಶಿಕ ಯುದ್ಧವನ್ನು ಬಯಸುವುದಿಲ್ಲವಾದ್ದರಿಂದ, ಇರಾನ್ ಮೇಲೆ ಮತ್ತೊಂದು ದಾಳಿ ಪ್ರಾರಂಭಿಸದೆ ಇರಲು ಅವರು ನಮಗೆ ರಿಯಾಯಿತಿಗಳನ್ನು ನೀಡುತ್ತಾರೆ. ಆದ್ದರಿಂದ ಇರಾನಿನ ಮೇಲೆ ಹೊಸ ದಿಗ್ಬಂಧನಗಳು, ಇರಾನಿನ 'ರೆವಲ್ಯೂಷನರಿ ಗಾರ್ಡ್ಸ್ ಕಾರ್ಪ್ಸ್' ಅನ್ನು ಭಯೋತ್ಪಾದಕ ಸಂಘಟನೆ ಎಂದು ಹೆಸರಿಸುವುದು ಮತ್ತು ಮುಖ್ಯವಾಗಿ ಯು.ಎಸ್. ನಿಂದ 14 ಶತಕೋಟಿ ಡಾಲರುಗಳ ಹೊಸ ಸುತ್ತಿನ ಮಿಲಿಟರಿ ಸಹಾಯದಂತಹ ವಿಷಯಗಳನ್ನು ಖಚಿತಪಡಿಸಿಕೊಳ್ಳೋಣ ಎಂಬುದು ಅವರ ವಾದ.



ಇನ್ನೊಂದು ಪ್ರಮುಖ ಅಂಶವೆಂದರೆ ನೆತನ್ಯಾಹು ಅವರು ಸಂಸತ್ತಿನಲ್ಲಿ ಬಹುಮತಕ್ಕಾಗಿ ಬೆಂಬಲವನ್ನು ಅವಲಂಬಿಸಿರುವ ಆಳುವಕೂಟದ ಎರಡು ಫ್ಯಾಸಿಸ್ಟ್ ಪಕ್ಷಗಳು. ನೆತನ್ಯಾಹು "ಅಂತಿಮ ವಿಜಯದವರೆಗೆ ಯುದ್ಧವನ್ನು ಮುಂದುವರೆಸುವ'ಧೋರಣೆಯನ್ನು ಮೃದುಗೊಳಿಸಿದರೆ ಅವರು ಆಳುವ ಕೂಟವನ್ನು ತೊರೆಯುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ಇದು ಸಂಭವಿಸಿದಲ್ಲಿ, ನೆತನ್ಯಾಹು ಅವರ ಸರಕಾರ ಬಿದ್ದು ಕ್ಷಿಪ್ರ ಚುನಾವಣೆಗಳು ನಡೆಯುತ್ತವೆ.

ಇರಾನ್

ರಾಷ್ಟ್ರದ ಸಾರ್ವಭೌಮ ಪ್ರದೇಶವನ್ನು ರಕ್ಷಿಸುವುದು, ಹಾಗೆಯೇ ರಾಷ್ಟ್ರದ ನಾಯಕತ್ವವನ್ನು ಹತ್ಯೆಯಿಂದ ರಕ್ಷಿಸುವುದು, ಯಾವುದೇ ಸರ್ಕಾರದ ಪ್ರಮುಖ ಜವಾಬ್ದಾರಿಯಾಗಿದೆ. ಏಪ್ರಿಲ್ 1 ರಂದು ಇಸ್ರೇಲಿ ಆಕ್ರಮಣವು ಎಷ್ಟು ತೀವ್ರವಾಗಿತ್ತು ಎಂಬುದನ್ನು ಪರಿಗಣಿಸಿ ಇನ್ನೊಂದು ಕೆನ್ನೆಯನ್ನು ತಿರುಗಿಸುವುದು ಇರಾನಿಗೆ ಒಂದು ಆಯ್ಕೆಯಾಗಿರಲಿಲ್ಲ. ಇರಾನ್ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಮರ್ಥವಾಗಿದೆ ಮತ್ತು ಸಿದ್ಧವಾಗಿದೆ ಎಂಬ ಸಂದೇಶವನ್ನು ಕಳುಹಿಸಬೇಕಾಗಿತ್ತು. ಹಾಗೆ ಮಾಡದಿದ್ದರೆ ಇನ್ನೂ ಹೆಚ್ಚಿನ ಇಸ್ರೇಲಿ ದಾಳಿಗಳಿಗೆ ಆಹ್ವಾನ ಕೊಟ್ಟಂತೆ. ಇದು ಇರಾನಿನ ಒಟ್ಟು ಧೋರಣೆ.

ಅದೇ ಸಮಯದಲ್ಲಿ, ಇಸ್ರೇಲಿ ಸರ್ಕಾರದ ನೆತನ್ಯಾಹು ನಾಯಕತ್ವದ ಒಂದು ಬಣವು ಯುದ್ಧವನ್ನು ಉಲ್ಬಣಗೊಳಿಸಲು ಹಾತೊರೆಯುತ್ತಿರುವುದು ಇರಾನ್ ಸರ್ಕಾರಕ್ಕೆ ಗೊತ್ತಿದೆ. ಇರಾನ್ ಅಜಾಗರೂಕತೆಯಿಂದ ನೆತನ್ಯಾಹುಗೆ ಬೇಕಾದ ನೆಪವನ್ನು ನೀಡಲು ಮತ್ತು ಆ ಪ್ರಕ್ರಿಯೆಯಲ್ಲಿ ತನ್ನ ಜನತೆಯನ್ನು ಸಂಪೂರ್ಣ ಯುದ್ಧದ ವಿನಾಶಕ್ಕೆ ಒಳಪಡಿಸಲು ಬಯಸಲಿಲ್ಲ. ಪ್ರತಿಕ್ರಿಯೆಯ ಮಟ್ಟವನ್ನು ಎಚ್ಚರಿಕೆಯಿಂದ ನಿರ್ಣಯಿಸಬೇಕಾಗಿತ್ತು, ಪ್ರತೀಕಾರದ ಪ್ರತಿಕ್ರಿಯೆಯು ಇರಾನಿನ ಸಂಕಲ್ಪವನ್ನು ಪ್ರದರ್ಶಿಸಬೇಕು. ಆದರೆ ತಕ್ಷಣವೇ ಪ್ರಾದೇಶಿಕ ಯುದ್ಧವನ್ನು ಹುಟ್ಟುಹಾಕದಂತಿರಬೇಕಿತ್ತು. ಟ್ರಂಪ್ ಆಡಳಿತವು ಉನ್ನತ ಜನರಲ್ ಖಾಸೆಮ್ ಸೊಲೈಮಾನಿ ಅವರನ್ನು ಹತ್ಯೆ ಮಾಡಿದ ನಂತರ 2020 ರಲ್ಲಿ ಇರಾನ್ ಸರ್ಕಾರವು ಮಾಡಬೇಕಾದ ಕತ್ತಿಯ ಅಲಗಿನ ನಡಿಗೆಗೆ ಇದು ಹೋಲುತ್ತದೆ.

ಇರಾನಿನ ಪ್ರತೀಕಾರವು ಇತ್ತೀಚಿನ ವರ್ಷಗಳಲ್ಲಿ ದೇಶವು ಅಭಿವೃದ್ಧಿ ಹೊಂದಲು ಮಾಡಿರುವ ಹೆಚ್ಚಿನ ಪ್ರಯತ್ನಗಳನ್ನು ಮತ್ತು ಸಾಧಿಸಿರುವ ತಾಂತ್ರಿಕ ಸಾಮರ್ಥ್ಯವನ್ನು ಪ್ರದರ್ಶಿಸಿತು. ವಿಶ್ವ ಇತಿಹಾಸದಲ್ಲಿ ಯಾವುದೇ ಮಿಲಿಟರಿ ಕಾರ್ಯಾಚರಣೆಯು ಇಷ್ಟು ಸಂಖ್ಯೆಯ ಡ್ರೋನುಗಳನ್ನು ಒಳಗೊಂಡಿಲ್ಲ. ಇರಾನಿನ ಸುಧಾರಿತ ಕ್ಷಿಪಣಿಗಳ ಶಸ್ತ್ರಾಗಾರವು ಒಂದು ಪ್ರಮುಖ ನಿರೋಧಕವಾಗಿದೆ. ಈ ಶಸ್ತ್ರಾಗಾರದ ನೆರವಿನಿಂದ ಇಸ್ರೇಲಿನಲ್ಲಿ ಮಾತ್ರವಲ್ಲದೆ ದೇಶದ ಸುತ್ತಲಿರುವ ಪೆಂಟಗನ್ ನೆಲೆಗಳಿಗೆ ಗುರಿಯಿಟ್ಟು ಹಿಮ್ಮೆಟ್ಟಿಸುವ ಸಾಮರ್ಥ್ಯವನ್ನು ಇರಾನ್ ಹೊಂದಿದೆ. ಮುಂದೆ ಮಾಡಬಹುದಾದ ಇಸ್ರೇಲಿ ದಾಳಿಯಲ್ಲಿ ಯುಎಸ್ ಸೇರಿಕೊಂಡರೆ ಅದರ ನೆಲೆಗಳು ದಾಳಿಗೆ ಗುರಿಯಾಗಲಿದೆ ಎಂದು ಇರಾನ್ ಹೇಳಿದೆ. ಇರಾನಿನ ಈ ದಾಳಿ ತಾವು ಗಮನಾರ್ಹ ಪ್ರತಿದಾಳಿಯ ಸಾಧ್ಯತೆಯಿಂದ ಮುಕ್ತರು ಎಂಬ ಇಸ್ರೇಲಿನ ಭ್ರಮೆಯನ್ನು ಒಡೆಯುವ ಪರಿಣಾಮವನ್ನು ಬೀರಿತು. ಪ್ರಪಂಚದ ಇತರ ಭಾಗಗಳಿಂದ ತುರ್ತು ಬೆಂಬಲದ ಅಗತ್ಯವಿರುವ ಪ್ಯಾಲೆಸ್ಟೀನಿಯನ್ನರ ಉತ್ಸಾಹವನ್ನು ಹೆಚ್ಚಿಸಿತು. ಇದು ಇಸ್ರೇಲ್ ಮತ್ತು ಯುಎಸ್ ನ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಕುರಿತು ಅಮೂಲ್ಯವಾದ ಮಾಹಿತಿಯನ್ನು ಬಹಿರಂಗಪಡಿಸಿತು.

ಇರಾನಿನ ಪ್ರತೀಕಾರದಲ್ಲಿ ಅಸಾಧಾರಣ ಶಸ್ತ್ರಾಸ್ತ್ರಗಳನ್ನು ಬಳಸಲಾಗಿದ್ದರೂ, ಅದು ಅನಿರೀಕ್ಷಿತ ದಾಳಿಯಾಗಿರಲಿಲ್ಲ. ರಾಯಭಾರ ಕಚೇರಿಯ ಬಾಂಬ್ ದಾಳಿಯ ಸುಮಾರು ಎರಡು ವಾರಗಳ ನಂತರ ಇದನ್ನು ಪ್ರಾರಂಭಿಸಲಾಯಿತು ಮತ್ತು ಪ್ರತಿದಾಳಿ ಬರುತ್ತಿದೆ ಎಂದು ಪ್ರದೇಶದ ಇತರ ಸರ್ಕಾರಗಳಿಗೆ 72 ಗಂಟೆಗಳ ಸೂಚನೆ ನೀಡಿರುವುದಾಗಿ ಇರಾನ್ ಹೇಳಿಕೊಂಡಿದೆ. ಪ್ರತೀಕಾರದ ರಾತ್ರಿ ಇರಾನ್, ಅವು ಇಸ್ರೇಲಿಗೆ ಆಗಮಿಸುವ ಗಂಟೆಗಳ ಮೊದಲು ಡ್ರೋನುಗಳ ಅಲೆಗಳು ತಮ್ಮ ದಾರಿಯಲ್ಲಿವೆ ಎಂದು ಘೋಷಿಸಿದರು. ಪ್ರಾದೇಶಿಕ ಯುದ್ಧಕ್ಕೆ ಇಸ್ರೇಲಿಗೆ ಯಾವುದೇ ಸಮರ್ಥನೆಯನ್ನು ಒದಗಿಸುವ ದೊಡ್ಡ ಹಾನಿಯನ್ನು ಮಾಡುವುದನ್ನು ತಪ್ಪಿಸುವ ಇರಾನಿನ ಬಯಕೆಯನ್ನು ಇದು ಸೂಚಿಸುತ್ತದೆ ಎಂದು ಅರ್ಥೈಸಬಹುದು.

ಯು.ಎಸ್.

ಇಡೀ ಜಗತ್ತಿನಾದ್ಯಂತ ವಾಲ್ ಸ್ಟ್ರೀಟ್(ಅಥವಾ ಹಣಕಾಸು ಬಂಡವಾಳದ) ಮತ್ತು ಪೆಂಟಗನ್ನಿನ ಪ್ರಾಬಲ್ಯವನ್ನು

ಪುಟ 15 ಕ್ಕೆ

ಈ ಲೇಖನವನ್ನು ಏಪ್ರಿಲ್ 18 ಸಂಜೆ ಅಂದರೆ ಇಸ್ರೇಲ್ ಪ್ರತೀಕಾರ ದಾಳಿ ಮಾಡುವ ಮೊದಲು ಬರೆಯಲಾಗಿತ್ತು. ಆ ನಂತರ ಇಸ್ರೇಲ್ ಕೇಂದ್ರ ಭಾಗದಲ್ಲಿರುವ ಇರಾನಿನ ಪಟ್ಟಣ ಅಫ್ಘಾನ್ ಮೇಲೆ ಸೀಮಿತ ದಾಳಿ ನಡೆಸಿದೆ. ದಾಳಿ ಮಾಡಿದ ಕೆಲವು ಡ್ರೋನ್ ಗಳನ್ನು ಹೊಡೆದುರುಳಿಸಲಾಗಿದ್ದು, ಇದಕ್ಕೆ ಪ್ರತೀಕಾರ ದಾಳಿ ನಡಸುವುದಿಲ್ಲವೆಂದು ಇರಾನ್ ಹೇಳಿದೆ. ಇದಕ್ಕೆ ಮೊದಲು ಇಸ್ರೇಲಿ ಯುದ್ಧ ಸಂಪುಟ ಪ್ರಬಲ ದಾಳಿ ನಡೆಸಲು ಎರಡು ಬಾರಿ ನಿರ್ಣಯ ಮಾಡಿ ಜಾರಿಯನ್ನು ಮುಂದಕ್ಕೆ ಹಾಕಿತ್ತು ಎನ್ನಲಾಗಿದೆ. ಸಂಪುಟದಲ್ಲೇ ತೀವ್ರ ಭಿನ್ನಾಭಿಪ್ರಾಯ ಮತ್ತು ಯು. ಎಸ್ ಒತ್ತಡ ಸೀಮಿತ ದಾಳಿಯ ನಿರ್ಣಯಕ್ಕೆ ಕಾರಣವೆಂದು ಹೇಳಲಾಗಿದೆ. ದಾಳಿ ನಡೆದ ಅಫ್ಘಾನ್ ವಿಮಾನ ಪಡೆಗಳ ಕೇಂದ್ರ, ಅಣು ಸ್ಥಾವರ ಮತ್ತು ಶಸ್ತ್ರಾಸ್ತ್ರ ಕೇಂದ್ರಗಳಿಗೆ ಹತ್ತಿರವಿದ್ದು ತಾನು ಇವನ್ನು ಅಗತ್ಯವಿದ್ದರೆ ಮುಟ್ಟಬಲ್ಲೆ ಎಂಬ ಸಂದೇಶವನ್ನು ಇಸ್ರೇಲ್ ರವಾನಿಸಿದೆ. ಈ ಲೇಖನದ ಬಹುಪಾಲು ನಿರೂಪಣೆಯನ್ನು ಈ ಘಟನೆ ಸಮರ್ಥಿಸಿದೆ ಎನ್ನಬಹುದು.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**